ಅಧ್ಯಾಯ ೫

# ಕೈಗಾರಿಕೆಗಳು

ದಕ್ಷಿಣ ಕನ್ನಡ ಜಿಲ್ಲೆಯು ಕೃಷಿಯ ಜೊತೆಗೆ ಕೈಗಾರಿಕಾ ಕ್ಷೇತ್ರದಲ್ಲೂ ಅಭಿವೃದ್ಧಿ ಹೊಂದುತ್ತಿರುವ ಜಿಲ್ಲೆಯಾಗಿದೆ. ಜಿಲ್ಲೆಯಲ್ಲಿ, ಅಭಿವೃದ್ಧಿ ಹೊಂದಿದ 'ಎ' ವಲಯಕ್ಕೆ ಸೇರಿದ ಯಾವುದೇ ಕೈಗಾರಿಕಾ ಪ್ರದೇಶಗಳಿಲ್ಲದಿದ್ದರೂ, ಅಭಿವೃದ್ಧಿ ಹೊಂದುತ್ತಿರುವ 'ಬಿ' ವಲಯಕ್ಕೆ ಜಿಲ್ಲೆಯ ಎಲ್ಲಾ ಕೈಗಾರಿಕಾ ಪ್ರದೇಶಗಳು ಸೇರಿರುವುದು ಗಮನಾರ್ಹವಾಗಿದೆ. ಜಿಲ್ಲೆಯಲ್ಲಿ, ೧೯೩೧ರ ವೇಳೆಗೆ ಸಾರಿಗೆ ಸೇವೆ ಅಥವಾ ಒಂದಲ್ಲಾ ಒಂದು ಬಗೆಯ ಉತ್ಪಾದನ ಕ್ಷೇತ್ರದಲ್ಲಿ ತೊಡಗಿದ್ದ ೧,೪೦,೧೫೭ ಜನರಿದ್ದರು. ಈ ಸಂಖ್ಯೆ ೧೯೫೧ರಲ್ಲಿ ಶೇ. ೧೬ಕ್ಕೆ ಹೆಚ್ಚಾಗೊಂಡಿತ್ತು. ೧೯೬೧ರಲ್ಲಿ ೨,೦೮,೩೦೩ (ಶೇ.೩೫.೧ರಷ್ಟು) ಮಂದಿ ಕೈಗಾರಿಕೆಗಳಲ್ಲಿ ಕಾರ್ಮಿಕರಾಗಿ ದುಡಿಯುತ್ತಿದ್ದರು. ೧೯೭೧ರಲ್ಲಿದ್ದ ೨,೧೯,೯೪೫ ಸಾಗುವಳಿದಾರರು, ೧,೮೫,೫೯೧ ಕೃಷಿ ಕಾರ್ಮಿಕರನ್ನು ಹೊರತುಪಡಿಸಿ, ಉಳಿದ ಒಟ್ಟು ಕೆಲಸಗಾರರಲ್ಲಿ ಪಶುಪಾಲನೆ, ಅರಣ್ಯ, ಮೀನುಗಾರಿಕೆ, ಬೇಟೆ, ತೋಟಗಾರಿಕೆ, ಅರ್ಚೆಡ್ ಮತ್ತು ಸಂಬಂಧಿಸಿದ ಚಟುವಟಿಕೆಗಳು, ಗಣಿ ಮತ್ತು ಕಲ್ಲುಗಣಿ, ತಯಾರಿಕೆ, ನಿರ್ಮಾಣ, ವ್ಯಾಪಾರ ಮತ್ತು ವಾಣಿಜ್ಯ, ಸಾರಿಗೆ, ಸಂಗ್ರಹಣೆ ಮತ್ತು ಸಂಪರ್ಕ ಹಾಗೂ ಇತರೆ ಸೇವೆಗಳಲ್ಲಿ ೩,೪೩,೨೦೮ ಮಂದಿ (ಶೇ. ೪೫.೮೪) ಕಾರ್ಮಿಕರಾಗಿ ದುಡಿಯುತ್ತಿದ್ದರು. ಜಿಲ್ಲೆಯಲ್ಲಿ ೨೦೦೧ರ ಜನಗಣತಿಯಂತೆ, ದ್ವಿತೀಯ ವಲಯವಾದ ಕೈಗಾರಿಕಾ ಕ್ಷೇತ್ರ ಹಾಗೂ ತೃತೀಯ ವಲಯವಾದ ರೈಲ್ವೆ, ಸಾರಿಗೆ, ಸಂಪರ್ಕ, ಸಂಗ್ರಹಣೆ, ವ್ಯಾಪಾರ, ಹೋಟೆಲ್ ಮತ್ತು ಉಪಹಾರಗೃಹಗಳು, ಬ್ಯಾಂಕು ಮತ್ತು ವಿಮೆ, ಸ್ಥಿರಾಸ್ತಿ ಮತ್ತು ವಸತಿಗೃಹಗಳ ಒಡೆತನ, ಸಾರ್ವಜನಿಕ ಆಡಳಿತ ಹಾಗೂ ಇತರೆ ಸೇವೆಗಳು ಸೇರಿದಂತೆ ಒಟ್ಟು ೫,೯೦,೮೧೭ ಕಾರ್ಮಿಕರು ದುಡಿಯುತ್ತಿದ್ದರು.

ಕೈಗಾರಿಕಾಭಿವೃದ್ಧಿಗೆ, ಕೈಗಾರಿಕೆಗೆ ಅಗತ್ಯವಾದ ಉತ್ತಮ ಪ್ರೋತ್ಸಾಹ ಹಾಗೂ ಪ್ರಾಕೃತಿಕ ಸಂಪನ್ಮೂಲಗಳು ಜಿಲ್ಲೆಯಲ್ಲಿ ಲಭ್ಯವಿದೆ. ದಕ್ಷಿಣ ಕನ್ನಡ ಜಿಲ್ಲೆಯು ಕರಾವಳಿ ಮತ್ತು ಪಶ್ಚಿಮ ಘಟ್ಟಗಳ ನಡುವೆ ಇರುವ ಪ್ರದೇಶವಾಗಿದ್ದು, ಸಮೃದ್ಧ ಮಳೆಯಿಂದಾಗಿ, ಬೆಟ್ಟ ಗುಡ್ಡಗಳಿಂದ ಕೂಡಿದ ಸಂಪದ್ಭರಿತ ಅರಣ್ಯಪ್ರದೇಶವನ್ನು ಹೊಂದಿದೆ. ಇಲ್ಲಿನ ಸಮತಟ್ಟಾದ ವಿಶಾಲವಾದ ತೆಂಗು ಹಾಗೂ ಅಡಿಕೆ ತೋಟಗಳು ಹಲವಾರು ಕೈಗಾರಿಕೆಗಳಿಗೆ ಬೇಕಾದ ಕಚ್ಚಾ ಸಂಪನ್ಮೂಲಗಳನ್ನು ಒದಗಿಸುತ್ತಿವೆ. ಜಿಲ್ಲೆಯು ೬೧ ಕಿ.ಮೀ. ಉದ್ದದ ಕರಾವಳಿ ಪ್ರದೇಶವನ್ನು ಹೊಂದಿದೆ. ಇದು ಜಿಲ್ಲೆಯನ್ನು ರಾಜ್ಯದಲ್ಲಿಯೇ ಶ್ರೀಮಂತ ಜಿಲ್ಲೆಯನ್ನಾಗಿಸಲು ಸಹಕಾರಿಯಾಗಿದೆ. ಆಳವಾದ ಸಮುದ್ರ ಮೀನುಗಾರಿಕೆ ಹಲವು ಮಂದಿಗೆ ಉದ್ಯೋಗ ಒದಗಿಸಿದೆ. ಇದು ಫಿಶ್ ಕ್ಯೂರಿಂಗ್, ಫಿಶ್ ಮೀಲ್ ಅಂಡ್ ಫಿಶ್ ಆಯಿಲ್ ಮುಂತಾದ ಮೀನುಗಾರಿಕೆ ಸಂಬಂಧಿತ ಕೈಗಾರಿಕೆಗಳ ಬೆಳವಣಿಗೆಗೆ ಸಹಕಾರಿಯಾಗಿದೆ. ಇಲ್ಲಿ ಉತ್ತಮ ದರ್ಜೆಯ ಮಣ್ಣು ಸಿಗುವುದರಿಂದ, ಮನೆಕಟ್ಟಲು, ಅವಶ್ಯಕವಾದ ನೆಲಹಾಸುಗಳು, ಪಿಂಗಾಣಿ ಬಿಲ್ಲೆ ಮೊದಲಾದ ಹೆಂಚುಗಳು ಮಂಗಳೂರಿನಲ್ಲಿ ಈಚೆಗೆ ತಯಾರಾಗುತ್ತಿದ್ದರೂ, ಸಾಂಪ್ರದಾಯಿಕವಾಗಿ

ಮಂಗಳೂರು ಹೆಂಚು ಹಿಂದಿನಿಂದಲೂ ಪ್ರಸಿದ್ಧವಾಗಿದೆ. ಇಲ್ಲಿ ತಯಾರಾಗುವ ಎಲ್ಲಾ ವಿಧವಾದ ಟೈಲ್ಸ್‌ಗಳೂ ಸ್ಥಳೀಯವಾಗಿ ಮಾತ್ರವಲ್ಲದೇ, ದೇಶದ ಎಲ್ಲಾ ಭಾಗಗಳಿಗೂ, ನೆರೆಯ ಶ್ರೀಲಂಕಾ ಹಾಗೂ ಪೂರ್ವ ಆಫ್ರಿಕಾ ದೇಶಗಳಿಗೂ ರಫ್ತಾಗುತ್ತಿದೆ. ಎಂ.ಆರ್.ಪಿ.ಎಲ್., ಮಂಗಳೂರು ಫರ್ಟಿಲೈಸರ್ಸ್ ಅಂಡ್ ಕೆಮಿಕಲ್ಸ್, ಕ್ಯಾಂಪ್ಕೋ, ಹಿಂದೂಸ್ಥಾನ ಲಿವರ್ಸ್, ಭಾರತ್ ಪೆಟ್ರೋಲಿಯಂ ಎಲ್.ಪಿ.ಜಿ. ಬಾಟ್ಲಿಂಗ್ ಪ್ಲಾಂಟ್, ಬಿ.ಎ.ಎಸ್.ಎಫ್.(ಲಿ), ಕುದುರೆಮುಖ ಐರನ್ ಓರ್ ಕಂ.(ಲಿ), ಕುದುರೆಮುಖ ಐರನ್ ಓರ್ ಅಂಡ್ ಸ್ಟೀಲ್ ಕಂ. (ಲಿ), ಲಾಮಿನಾ ಸಸ್ಪೆನ್ಷನ್ ಪ್ರಾಡಕ್ಟ್ಸ್ (ಲಿ), ಎಲ್ಫ್ ಗ್ಯಾಸ್ ಇಂಡಿಯಾ (ಲಿ), ಅಲ್ಟ್ರಾಟೆಕ್ ಸಿಮೆಂಟ್ (ಲಿ), ಕೆನರಾ ವುಡ್ ಅಂಡ್ ಪ್ಲೈವುಡ್ ಇಂಡಸ್ಟ್ರೀಸ್, ದಿ. ಕೆನರಾ ವರ್ಕ್ಸ್, ಕೆನರಾ ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ (ಲಿ), ಮಂಗಳೂರು ಟ್ರೇಡಿಂಗ್ ಶಾಪ್ ಅಸೋಷಿಯೇಷನ್, ರುಚಿ ಸೋಯಾ ಇಂಡಸ್ಟ್ರೀಸ್ ಮುಂತಾದ ಆಧುನಿಕ ಉದ್ಯಮಗಳಿಂದಾಗಿ ಜಿಲ್ಲೆಯ ಎಲ್ಲಾ ಭಾಗಗಳಿಗೂ ಉತ್ತಮ ರಸ್ತೆ ಸಂಪರ್ಕ ಜಾಲವಿದೆ. 'ದಿ ವೆಸ್ಟ್ ಕೋಸ್ಟ್ ಹೈವೇ', ಹಾಸನ–ಮಂಗಳೂರು ರೈಲು ಮಾರ್ಗ, ಕೊಂಕಣ ರೈಲು ಮಾರ್ಗ ಹಾಗೂ ಸರ್ವಕಾಲಿಕ ಪಣಂಬೂರ್ ಬಂದರು ಮುಂತಾದವು ಜಿಲ್ಲೆಯಲ್ಲಿ ಕೈಗಾರಿಕೆಗಳ ಅಭಿವೃದ್ಧಿಗೆ ಹಾಗೂ ಜಿಲ್ಲೆಯ ಸರ್ವತೋಮುಖ ಬೆಳವಣಿಗೆಗೆ ನಾಂದಿಯಾಗಿವೆ. ಜಿಲ್ಲೆಯಲ್ಲಿ ೨೦೦೪–೦೫ರಲ್ಲಿ ಜಿಲ್ಲೆಯಲ್ಲಿ ಆರು ಪಾಲಿಟೆಕ್ನಿಕ್ ಕಾಲೇಜುಗಳು, ಆರು ಇಂಜಿನಿಯರಿಂಗ್ ಕಾಲೇಜುಗಳು, ಆರು ವೈದ್ಯಕೀಯ ಕಾಲೇಜುಗಳು, ಆರು ಭಾರತೀಯ ವೈದ್ಯ ಪದ್ಧತಿ ಕಾಲೇಜುಗಳು, ಐದು ದಂತ ವೈದ್ಯ ಕಾಲೇಜುಗಳು, ಎರಡು ಫಾರ್ಮಸಿ ಕಾಲೇಜ್‌ಗಳು, ೧೩ ಫಿಸಿಯೋಥೆರಪಿ ಕಾಲೇಜುಗಳು, ನಾಲ್ಕು ಮೆಡಿಕಲ್ ಲ್ಯಾಬ್ ಟ್ರೈನಿಂಗ್ ಕಾಲೇಜಗಳು, ಒಂದು ರೆಡಿಯೋಗ್ರಾಫಿ ಕಾಲೇಜು, ೨೧ ನರ್ಸಿಂಗ್ ಕಾಲೇಜ್‌ಗಳು, ಒಂದು ವಿಶ್ವವಿದ್ಯಾಲಯ ಒಂದು ಸ್ವಾಯತ್ತ ವಿಶ್ವವಿದ್ಯಾಲಯ (ಸುರತ್ಕಲ್ ಇಂಜಿನಿಯರಿಂಗ್) ಗಳಿವೆ, ಅಲ್ಲದೆ ಹಲವಾರು ಕೈಗಾರಿಕಾ ತರಬೇತಿ ಕಾಲೇಜುಗಳಿದ್ದು, ಇವು ಒದಗಿಸುವ ತಾಂತ್ರಿಕ ಹಾಗೂ ವೃತ್ತಿಪರ ಶಿಕ್ಷಣದಿಂದಾಗಿ ಕೈಗಾರಿಕಾ ಬೆಳವಣಿಗೆಗೆ ಅನುಕೂಲವಾಗಿದೆ.

ಕರ್ನಾಟಕ ಕೈಗಾರಿಕಾಭಿವೃದ್ಧಿ ಪ್ರದೇಶ ಮಂಡಳಿಯು ಜಿಲ್ಲೆಯಲ್ಲಿ ೬೪೧.೭೭ ಎಕರೆ ವಿಸ್ತೀರ್ಣದಲ್ಲಿ ಬೈಕಂಪಾಡಿ ಕೈಗಾರಿಕಾ ಪ್ರದೇಶವನ್ನು ಅಭಿವೃದ್ಧಿಪಡಿಸಿದೆ. ೮೫.೦೨ ಎಕರೆ ವಿಸ್ತೀರ್ಣದಲ್ಲಿ ಕಾರ್ನಾಡ್ ಕೈಗಾರಿಕಾ ಪ್ರದೇಶ ಅಭಿವೃದ್ಧಿಗೊಂಡಿದೆ. ೧೩.೨೮ ಎಕರೆ ವಿಸ್ತೀರ್ಣದಲ್ಲಿ ಪುತ್ತೂರು ಕೈಗಾರಿಕಾ ಪ್ರದೇಶ ಅಭಿವೃದ್ಧಿಗೊಂಡಿದೆ. ಇತ್ತೀಚೆಗೆ ಗಂಜಿಮಠವು (ಮಂಗಳೂರು ತಾಲೂಕು) ಹೊಸ ಕೈಗಾರಿಕಾ ಪ್ರದೇಶವಾಗಿ ೨೦೧ ಎಕರೆ ವಿಸ್ತೀರ್ಣದಲ್ಲಿ ಅಭಿವೃದ್ಧಿಗೊಳ್ಳುತ್ತಿದೆ. ಅಲ್ಲದೆ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ಕಾರ್ಪೋರೇಷನ್ ಅಭಿವೃದ್ಧಿಗೊಳಿಸಿರುವ ಎಯ್ಯಾಡಿ, ಮೂಡಬಿದ್ರೆ ಲಾಯಲಾ, ಬೈಕಂಪಾಡಿ ಮತ್ತು ಕಾರ್ನಾಡ್ ಕೈಗಾರಿಕಾ ವಸಾಹತು ಪ್ರದೇಶಗಳು ಕೈಗಾರಿಕೆಗಳ ಅಭಿವೃದ್ಧಿಗೆ ಸಹಕಾರಿಯಾಗಿವೆ. ಜಿಲ್ಲೆಯಲ್ಲಿ ಬ್ಯಾಂಕಿಂಗ್ ಸೌಲಭ್ಯ ಅತ್ಯುತ್ತಮವಾಗಿದ್ದು, ೨೮೭ ವಾಣಿಜ್ಯ ಬ್ಯಾಂಕುಗಳಿದ್ದು, ಕೈಗಾರಿಕೆಗಳಿಗೆ ಬೇಕಾಗುವ ಅಲ್ಪಾವಧಿ, ಮಧ್ಯಮಾವಧಿ ಸಾಲ ನೀಡಲು ಸಮರ್ಥವಾಗಿವೆ. ರಾಜ್ಯ ಕೈಗಾರಿಕೆ ಇಲಾಖೆ, ದಕ್ಷಿಣ ಕನ್ನಡ ಜಿಲ್ಲಾ ಕೈಗಾರಿಕಾ ಸಹಕಾರಿ ಬ್ಯಾಂಕು (ಲಿ), ಕರ್ನಾಟಕ ರಾಜ್ಯ ಹಣಕಾಸು ನಿಗಮ ಹಾಗೂ ರಾಷ್ಟ್ರೀಯ ಸಣ್ಣ ಕೈಗಾರಿಕೆಗಳ ನಿಗಮ ಮುಂತಾದವು ಕೈಗಾರಿಕೆಗಳಿಗೆ ಸಾಲ ನೀಡಲು ಜಿಲ್ಲೆಯಲ್ಲಿ ಸ್ಥಾಪನೆಯಾಗಿವೆ. ಎಲ್ಲಕ್ಕಿಂತ ಮಿಗಿಲಾಗಿ ಉದ್ಯಮಶೀಲ ವ್ಯಕ್ತಿಗಳಿಗೆ ಸಾಲ ಸೌಲಭ್ಯಗಳನ್ನು ನೀಡುವ ಬ್ಯಾಂಕುಗಳು ಹೇರಳವಾಗಿದ್ದು ಜಿಲ್ಲೆಯ ಕೈಗಾರಿಕಾ ಬೆಳವಣಿಗೆಗೆ ಸಹಕಾರಿಯಾಗಿರುವ ಅಂಶವಾಗಿದೆ.

## ವಿದ್ಯುತ್ ಸರಬರಾಜು

ಪ್ರಾರಂಭದಲ್ಲಿ ಥರ್ಮಲ್ ವಿದ್ಯುತ್ ಉತ್ಪಾದಿಸಲಾಗುತ್ತಿದ್ದು, ಅದನ್ನು ಖಾಸಗಿಯವರ ಅಧೀನಕ್ಕೆ ನೀಡಲಾಗಿತ್ತು. ಜಿಲ್ಲೆಯು ೧೯೫೭ರಲ್ಲಿ ಮಹಾತ್ಮಗಾಂಧಿ ಜಲವಿದ್ಯುತ್ ಕೇಂದ್ರ (ಜೋಗ್) ದಿಂದ ವಿದ್ಯುಚ್ಛಕ್ತಿಯನ್ನು ಪಡೆಯುತ್ತಿತ್ತು. ರಾಜ್ಯಗಳ ಪುನರ್ ವಿಂಗಡಣೆಗೆ ಮೊದಲು ದಕ್ಷಿಣ ಕನ್ನಡ ಜಿಲ್ಲೆಯು ಮದ್ರಾಸ್ ಪ್ರಾಂತ್ಯದ ಆಡಳಿತ ವ್ಯಾಪ್ತಿಗೆ ಸೇರಿತ್ತು. ಆಗ ಈ ಜಿಲ್ಲೆಯಲ್ಲಿದ್ದ ವಿದ್ಯುತ್ ನಿರ್ವಹಣೆಯ ಮುಖ್ಯ ಇಂಜನಿಯರ್ ಅವರು ವಿದ್ಯುತ್ ಖರೀದಿಸಲು ಮೈಸೂರು ಸರ್ಕಾರದೊಂದಿಗೆ ವ್ಯಾಪಾರ ಯೋಜನೆಯನ್ನು ರೂಪಿಸಿದರು. ಅದರ ಅಂದಾಜು ವೆಚ್ಚ ರೂ. ೭೦ ಲಕ್ಷಗಳಾಗಿತ್ತು. ಆದರೆ ಅನಿರೀಕ್ಷಿತ ಕಾರಣಗಳಿಂದಾಗಿ ಇದರ ವೆಚ್ಚ ರೂ. ೬೦ ಲಕ್ಷಗಳಿಗೆ ಹೆಚ್ಚಳಗೊಂಡಿತು. ಆಗ ಮದ್ರಾಸ್ ಸರ್ಕಾರ ಮೈಸೂರು ಸರ್ಕಾರದೊಂದಿಗೆ ಒಪ್ಪಂದ ಮಾಡಿಕೊಂಡಿತು. ಆ ಒಪ್ಪಂದದ ಪ್ರಕಾರ ಜೋಗ್‌ನಲ್ಲಿ ಉತ್ಪಾದಿಸಿದ ವಿದ್ಯುಚ್ಛಕ್ತಿಯನ್ನು ಶಿವಮೊಗ್ಗ ಉಪ–ಕೇಂದ್ರದಲ್ಲಿ ಸಂಗ್ರಹಿಸಲಾಯಿತು. ಮೈಸೂರು ರಾಜ್ಯ ವಿದ್ಯುತ್ ಇಲಾಖೆ ಶಿವಮೊಗ್ಗದಿಂದ ದಕ್ಷಿಣ ಕನ್ನಡ ಜಿಲ್ಲೆಯ ಬಾಲಬೇರ್‌ವರೆಗೆ ಒಂದು ಹೈ ಪವರ್ ಟ್ರಾನ್ಸ್‌ಮಿಷನ್ ಮಾರ್ಗವನ್ನು ರಚಿಸಿತು. ಈ ಉದ್ದೇಶಿತ ವಿದ್ಯುತ್ ಮಾರ್ಗವು ೧೯೫೪ರಲ್ಲಿ ನಿರ್ಮಾಣಗೊಳ್ಳಲು ಮದ್ರಾಸ್ ಸರ್ಕಾರದ ಆಡಳಿತಾತ್ಮಕ ಅನುಮೋದನೆ ದೊರೆತು, ಮಾರ್ಗದ ನಿರ್ಮಾಣ ಕಾರ್ಯವು

ಆರಂಭಗೊಂಡಿತ್ತು. ಮದ್ರಾಸ್ ಸರ್ಕಾರ ಬಾಲಬೇರ್‌ನಿಂದ ೧೧೦ ಕಿ.ವ್ಯಾ. ವಿದ್ಯುತ್ ಮಾರ್ಗವನ್ನು ಹೊಸಂಗಡಿ, ಸಿದ್ದಾಪುರ, ಶಂಕರನಾರಾಯಣ ಮತ್ತು ಹಾಲಾಡಿವರೆಗೂ, ಆ ನಂತರ ಹಿರಿಯಡ್ಕದಿಂದ ಕಾರ್ಕಳ, ಉಡುಪಿ, ಕುಂದಾಪುರ ಮತ್ತು ಮಂಗಳೂರಿನವರೆಗೆ ಅದನ್ನು ವಿಸ್ತರಿಸಿತು. ಮಾರೊಳಿ ಹತ್ತಿರದ ಕುಲಶೇಖರದಲ್ಲಿದ್ದ ೧೧೦ ಕಿ.ವ್ಯಾ. ಸಾಮರ್ಥ್ಯದ ಟ್ರಾನ್ಸ್‌ಫಾರ್ಮರ್‌ಗೆ ಬದಲಾಗಿ ೩೩ ಕಿ.ವ್ಯಾ. ಹಾಗೂ ೧೧ ಕಿ.ವ್ಯಾ. ಸಾಮರ್ಥ್ಯದ ಟ್ರಾನ್ಸ್‌ಫಾರ್ಮರ್‌ಗಳ ಮೂಲಕ ಮಂಗಳೂರು ಮತ್ತು ಅದರ ಸುತ್ತಮುತ್ತಲಿನ ಪ್ರದೇಶಗಳಿಗೆ ವಿದ್ಯುತ್ ನೀಡಲಾಯಿತು. ಜುಲೈ ೧೯೬೬ರಲ್ಲಿ ಜೋಗ್‌ನಿಂದ ಮಂಗಳೂರಿಗೆ ಸುಮಾರು ೧೨೦ ಕಿ.ಮೀ. ಉದ್ದದ 'ಟ್ರಾನ್ಸ್‌ಮಿಷನ್ ಲಿಂಕ್' ಮಾರ್ಗವನ್ನು ಪೂರ್ಣಗೊಳಿಸಲಾಯಿತು.

**"ಡೀಸೆಲ್ ಪವರ್ ಹೌಸ್"** ಆರಂಭದಲ್ಲಿ ಡೀಸೆಲ್ ಪವರ್ ಹೌಸ್ ಉಡುಪಿಯಲ್ಲಿ ಇತ್ತು. ಏಪ್ರಿಲ್ ೨೫ ೧೯೫೫ರಲ್ಲಿ ಈ ಕೇಂದ್ರದಿಂದ ಉಡುಪಿ ಮತ್ತು ಕಾರ್ಕಳದ ನಡುವೆ ೩೩ ಕೆ.ವಿ.ಮಾರ್ಗ ನಿರ್ಮಾಣಗೊಂಡಿತು. ಈ ಕೇಂದ್ರದ ಹೆಚ್ಚುವರಿ ವಿದ್ಯುತ್‌ನ್ನು ಕುಂದಾಪುರಕ್ಕೆ ಸರಬರಾಜು ಮಾಡಲಾಯಿತು. ಅಷ್ಟರಲ್ಲಿ ಮಂಗಳೂರಿಗೆ ಜೋಗ್‌ನಿಂದ ವಿದ್ಯುತ್ ಸರಬರಾಜು ಹೆಚ್ಚಿಸಲು ವಿದ್ಯುತ್ ಸಾಗಣೆ ಮಾರ್ಗವನ್ನು ಉತ್ತಮಪಡಿಸುವಂತೆ ಮದ್ರಾಸ್ ಸರ್ಕಾರಕ್ಕೆ ತುರ್ತು ಮನವಿ ಸಲ್ಲಿಸಲಾಯಿತು. ಪರಿಣಾಮವಾಗಿ ಜೋಗ್‌ನಿಂದ ಹುಲಿಕಲ್ ಘಾಟ್‌ವರೆಗೆ ಒಟ್ಟು ೭೫ ಮೈಲಿ ಉದ್ದದ ವಿದ್ಯುತ್ ಮಾರ್ಗವನ್ನು ಎಳೆದು ೧೯೫೬ರ ಜುಲೈ ಏಳರಂದು ವಿದ್ಯುತ್ ಸರಬರಾಜು ಮಾಡಲಾಯಿತು. ಹೀಗೆ ಮದ್ರಾಸ್ ಮತ್ತು ಮೈಸೂರು ಸರ್ಕಾರಗಳ ಸಹಕಾರ ಮತ್ತು ದೃಢ ನಿರ್ಧಾರದಿಂದಾಗಿ ಜೋಗ್‌ನಂದ ಮಂಗಳೂರಿಗೆ ವಿದ್ಯುತ್ ಸರಬರಾಜು ಸಾಧ್ಯವಾಯಿತು. ಇದರಿಂದಾಗಿ ಮಂಗಳೂರು ಹಾಗೂ ಅದರ ಸುತ್ತಮುತ್ತಲ ಪ್ರದೇಶಗಳಿಗಿದ್ದ ವಿದ್ಯುತ್ ಕೊರತೆಯನ್ನು ತುಂಬಿದಂತಾಯಿತು.

ಜೋಗ್‌ನಿಂದ ದಕ್ಷಿಣ ಕನ್ನಡಕ್ಕೆ ಆರಂಭದ ಪೂರೈಕೆಯಾಗಿ ೨೮೦೦ ಕಿಲೋ ವ್ಯಾಟ್ ವಿದ್ಯುತ್ ಸರಬರಾಜು ಮಾಡುವ ಉದ್ದೇಶವಿತ್ತು. ಇದಾದ ನಂತರದ ಎರಡು ವರ್ಷಗಳಲ್ಲಿ ಅದನ್ನು ೩೫೦೦ ಕಿಲೋ ವ್ಯಾಟ್ಸ್‌ಗಳಿಗೆ ಹೆಚ್ಚಳಗೊಂಡಿತ್ತು. ಇದಾದ ಆರು ವರ್ಷಗಳ ನಂತರ ಅದು ೬೦೦೦ ಕಿಲೋ ವ್ಯಾಟ್‌ಗಳಿಗೆ ಹೆಚ್ಚಳಗೊಂಡಿತು. ಆದರೆ ಹೆಚ್ಚುವರಿ ವಿದ್ಯುತ್ತ್‌ನ್ನು ಜೋಗ್‌ನಲ್ಲಿಯೇ ಕಾಪಾಡಿಕೊಳ್ಳಲಾಯಿತು. ೧೯೭೫ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯು ಗರಿಷ್ಟ ಪ್ರಮಾಣದ ೧೯೬೦ ಕಿಲೋ ವ್ಯಾಟ್ ವಿದ್ಯುತ್ತ್‌ನ್ನು ಪಡೆದುಕೊಂಡಿತ್ತು. ಅದೇ ಸಮಯದಲ್ಲಿ ಮೈಸೂರು ರಾಜ್ಯ ವಿದ್ಯುತ್ ಮಂಡಳಿಯು ವಿದ್ಯುತ್ ಸರಬರಾಜನ್ನು ತನ್ನ ವ್ಯಾಪ್ತಿಗೆ ತೆಗೆದುಕೊಂಡ ಸಂದರ್ಭದಲ್ಲಿ ಜಿಲ್ಲೆಯ ಮಂಗಳೂರು, ಕಾರ್ಕಳ, ಕುಂದಾಪುರ ಹಾಗೂ ಉಡುಪಿ ಪಟ್ಟಣಗಳು ಮಾತ್ರ ವಿದ್ಯುತ್ತ್‌ನ್ನು ಪಡೆದುಕೊಂಡಿದ್ದವು. ಆದ್ದರಿಂದ ಉಳಿದ ಪ್ರಮುಖ ಪಟ್ಟಣಗಳಿಗೂ ವಿದ್ಯುತ್ ಮಾರ್ಗಗಳನ್ನು ವಿಸ್ತರಿಸಲು ಕಾರ್ಯಕ್ರಮ ರೂಪಿಸಲಾಯಿತು. ಜಿಲ್ಲೆಯ ಐದು ಪಟ್ಟಣ ಕೇಂದ್ರಗಳು ವಿದ್ಯುತ್ ಸಂಪರ್ಕವನ್ನು ಪಡೆದುಕೊಂಡ ದಿನಾಂಕವನ್ನು ಮುಂದೆ ನೀಡಲಾಗಿದೆ.

| ಕ್ರಮ ಸಂಖ್ಯೆ | ಪಟ್ಟಣದ ಹೆಸರು | ವಿದ್ಯುತ್ ಸಂಪರ್ಕ ಪಡೆದ ದಿನಾಂಕ |
|---|---|---|
| ೧ | ಕುಂದಾಪುರ | ೧೪–೦೮–೧೯೫೪ |
| ೨ | ಬಂಟ್ವಾಳ | ೨೨–೦೯–೧೯೫೬ |
| ೩ | ಬೆಳ್ತಂಗಡಿ | ೦೧–೦೪–೧೯೬೩ |
| ೪ | ಪುತ್ತೂರು | ೧೮–೧೦–೧೯೫೭ |
| ೫ | ಸುಳ್ಯ | ೦೮–೦೪–೧೯೬೫ |

**ಸೂಚನೆ** : ಕುಂದಾಪುರಕ್ಕೆ ಉಡುಪಿ ಪವರ್ ಹೌಸ್‌ನಂದ ವಿದ್ಯುತ್ ಸರಬರಾಜು ಮಾಡಲಾಗುತ್ತಿತ್ತು.

ಜಿಲ್ಲೆಯಲ್ಲಿ ೧೯೭೫ರಲ್ಲಿ ೨೨೦ ಕಿ.ವ್ಯಾ. ವಿದ್ಯುತ್ ಪ್ರಸರಣ ಮಾರ್ಗ ಹಾಗೂ ೨೦೦ ಎಂ.ವಿ.ಎ. ಸಾಮರ್ಥ್ಯದ ಒಂದು ಉಪಕೇಂದ್ರವನ್ನು ಮರಡ್ಕ ಗ್ರಾಮದಲ್ಲಿ (ಮಂಗಳೂರು ಹತ್ತಿರ) ಸ್ಥಾಪಿಸಿ ಮಂಗಳೂರು ಹಾಗೂ ಅದರ ಇತರೆ ಪ್ರದೇಶಗಳಲ್ಲಿರುವ ಬೃಹತ್ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳಿಗೆ ಹಾಗೂ ಇತರೆ ವರ್ಗದ ಗ್ರಾಹಕರಿಗೆ ವಿದ್ಯುತ್ ಸರಬರಾಜು ಮಾಡಲಾಯಿತು. ಜಿಲ್ಲೆಯಲ್ಲಿ ಎರಡು ೧೧೦/೩೩/೧೨ ಕಿ.ವ್ಯಾ. ಉಪಕೇಂದ್ರಗಳು, ಆರು ೩೩/೧೧ ಕಿ.ವ್ಯಾ. ಉಪಕೇಂದ್ರಗಳಿದ್ದು ಅವುಗಳ ವಿವರ ಕೆಳಗಿನಂತಿವೆ.

| ಕ್ರ.ಸಂ. | ಉಪ ಕೇಂದ್ರವಿರುವ ಸ್ಥಳ | ಸಾಮರ್ಥ್ಯ |
|---|---|---|
| | ೧೧೦/೩೩/೧೨ ಕೆ.ವಿ. ಉಪ ಕೇಂದ್ರಗಳು | |
| ೧. | ಕುಲಶೇಖರ | ೧ ಆಫ್ ೩೬ ಎಂ. ವಿ. ಎ. |
| ೨. | ಹಿರಿಯಡ್ಕ | ೧ ಆಫ್ ೧೬.೫ ಎಂ. ವಿ. ಎ. |
| | ೩೩/೧೧ ಕೆ.ವಿ. ಉಪ ಕೇಂದ್ರಗಳು | |
| | | ೧ ಆಫ್ ೧೦ ಎಂ. ವಿ. ಎ. |
| ೪. | ಕುಂದಾಪುರ | ೧ ಆಫ್ ೦೫ ಎಂ. ವಿ. ಎ. |
| ೫. | ಕಾರ್ಕಳ | ೧ ಆಫ್ ೫ ಎಂ. ವಿ. ಎ. |
| ೬. | ಪುತ್ತೂರು | ೧ ಆಫ್ ೫ ಎಂ. ವಿ. ಎ. |
| ೭. | ಬೆಳ್ತಂಗಡಿ | ೧ ಆಫ್ ೫೦೦ ಕೆ. ವಿ. ಎ. |
| ೮. | ಸುಳ್ಯ | ೧ ಆಫ್ ೨೦೦೦ ಕೆ. ವಿ. ಎ. |

**ಗ್ರಾಮೀಣ ವಿದ್ಯುಚ್ಛಕ್ತಿ**– ಜಿಲ್ಲೆಯಲ್ಲಿ ೧೯೫೬ರಲ್ಲಿ ಜಲವಿದ್ಯುತ್ ಸ್ಥಾಪನೆಯಾದ ಮೇಲೆ ಗ್ರಾಮೀಣ ಪ್ರದೇಶಗಳಿಗೆ ಹಾಗೂ ನೀರಾವರಿ ಪಂಪು ಸೆಟ್ಟುಗಳಿಗೆ ವಿದ್ಯುತ್ ಸರಬರಾಜು ಮಾಡಲಾಯಿತು. ೧೯೬೧ರ ನಂತರ ಗ್ರಾಮಗಳಿಗೆ ಹಾಗೂ ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಸರಬರಾಜನ್ನು ಶೀಘ್ರಗತಿಯಲ್ಲಿ ನೀಡಲಾಯಿತು. ಜಿಲ್ಲೆಯಲ್ಲಿ ೧೯೭೨ರಲ್ಲಿ ತಾಲೂಕುವಾರು ವಿದ್ಯುತ್ತೀಕರಣಗೊಂಡ ಗ್ರಾಮಗಳು ಹಾಗೂ ನೀರಾವರಿ ಪಂಪುಸೆಟ್ಟುಗಳ ವಿವರಗಳನ್ನು ಮುಂದಿನ ಕೋಷ್ಟಕದಲ್ಲಿ ನೀಡಲಾಗಿದೆ.

**ಕೋಷ್ಟಕ ೫.೧ : ೧೯೭೨ರಲ್ಲಿ ತಾಲೂಕುವಾರು ವಿದ್ಯುತ್ ಸಂಪರ್ಕ ಪಡೆದ ಗ್ರಾಮಗಳು ಹಾಗೂ ನೀರಾವರಿ ಪಂಪು ಸೆಟ್ಟುಗಳ ವಿವರ**

| ತಾಲೂಕುಗಳು | ಒಟ್ಟು ಗ್ರಾಮಗಳ ಸಂಖ್ಯೆ | ವಿದ್ಯುತ್ ಸಂಪರ್ಕ ಪಡೆದ ಗ್ರಾಮಗಳ ಸಂಖ್ಯೆ | ಮುಂದೆ ವಿದ್ಯುತ್ ಸಂಪರ್ಕ ಪಡೆಯಬೇಕಾಗಿದ್ದ ಗ್ರಾಮಗಳ ಸಂಖ್ಯೆ | ವಿದ್ಯುತ್ ಸಂಪರ್ಕ ಪಡೆದ ನೀರಾವರಿ ಪಂಪುಸೆಟ್ಟುಗಳ ಸಂಖ್ಯೆ |
|---|---|---|---|---|
| ಬಂಟ್ವಾಳ | ೮೫ | ೬೪ | ೨೧ | ೧,೫೫೯ |
| ಬೆಳ್ತಂಗಡಿ | ೮೩ | ೫೨ | ೩೧ | ೫೦೯ |
| ಮಂಗಳೂರು | ೧೧೪ | ೧೧೪ | – | ೩,೧೮೯ |
| ಪುತ್ತೂರು | ೬೫ | ೪೫ | ೨೦ | ೮೦೨ |
| ಸುಳ್ಯ | ೪೦ | ೩೧ | ೧೫ | ೬೦೩ |
| ಕುಂದಾಪುರ | ೧೦೧ | ೭೧ | ೩೦ | ೨೦೯೩ |
| ಕಾರ್ಕಳ | ೭೯ | ೫೬ | ೨೩ | ೧೩೯೭ |
| ಉಡುಪಿ | ೧೧೫ | ೧೦೯ | ೦೬ | ೪೬೬೫ |
| ಒಟ್ಟು | ೬೮೮ | ೫೪೨ | ೧೪೬ | ೧೪,೮೧೭ |

ಜಿಲ್ಲೆಯಲ್ಲಿ ಯಾವುದೇ ಬೃಹತ್ ನೀರಾವರಿ ಯೋಜನೆಗಳಿಲ್ಲದಿದ್ದರೂ, ರೈತರು ಏತ ನೀರಾವರಿಯ ಮೂಲಕ ವ್ಯವಸಾಯ ಮಾಡುತ್ತಿದ್ದಾರೆ. ಇವರು ಮೊದಲ ಫಸಲನ್ನು ಮಳೆಯಿಂದ ಎರಡನೇ ಹಾಗೂ ಮೂರನೇ ಫಸಲನ್ನು ಮುಖ್ಯವಾಗಿ ಏತ ನೀರಾವರಿಯಿಂದ ವ್ಯವಸಾಯ ಮಾಡುತ್ತಿದ್ದಾರೆ. ಹಾಗಾಗಿ ಜಿಲ್ಲೆಯಲ್ಲಿ ಗ್ರಾಮೀಣ ವಿದ್ಯುತ್ತೀಕರಣಕ್ಕೆ ಎಲ್ಲಿಲ್ಲದ ಪ್ರಾಮುಖ್ಯತೆ ನೀಡಬೇಕಾಗಿ ಬಂದಿದೆ. ಜಿಲ್ಲೆಯ ಸುಳ್ಯ ತಾಲೂಕಿನಲ್ಲಿ ಅನಧಿಕೃತವಾಗಿ ನೀರಾವರಿ ಪಂಪು ಸೆಟ್ಟುಗಳಿಗೆ ವಿದ್ಯುತ್ ಸಂಪರ್ಕ ಹೊಂದಿದ್ದರಿಂದ ಆ ಪ್ರದೇಶವು ಕಪ್ಪು ಪ್ರದೇಶವೆಂದು ಘೋಷಿಸಲ್ಪಟ್ಟಿತ್ತು. ಪ್ರಸ್ತುತ ಈ ಅನಧಿಕೃತ ಪಂಪು ಸೆಟ್ಟುಗಳನ್ನು ಸಕ್ರಮಗೊಳಿಸಲಾಗಿದೆ. ಜಿಲ್ಲೆಯಲ್ಲಿ ಬೆಳೆಗಳ ವಿಧಾನದಲ್ಲಿ ಬದಲಾವಣೆ ಕಂಡು ಬಂದಿದ್ದು, ಮೂರು ಮತ್ತು ನಾಲ್ಕನೇ ಪಂಚವಾರ್ಷಿಕ ಯೋಜನಾವಧಿಗಳಲ್ಲಿ ಹೆಚ್ಚುವರಿ ಆದಾಯ ಪಡೆಯಲು ಏಕದಳ, ದ್ವಿದಳ

ಧಾನ್ಯಗಳು, ಕಬ್ಬು, ತರಕಾರಿಗಳು ಹಾಗೂ ಇತರೆ ಬೆಳೆಗಳನ್ನು ಬೆಳೆಯಲಾಗುತ್ತಿತ್ತು. ಜಿಲ್ಲೆಯಲ್ಲಿ ೧೯೭೨ರಲ್ಲಿ ವಿವಿಧ ರೀತಿಯ ವಿದ್ಯುತ್ ಸೌಲಭ್ಯ ಪಡೆದ ವಿವರ (ಸಂಖ್ಯೆಯಲ್ಲಿ) ಹೀಗಿವೆ. ೫೪,೩೬೭ ಲೈಟಿಂಗ್, ೨,೭೦೧ ಸರ್ವ ವಿದ್ಯುತ್ (ಎ.ಇ.ಹೆಚ್), ೨,೬೦೬ ಕೈಗಾರಿಕೆಗಳು, ೪೦ ಹೈಟೆನ್ಷನ್ ಪವರ್, ೧೪,೮೧೭ ನೀರಾವರಿ ಪಂಪುಸೆಟ್ಟುಗಳು ಹಾಗೂ ೧೪,೫೬೩ ಬೀದಿದೀಪಗಳು ವಿದ್ಯುತ್ ಸೌಲಭ್ಯ ಪಡೆದಿದ್ದವು. ಜಿಲ್ಲೆಯಲ್ಲಿ ವಿದ್ಯುತ್ತಿನ ಬಳಕೆ ೧೯೬೨ರಲ್ಲಿ ೩೬.೫ ಮಿಲಿಯನ್ ಯೂನಿಟ್‌ಗಳು ಹಾಗೂ ೧೯೭೨ರಲ್ಲಿ ೬೮.೨ ಮಿಲಿಯನ್ ಯೂನಿಟ್‌ಗಳಿಗೆ ಹೆಚ್ಚಳಗೊಂಡಿದೆ. ೧೯೬೨ ರಿಂದ ೧೯೭೨ರವರೆಗೆ ಗ್ರಾಹಕರು ಉಪಯೋಗಿಸಿದ ವಿದ್ಯುತ್‌ನ ಪ್ರಮಾಣ ಹೀಗಿದೆ.

| ವರ್ಷ | ಗ್ರಾಹಕರು ಉಪಯೋಗಿಸಿದ ವಿದ್ಯುತ್ (ಮಿಲಿಯನ್ ಯೂನಿಟ್‌ಗಳಲ್ಲಿ) |
|---|---|
| ೧೯೬೨ | ೩೬.೫ |
| ೧೯೬೩ | ೨೮.೩ |
| ೧೯೬೪ | ೪೬.೫ |
| ೧೯೬೫ | ೩೫.೬೨ |
| ೧೯೬೬ | ೩೨.೫೦ |
| ೧೯೬೭ | ೪೧.೫೦ |
| ೧೯೬೮ | ೩೩.೧೫ |
| ೧೯೬೯ | ೪೧.೮೦ |
| ೧೯೭೦ | ೩೮.೭೭ |
| ೧೯೭೧ | ೪೫.೨೨ |
| ೧೯೭೨ | ೬೮.೨೦ |

ಜಿಲ್ಲೆಯಲ್ಲಿ ಮಾರ್ಚ್ ೧೯೮೩ರ ಅಂತ್ಯಕ್ಕೆ ೧೯೭೧ರ ಜನಗಣತಿಯಂತೆ ಇದ್ದ ೬೬೨ ಜನವಸತಿ ಗ್ರಾಮಗಳಲ್ಲಿ, ೫೯೬ ಗ್ರಾಮಗಳು (ಶೇ. ೯೯.೧೬) ವಿದ್ಯುತ್ ಸಂಪರ್ಕ ಪಡೆದಿದ್ದವು. ಇದೇ ಅವಧಿಯಲ್ಲಿ ೨೬,೭೬೪ ನೀರಾವರಿ ಪಂಪುಸೆಟ್ಟುಗಳು ವಿದ್ಯುತ್ ಸಂಪರ್ಕ ಹೊಂದಿದ್ದವು. ಜಿಲ್ಲೆಯಲ್ಲಿ ೧೯೯೫–೯೬ರಲ್ಲಿ ೨,೩೧,೯೬೫ ಗೃಹ ಬಳಕೆದಾರರು, ೧೦,೩೦,೩೮೯ ಸರ್ವ ವಿದ್ಯುತ್ (ಎ.ಇ.ಹೆಚ್) ಬಳಕೆದಾರರು, ೬,೬೮,೨೩೦ ವಾಣಿಜ್ಯ ಬಳಕೆದಾರರು, ೧೩,೬೭೨ ಎಲ್.ಟಿ. ಪವರ್, ೧೮೭ ಹೆಚ್.ಟಿ.ಪವರ್, ೭೦,೦೩೩ ನೀರಾವರಿ ಪಂಪುಸೆಟ್ಟುಗಳು ಹಾಗೂ ೨೪,೪೪೧ ಬೀದಿ ದೀಪಗಳು ವಿದ್ಯುತ್ ಸೌಲಭ್ಯ ಪಡೆದುಕೊಂಡಿದ್ದವು. ೧೯೯೭–೯೮ರಲ್ಲಿ ಆಡಳಿತಾತ್ಮಕ ದೃಷ್ಟಿಯಿಂದ ದಕ್ಷಿಣ ಕನ್ನಡ ಜಿಲ್ಲೆಯನ್ನು ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳೆಂದು ಎರಡು ಜಿಲ್ಲೆಗಳಾಗಿ ವಿಭಜನೆ ಮಾಡಲಾಯಿತು. ವಿಭಜನೆಯ ನಂತರ ಜಿಲ್ಲೆಯಲ್ಲಿ ಲಭ್ಯವಿದ್ದ ವಿದ್ಯುತ್ ಬಳಕೆಯ ವಿವರವನ್ನು ಕೋಷ್ಟಕ ೫.೨ರಲ್ಲಿ ನೀಡಿದೆ.

**ಕೋಷ್ಟಕ ೫.೨ : ೧೯೯೫–೧೯೯೬ ರಿಂದ ೨೦೦೪–೦೫ರವರೆಗೆ ಜಿಲ್ಲೆಯಲ್ಲಿದ್ದ ಪ್ರವರ್ಗವಾರು ವಿದ್ಯುತ್ ಬಳಕೆದಾರರ ವಿವರ**

| ವರ್ಷ | ಗೃಹಬಳಕೆ | ಸರ್ವ ವಿದ್ಯುತ್ | ವಾಣಿಜ್ಯ | ಎಲ್.ಟಿ. ಪವರ್ | ಹೆಚ್.ಟಿ. ಪವರ್ | ಐ.ಪಿ. ಸೆಟ್ಟುಗಳು | ಬೀದಿ ದೀಪಗಳು | ಭಾಗ್ಯ ಜ್ಯೋತಿ/ ಕುಟೀರ ಜ್ಯೋತಿ | ಜಲ ಕಾಮಗಾರಿ | ಒಟ್ಟು (ಬೀದಿ ದೀಪ ಹೊರತು ಪಡಿಸಿ) |
|---|---|---|---|---|---|---|---|---|---|---|
| ೧೯೯೫–೯೬ | ೧,೩೯,೫೧೭ | ೫೫,೨೨೬ | ೩೬,೯೯೨ | ೪,೧೧೭ | ೧೨೯ | ೩೮,೦೪೮ | ೫೮೬ | ೧೦,೫೪೫ | ೧,೦೭೬ | ೨,೮೫,೬೫೦ |
| ೨೦೦೦–೦೧ | ೧,೬೫,೬೮೨ | ೭೮,೫೯೫ | ೨೬,೪೮೯ | ೪,೭೭೪ | ೨೩೬ | ೪೩,೩೬೨ | ೧,೨೦೯ | ೧೨,೩೯೨ | ೧,೬೭೮ | ೩,೩೩,೨೦೮ |
| ೨೦೦೧–೦೨ | ೧,೮೩,೦೧೦ | ೮೬,೯೩೨ | ೪೩,೧೪೯ | ೪,೬೭೭ | ೨೮೫ | ೪೮,೦೬೦ | ೧,೨೯೪ | ೧೬,೦೧೪ | ೨,೦೫೮ | ೩,೮೪,೧೮೫ |
| ೨೦೦೨–೦೩ | ೧,೯೦,೦೯೫ | ೯೩,೪೨೩ | ೪೩,೯೪೦ | ೪,೭೫೩ | ೩೧೮ | ೪೮,೯೬೨ | ೧,೧೦೪ | ೧೫,೪೫೮ | ೨,೨೫೧ | ೩,೯೯,೨೦೦ |
| ೨೦೦೩–೦೪ | ೨,೦೦,೨೦೮ | ೯೯,೮೩೬ | ೪೫,೨೦೧ | ೪,೭೫೨ | ೩೩೧ | ೪೯,೮೪೧ | ೧,೭೧೧ | ೧೨,೬೮೫ | ೨,೫೩೦ | ೪,೧೫,೩೮೪ |
| ೨೦೦೪–೦೫ | ೨,೦೯,೨೨೩ | ೧,೦೫,೭೭೩ | ೪೬,೯೬೨ | ೪,೮೪೭ | ೩೪೪ | ೪೯,೯೨೯ | ೨,೮೬೦ | ೧೨,೨೯೮ | ೨,೬೩೬ | ೪,೩೨,೦೧೨ |

**ಸೂಚನೆ:** ೧೯೯೫–೯೬ರ ಅಂಕಿಅಂಶಗಳು ವಿಭಜಿತ ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಿಸಿದ ಅಂಕಿಅಂಶಗಳಾಗಿವೆ.

### ಜಿ. ಎಂ. ಆರ್ ಎನರ್ಜಿ (ಪ್ರೈ) ಲಿಮಿಟೆಡ್

ಈ ಕಂಪನಿಯನ್ನು ಪ್ರಪಂಚದಲ್ಲೇ ದೊಡ್ಡದಾದ ಹಾಗೂ ಭಾರತದಲ್ಲೆ ಮೊಟ್ಟ ಮೊದಲ ತೇಲುವ ವಿದ್ಯುತ್ ಸ್ಥಾವರ"ವಾಗಿ ೧೯೯೮ರಲ್ಲಿ (Barge Power Plant) ರೂ. ೯೦೦ ಕೋಟಿ ಬಂಡವಾಳದೊಂದಿಗೆ ಸ್ಥಾಪಿಸಲ್ಪಟ್ಟಿತು. ಇದು ಪ್ರತಿದಿನ ೫೨,೮೦,೦೦೦ ಯೂನಿಟ್‌ಗಳನ್ನು ಉತ್ಪಾದಿಸುತ್ತಿದ್ದು, ೨೨೦ ಮೆ.ವ್ಯಾ ವಿದ್ಯುತ್ ಉತ್ಪಾದನಾ ಸಾಮಾರ್ಥ್ಯಹೊಂದಿದೆ. ನಾಫ್ತಾ ಆಧಾರಿತ ವಿದ್ಯುತ್ ಸ್ಥಾವರವಾಗಿ ೨೦೦೧ರ ನವೆಂಬರ್‌ನಲ್ಲಿ ವಾಣಿಜ್ಯ ಉತ್ಪಾದನೆಯನ್ನು ಪ್ರಾರಂಭಿಸಿತು. ಇದರ ಉದ್ದಳತೆ ೧೦೬ M x ೫೫.೨ M x ೬ M ಆಗಿದ್ದು, ಸು. ೧೩,೦೦೦ ಟನ್ ತೂಕವಿದೆ. ಕಂಪನಿಯು ಕರ್ನಾಟಕ ವಿದ್ಯುತ್ ಸರಬರಾಜು ಕಂಪನಿ(ಲಿ)ಯೊಂದಿಗೆ ಏಳುವರ್ಷಗಳ ಅವಧಿಗೆ ವಿದ್ಯುತ್ ಖರೀದಿ ಕರಾರು (PPA) ಮಾಡಿಕೊಂಡಿದೆ. ಕಂಪನಿಯು ೨೦೦೧-೦೨ರಲ್ಲಿ ೯೪೪ ಮೆ. ವ್ಯಾ ವಿದ್ಯುತ್ ಉತ್ಪಾದಿಸಿದ್ದರೆ, ೨೦೦೨-೦೩ರಲ್ಲಿ ೧೧೭೭ ಮೆ. ವ್ಯಾ, ೨೦೦೩-೦೪ರಲ್ಲಿ ೮೭೦ ಮೆ. ವ್ಯಾ ಹಾಗೂ ೨೦೦೪-೦೫ರಲ್ಲಿ ೬೩೩ ಮೆ. ವ್ಯಾ ಉತ್ಪಾದಿಸಿತ್ತು. ಕಂಪನಿಯು ೩೨ ಎಕರೆಯಲ್ಲಿ ಸ್ಥಾಪನೆಗೊಂಡಿದ್ದು, ೫೦ ಮಂದಿಗೆ ಉದ್ಯೋಗಾವಕಾಶ ಕಲ್ಪಿಸಿದೆ ಕಂಪನಿಯು ಪರಿಸರ ಸಂರಕ್ಷಣೆಗಾಗಿ ISO ೧೪೦೦೧ ಪ್ರಮಾಣ ಪತ್ರವನ್ನು ಪಡೆದಿದ್ದರೆ, ಅಕ್ಯುಪೇಶನಲ್ ಹೆಲ್ತ್ ಅಂಡ್ ಸೇಫ್ಟಿ ಅಸೆಸ್‌ಮೆಂಟ್ ಸೀರೀಸ್ (OHSAS)ಗಾಗಿ ೧೮೦೦೧, ಗುಣಮಟ್ಟಕ್ಕಾಗಿ ISO ೯೦೦೧ ಪ್ರಮಾಣ ಪತ್ರಗಳನ್ನು ಪಡೆದುಕೊಂಡಿದೆ.

## ಬೃಹತ್ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳು

### ಮಂಗಳೂರು ರಿಫೈನರಿ ಅಂಡ್ ಪೆಟ್ರೊ ಕೆಮಿಕಲ್ಸ್ ಲಿಮಿಟೆಡ್ (ಎಂ.ಆರ್.ಪಿ.ಎಲ್)

ಈ ಉದ್ಯಮವು ೧೯೮೮ರಲ್ಲಿ ಮಂಗಳೂರಿನಲ್ಲಿ ಸ್ಥಾಪನೆಗೊಂಡಿತ್ತು. ಈ ಕಂಪನಿಯು ಉತ್ಪಾದನೆಯನ್ನು ಎರಡು ಹಂತಗಳಲ್ಲಿ ೨೫-೦೩-೧೯೯೬ ಹಾಗೂ ೧೦-೪-೨೦೦೧ರಲ್ಲಿ ಪ್ರಾರಂಭಿಸಿತು. ಈ ಉದ್ದಿಮೆಯಲ್ಲಿ ರೂ. ೬೭,೪೦೧.೯೧ ಮಿಲಿಯನ್ ಬಂಡವಾಳ ತೊಡಗಿಸಲಾಗಿದೆ. ಕಂಪನಯು ಕಚ್ಚಾ ತೈಲವನ್ನು ಶುದ್ಧೀಕರಿಸಿ ಉತ್ಪಾದಿಸುವ ಪೆಟ್ರೋಲಿಯಂ ಉತ್ಪನ್ನಗಳಾದ ಮೋಟಾರ್ ಸ್ಪಿರಿಟ್, ಡೀಸೆಲ್, ಎಲ್.ಪಿ.ಜಿ, ಎ.ಟಿ.ಎಫ್, ಸೀಮೆಎಣ್ಣೆ, ಕಲ್ಲೆಣ್ಣೆ (Naphtha) ಹಾಗೂ ಶಿಲಾಜಿತ್ತು (Bitumon) ಗಳು ಭಾರತಾದ್ಯಂತ ಮಾರಾಟಗೊಳ್ಳುತ್ತಿವೆ. ಈ ಉದ್ದಿಮೆಯು ೯೭೦ ಮಂದಿಗೆ ಖಾಯಂ ಉದ್ಯೋಗ ನೀಡಿದೆ. ಇದರ ವಾರ್ಷಿಕ ವಹಿವಾಟು ೨೦೦೪-೦೫ರಲ್ಲಿ ಒಟ್ಟು ರೂ. ೨,೦೬,೯೨೫.೫೦ ಮಿಲಿಯನ್‌ಗಳಾಗಿದೆ. ಕಂಪನಿಯು ತನ್ನ ಕಾರ್ಮಿಕರಿಗೆ, ವೇತನಶ್ರೇಣಿ, ರಿಯಾಯಿತಿ ದರದಲ್ಲಿ ಉಪಹಾರ ಮಂದಿರ, ಎಲ್.ಟಿ.ಎ (L.T.A) ಹಾಗೂ ಇತರೆ ಕಾನೂನುಬದ್ಧ ಸೌಲಭ್ಯವನ್ನು ನೀಡುತ್ತಿದೆ. ಪ್ರಸ್ತುತ ೧೧.೭ ದಶಲಕ್ಷ ಟನ್ ಉತ್ಪಾದನಾ ಸಾಮರ್ಥ್ಯ ಹೊಂದಿರುವ ಎಂ.ಆರ್.ಪಿ.ಎಲ್.ನ ಸಾಮರ್ಥ್ಯವನ್ನು ೧೫ ದಶಲಕ್ಷ ಟನ್‌ಗೆ ಹೆಚ್ಚಿಸುವ ಕಾರ್ಯ ನಡೆಯುತ್ತಿದೆ. ಇದಕ್ಕಾಗಿ ರೂ. ೧೬,೦೦೦ ಕೋಟಿ ಬಂಡವಾಳ ತೊಡಗಿಸಲಾಗುವುದು. ನಂತರ ಎಂ.ಆರ್.ಪಿ.ಎಲ್.ನ ಒಟ್ಟು ಉತ್ಪಾದನಾ ಸಾಮರ್ಥ್ಯ ೩೦ ದಶಲಕ್ಷ ಟನ್ ಆಗಲಿದೆ. ಈ ಕಂಪನಿಯು ತನ್ನ ಉತ್ಪನ್ನಗಳಿಗೆ ISO ೯೦೦೧: ೨೦೦೦ ಹಾಗೂ ISO ೧೪೦೦೧ ಧೃಡೀಕರಣ ಪತ್ರ ಪಡೆದಿದೆ. ಪ್ರಸ್ತುತ ಈ ಉದ್ಯಮವು ಆಯಿಲ್ ಅಂಡ್ ನ್ಯಾಚುರಲ್ ಗ್ಯಾಸ್ ಕಾರ್ಪೋರೇಷನ್ ಲಿ., (ONGCL) ಅಂಗಸಂಸ್ಥೆಯಾಗಿ ಕಾರ್ಯ ನಿರ್ವಹಿಸುತ್ತಿದೆ.

### ಮಂಗಳೂರು ಕೆಮಿಕಲ್ಸ್ ಅಂಡ್ ಫರ್ಟಿಲೈಸರ್ಸ್ (ಲಿ) [ಎಂ. ಸಿ. ಎಫ್]

ಇದು ಮಲಬಾರ್ ಕೆಮಿಕಲ್ಸ್ ಮತ್ತು ಫರ್ಟಿಲೈಸರ್ಸ್ (ಲಿ) ಹೆಸರಿನಲ್ಲಿ ೧೯೬೬ರಲ್ಲಿ ಸ್ಥಾಪನೆಗೊಂಡಿತು. ನಂತರ ತನ್ನ ಹೆಸರನ್ನು ಮಂಗಳೂರು ಕೆಮಿಕಲ್ಸ್ ಅಂಡ್ ಫರ್ಟಿಲೈಸರ್ಸ್ (ಲಿ) ಎಂದು ಬದಲಾಯಿಸಿಕೊಂಡಿತು. ಇದು ೩೧೬ಕೋಟಿ ಬಂಡವಾಳ ಹೊಂದಿದೆ. ಅಮೋನಿಯ, ಯೂರಿಯಾ, ಡೈ-ಅಮೋನಿಯಂ ಫಾಸ್ಪೇಟ್, ಕಾಂಪ್ಲೇಕ್ಸ್ ಫರ್ಟಿಲೈಸರ್ಸ್ ೧೬:೨೦:೦ ಮತ್ತು ೨೦:೨೦:೦, ಗ್ರಾನ್ಯುಲೇಟೆಡ್ ಫರ್ಟಿಲೈಸರ್ಸ್, ಎನ್.ಪಿ.ಕೆ. ೧೭:೧೭:೧೭ ಮತ್ತು ಅಮೋನಿಯಂ ಬೈ-ಕಾರ್ಬೋನೇಟ್ ಉತ್ಪನ್ನಗಳನ್ನು ಉತ್ಪಾದಿಸುತ್ತಿದೆ.

ಎಂ.ಸಿ.ಎಫ್.ನಲ್ಲಿ ತಯಾರಾದ ಉತ್ಪನ್ನಗಳನ್ನು ಕರ್ನಾಟಕ, ಕೇರಳ, ತಮಿಳುನಾಡು ಹಾಗೂ ಆಂಧ್ರಪ್ರದೇಶಗಳಲ್ಲಿ ಮಾರಾಟ ಮಾಡಲಾಗುತ್ತಿದೆ. ಇಲ್ಲಿಯ ಉತ್ಪನ್ನಗಳು 'ಮಂಗಳಾ' ಲಾಂಛನದಲ್ಲಿ ತಯಾರಾಗುತ್ತಿವೆ. ಎಂಟು ಕಡೆ ಮಾರಾಟಕ್ಕಾಗಿ ಕ್ಷೇತ್ರ ಕಛೇರಿಗಳನ್ನು ತೆರೆಯಲಾಗಿದೆ. ಇವು ಎಲ್ಲಾ ವಿಧಧ ಮಾರಾಟ ಹಾಗೂ ಮಾರುಕಟ್ಟೆ ಕಾರ್ಯ ಚಟುವಟಿಕೆಗಳ ಜವಾಬ್ದಾರಿಯನ್ನು ಹೊಂದಿರುತ್ತವೆ. ಅಲ್ಲದೆ ಎಲ್ಲಾ ಕಾಲದಲ್ಲೂ 'ಮಂಗಳಾ' ಉತ್ಪನ್ನಗಳು ಲಭ್ಯವಾಗಲು ೧೬೦೦ಕ್ಕೂ ಹೆಚ್ಚು ವ್ಯಾಪಾರಿಗಳು ನಿರತರಾಗಿದ್ದಾರೆ. ಮಿಗಿಲಾಗಿ

'ಮಂಗಳಾ' ಉತ್ಪನ್ನಗಳು ಸಹಕಾರಿ ಸಂಸ್ಥೆ ಹಾಗೂ ಆಗ್ರೋ ಕೇಂದ್ರಗಳಲ್ಲೂ ಲಭ್ಯವಿರುತ್ತವೆ. ಈ ಉತ್ಪನ್ನಗಳ ವಾರ್ಷಿಕ ವಹಿವಾಟು ರೂ. ೮೭೮ ಕೋಟಿ ಗಳಾಗಿರುತ್ತದೆ. ಈ ಉದ್ದಿಮೆಯಲ್ಲಿ ೮೧೧ ಖಾಯಂ ಕಾರ್ಮಿಕರು, ೯೧ ಗುತ್ತಿಗೆ ಆಧಾರದ ಕಾರ್ಮಿಕರು ಹಾಗೂ ೭೮ ದಿನಕೂಲಿ ಕಾರ್ಮಿಕರು, ಹೀಗೆ ಒಟ್ಟು ೯೮೦ ಮಂದಿ ಉದ್ಯೋಗಿ ಗಳಿದ್ದಾರೆ.

ಎಂ.ಸಿ.ಎಫ್. ತನ್ನ ಕಾರ್ಮಿಕರ ಕಲ್ಯಾಣಕ್ಕಾಗಿ ಹಲವಾರು ಸೌಲಭ್ಯಗಳನ್ನು ಕಲ್ಪಸಿಕೊಟ್ಟಿದೆ. ಉಪಹಾರಗೃಹ, ಸಮವಸ್ತ್ರ, ವೈಯಕ್ತಿಕ ಆಕಸ್ಮಿಕ ವಿಮೆ, ಕಾರ್ಮಿಕರ ಕಲ್ಯಾಣ ನಿಧಿ (Benevolent) ಫಂಡ್, ಕಾರ್ಮಿಕರ ಇಡುಗಂಟಿಗೆ ಸಂಬಂಧಿಸಿದ ವಿಮೆ, ಸಾಮೂಹಿಕ ಉಳಿತಾಯಕ್ಕೆ ಸಂಬಂಧಿಸಿದ ವಿಮೆ, ಕಾರ್ಮಿಕರು ಮಾರಕ ರೋಗಗಳಿಗೆ ತುತ್ತಾದರೆ ವೈದ್ಯಕೀಯ ಭತ್ಯೆ, ವಸತಿ ಸಮುಚ್ಛಾಯ, ಸಿಬ್ಬಂದಿಗಳ ಕ್ಲಬ್ (Staff club), ಮಕ್ಕಳಿಗೆ ಶಾಲೆ ಹಾಗೂ ಶಾಲಾ ಬಸ್ಸು ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ಕಂಪನಿಯು ೨೦೦೩–೦೪ರಲ್ಲಿ ತೆರಿಗೆ ಪಾವತಿ ನಂತರ ನಿವ್ವಳ ಲಾಭ ರೂ. ೨೨೩೧.೧೪ ಲಕ್ಷ ರೂ.ಗಳಾಗಿದೆ. ಇದರಿಂದಾಗಿ ಕಂಪನಿಯ ಆರ್ಥಿಕ ಸ್ಥಿತಿ ಉತ್ತಮವಾಗಿದೆ.

**ಕುದುರೆಮುಖ ಐರನ್ ಓರ್ ಕಂಪನಿ ಲಿಮಿಟೆಡ್ (KIOCL)**

ಈ ಕಂಪನಿಯು ಏಪ್ರಿಲ್ ೨, ೧೯೭೬ರಲ್ಲಿ ರೂ ೬೩೪.೫೧ ಕೋಟಿ ಸಂದಾಯವಾದ ಷೇರು ಬಂಡವಾಳದೊಂದಿಗೆ ಸ್ಥಾಪಿತವಾಯಿತು. ಈ ಕಂಪನಿಯು ಶೇ.೧೦೦ರಷ್ಟು ರಫ್ತು ಆಧಾರಿತ ಹಾಗೂ ಸಾಲ ರಹಿತ ಕಂಪನಿಯಾಗಿದೆ. ಇದು ಕಳೆದ ೧೨ ವರ್ಷಗಳಿಂದ ಸರ್ಕಾರದ ಜೊತೆ ಒಡಂಬಡಿಕೆ ಪತ್ರ [Memorandum of understanding (MOU)] ಹೊಂದಿರುತ್ತದೆ. ಇದು ಕಬ್ಬಿಣದ ಅದಿರುಸಾಂದ್ರತೆಯನ್ನು (Concentrate) ಹಾಗೂ ಚಿಕ್ಕ ಚಿಕ್ಕ ಕಬ್ಬಿಣದ ಅದಿರಿನ ಉಂಡೆ (Pellets) ಗಳನ್ನು ತಯಾರಿಸುತ್ತಿದೆ. ೨೦೦೩–೦೪ರಲ್ಲಿದ್ದಂತೆ ಇದು ಕಬ್ಬಿಣದ ಕಚ್ಚಾ ಅದಿರನ್ನು ಜಪಾನ್ (೫,೦೫,೮೦೬ ಮೆ. ಟನ್), ಇರಾನ್ (೨,೫೨,೪೨೧ ಮೆ. ಟನ್ನು) ಹಾಗೂ ಚೀನಾ (೭೬೩,೪೬೪ ಮೆ.ಟನ್ನು) ರಾಷ್ಟ್ರಗಳಿಗೆ ಒಟ್ಟು ೧೫,೨೧,೬೯೧ ಮೆಟ್ರಿಕ್ ಟನ್ನು ರಫ್ತು ಮಾಡಿತ್ತು. ಕಬ್ಬಿಣದ ಅದಿರು ಉಂಡೆಗಳನ್ನು ಚೀನಾ (೨೩,೨೬,೬೫೩ ಮೆ.ಟನ್ನು), ತೈವಾನ್ (೬,೧೧,೯೮೩ ಮೆ.ಟನ್ನು), ಇಸ್ಪಾಟ್ ಇಂಡಸ್ಟ್ರೀಸ್‌ಗೆ (೫,೮೯,೩೧೬ ಮೆ. ಟನ್ನು), ಇಸ್ಪಾಟ್ ಮೆಟಲಿಕ್ಸ್ ಇಂಡಿಯ (ಲಿ)ಗೆ (೩೦,೩೫೩ ಮೆ.ಟನ್ನು), ವಿಕ್ರಮ್ ಇಸ್ಪಾಟ್‌ಗೆ (೫೧,೯೭೮ ಮೆ.ಟನ್ನು), ಕಿಸ್ಕೋಗೆ (೪೮,೯೯೨ ಮೆ.ಟನ್ನು), ಪೆಲೆಟ್‌ಫಿನ್ಸ್ ಅನ್ನು (ಚೀನಾ) (೭೪,೦೭೨ ಮೆ. ಟನ್ನು) ಹಾಗೂ (ಜಪಾನಿಗೆ) (೧೮,೨೧೨ ಮೆ.ಟನ್ನು) ಹೀಗೆ ಒಟ್ಟು ೩೬,೨೭,೫೪೮ ಮೆಟ್ರಿಕ್ ಟನ್ ಪಿಲೆಟ್ಸ್‌ಗಳನ್ನು ರಫ್ತು ಮಾಡಿತ್ತು. ಈ ಉದ್ಯಮವು ೨೦೦೫ರ ಮಾರ್ಚ್ ಅಂತ್ಯದಲ್ಲಿದ್ದಂತೆ ೧,೨೯೭ ಕಾರ್ಮಿಕರು, ೪೫೮ ಕಾರ್ಯನಿರ್ವಾಹಕ ಮಂಡಳಿ ಹಾಗೂ ೧೮೭ ಮೇಲ್ವಿಚಾರಕರು ಸೇರಿದಂತೆ ಒಟ್ಟು ೧,೯೩೨ ಮಂದಿ ಉದ್ಯೋಗಿಗಳಿದ್ದರು. ಕಂಪನಿಯು ತನ್ನ ಉದ್ಯೋಗಿಗಳಿಗೆ ಟೌನ್‌ಶಿಪ್, ಆಸ್ಪತ್ರೆ, ಶಾಲೆ, ಮನರಂಜನೆ, ಮನೆ ಸಾಲ, ಮಕ್ಕಳಿಗೆ ವಿದ್ಯಾರ್ಥಿವೇತನ, ಮಕ್ಕಳ ಸ್ಕೂಲ್ ಶುಲ್ಕವನ್ನು ಮರು ಪಾವತಿಸುವುದು, ಹೊರ ಪ್ರದೇಶಗಳಲ್ಲಿ ಓದುವ ಕಾರ್ಮಿಕರ ಮಕ್ಕಳಿಗೆ ವಿದ್ಯಾಭ್ಯಾಸ ಭತ್ಯೆ ಮುಂತಾದ ಸೌಲಭ್ಯಗಳನ್ನು ನೀಡುತ್ತಿದೆ. ಕಂಪನಿಯ ಉತ್ಪನ್ನಗಳು ISO ೯೦೦೧:೨೦೦೦ಗೆ ಸಮನಾದ ಉತ್ಕೃಷ್ಟತೆಯನ್ನು ಹೊಂದಿವೆ. ಕಂಪನಿಯು ೨೦೦೩–೦೪ರಲ್ಲಿ ರೂ. ೩೦,೦೭೦ ಲಕ್ಷ ನಿವ್ವಳ ಲಾಭ (ತೆರಿಗೆ ನಂತರ) ಗಳಿಸಿದೆ. ಕಂಪನಿಯು ಕಳೆದ ನಾಲ್ಕು ವರ್ಷಗಳಲ್ಲಿ ಮಾಡಿದ ರಫ್ತಿನ ವಿವರವನ್ನು ಕೋಷ್ಟಕ ೫. ೩ರಲ್ಲಿ ನೀಡಿದೆ.

**ಕೋಷ್ಟಕ ೫.೩ : ರಲ್ಲಿ ಕಳೆದ ಐದು ವರ್ಷಗಳಲ್ಲಿ (KIOCL) ಮಾಡಿದ ರಫ್ತಿನ ವಿವರ**

ಪ್ರಮಾಣ: ಮಿಲಿಯನ್ ಟನ್ನುಗಳಲಿ
ಮೌಲ್ಯ: ಲಕ್ಷ ರೂ.ಗಳಲ್ಲಿ

| ವರ್ಷ | ಕಬ್ಬಿಣದ ಅದಿರು ಸಾಂದ್ರತೆ | | ಕಬ್ಬಿಣದ ಅದಿರಿನ ಉಂಡೆಗಳು | | ಒಟ್ಟು | | ಶೇಕಡ ಬೆಳವಣಿಗೆ ಹಿಂದನ ವರ್ಷಕ್ಕೆ ಹೋಲಿಸಿದಂತೆ | |
|---|---|---|---|---|---|---|---|---|
| | ಪ್ರಮಾಣ | ಮೌಲ್ಯ | ಪ್ರಮಾಣ | ಮೌಲ್ಯ | ಪ್ರಮಾಣ | ಮೌಲ್ಯ | ಪ್ರಮಾಣ | ಮೌಲ್ಯ |
| ೧೯೯೯–೨೦೦೦ | ೨.೮೧೯ | ೨೦,೭೩೧ | ೩.೨೩೫ | ೪೧,೩೪೮ | ೬.೦೫೪ | ೬೨,೦೭೯ | ೨೦.೪೫ | ೧೩.೩೩ |
| ೨೦೦೦–೨೦೦೧ | ೨.೧೩೬ | ೧೭,೩೨೩ | ೨.೬೮೬ | ೪೦,೯೮೦ | ೪.೮೨೨ | ೫೮,೩೦೩ | – | – |
| ೨೦೦೧–೨೦೦೨ | ೨.೩೦೬ | ೨೧,೫೭೧ | ೩.೨೧೧ | ೫೦,೫೪೮ | ೫.೫೧೭ | ೭೨,೧೧೯ | ೧೪.೪೧ | ೨೩.೭೮ |
| ೨೦೦೨–೨೦೦೩ | ೨.೩೦೨ | ೨೧,೧೩೫ | ೩.೫೪೦ | ೫೧,೫೭೯ | ೫.೮೪೨ | ೭೨,೭೧೪ | ೫,೮೯ | ೦.೭೬ |
| ೨೦೦೩–೦೪ | ೧.೫೨೨ | ೨೦,೨೦೯ | ೩.೬೨೮ | ೮೨,೭೨೯ | ೫.೧೫೦ | ೧,೦೨,೯೩೮ | – | ೪೧.೫೭ |

* ಕಬ್ಬಿಣದ ಅದಿರಿನ ಉಂಡೆಗಳು ಹಾಗೂ ಪೆಲ್‌ಟ್ಸ್‌ಫಿನ್ಸ್ ಸೇರಿದಂತೆ

### ಕುದುರೆಮುಖ ಐರನ್ ಅಂಡ್ ಸ್ಟೀಲ್ ಕಂಪನಿ (ಲಿ) (KISCO)

ಈ ಉದ್ಯಮವು ರೂ. ೩೦೬ಕೋಟಿ ಬಂಡವಾಳದೊಂದಿಗೆ ಜುಲೈ ೧೯೯೫ರಲ್ಲಿ ಸ್ಥಾಪನೆಗೊಂಡಿತು. ಪ್ರತಿವರ್ಷ ಸುಮಾರು ೨,೪೦,೦೦೦ ಮೆಟ್ರಿಕ್‌ಟನ್ ಪ್ರಮಾಣದ ಉಕ್ಕನ್ನು ಉತ್ಪಾದಿಸುವ ಸಾಮರ್ಥ್ಯವನ್ನು ಹೊಂದಿದೆ. ಇದಕ್ಕಾಗಿ ಅದು ಬ್ಲಾಸ್ಟ್‌ಫರ್ನೇಸ್ ತಂತ್ರಜ್ಞಾನವನ್ನು ಅನುಸರಿಸುತ್ತಿದೆ. ಸುಮಾರು ೩೫೦ ಕ್ಯೂ.ಮೀ (Cumtr) ಪ್ರಮಾಣದ ಬ್ಲಾಸ್ಟ್ ಫರ್ನೇಸ್ ಅನ್ನು ಇದಕ್ಕಾಗಿ ಉಪಯೋಗಿಸಲಾಗುತ್ತಿದೆ. ಇಲ್ಲಿ ಉತ್ಪಾದಿಸಲಾಗುವ ಕಬ್ಬಿಣದ ಅದಿರನ್ನು ಯಂತ್ರೋಪಕರಣಗಳ ಬಿಡಿಭಾಗಗಳ ತಯಾರಿಕೆಗೆ ಬಳಸಲಾಗುತ್ತಿದೆ. ಕಂಪನಿಯಲ್ಲಿ ೨೩೧ ಖಾಯಂ ಹಾಗೂ ೨೯೯ ಗುತ್ತಿಗೆ ಮತ್ತು ದಿನಗೂಲಿ ಆಧಾರದ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಇವರಿಗೆ ಸಾಂದರ್ಭಿಕ ರಜಾ, (೧೦ ದಿನಗಳು), ಗಳಿಕೆ ರಜೆ (೨೫ ದಿನಗಳು), ಅರ್ಧ ವೇತನ ರಜೆ (HPL) (೨೦ ದಿವಸಗಳು) ಸಿ.ಹೆಚ್ (C.H) ೧೦ದಿವಸಗಳು, ಹೆರಿಗೆ ರಜೆ (೯೦ ದಿವಸಗಳು), ಕ್ಯಾಂಟೀನ್ ಸೌಲಭ್ಯ, ಮಂಗಳೂರು ನಗರದಲ್ಲಿ ಗುರುತಿಸಲ್ಪಟ್ಟ ನಾಲ್ಕು ಆಸ್ಪತ್ರೆ ಹಾಗೂ ಕ್ಲೀನಿಕ್‌ಗಳ ಸೌಲಭ್ಯ, ಎರಡು ವರ್ಷಗಳಿಗೊಮ್ಮೆ ಎಲ್.ಟಿ.ಸಿ. (LTC) ಸೌಲಭ್ಯ, ನಗರಭತ್ಯೆ, ಸಾರಿಗೆ ಭತ್ಯೆ, ಮನೆಕಟ್ಟಲು, ಸೈಕಲ್ ಹಾಗೂ ದ್ವಿಚಕ್ರವಾಹನಗಳನ್ನು ಖರೀದಿಸಲು ಮಂಗಡ ಹಣ, ಸಮವಸ್ತ್ರ ಇ.ಪಿ.ಎಫ್. ಗ್ರಾಚ್ಯುಟಿ ಮುಂತಾದ ಸವಲತ್ತುಗಳನ್ನು ಒದಗಿಸಲಾಗಿದೆ.

ಈ ಕಂಪನಿಯು ೨೦೦೧–೦೨ ರಿಂದ ವಾಣಿಜ್ಯ ಉತ್ಪಾದನೆಯಲ್ಲಿ ತೊಡಗಿದ್ದು, ೨೬೩೮.೨೧ ರೂ.ಗಳ ನಷ್ಟ ಹೊಂದಿತ್ತು. ಆದರೆ ೨೦೦೨–೦೩ ಹಾಗೂ ೨೦೦೩–೦೪ರಲ್ಲಿ ಕ್ರಮವಾಗಿ ರೂ. ೭೧೧.೨೩ ಲಕ್ಷ ಹಾಗೂ ರೂ. ೨೫೫.೮೯ ಲಕ್ಷಗಳ ಲಾಭಗಳಿಸಿತ್ತು. ಮತ್ತೆ ೨೦೦೪–೦೫ರಲ್ಲಿ ರೂ. ೧೮೫೪.೨೪ ಲಕ್ಷ ನಷ್ಟ ಅನುಭವಿಸಿರುವುದು ಕಂಪನಿಯ ಆರ್ಥಿಕ ಸ್ಥಿತಿಗತಿಗಳು ಉತ್ತಮವಾಗಿಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತದೆ.

### ಬಿ.ಎ.ಎಸ್.ಎಫ್. ಇಂಡಿಯಾ (ಲಿ)

ಈ ಉದ್ಯಮವು ಸುರತ್ಕಲ್–ಬಜ್ಪೆ ಮಾರ್ಗದಲ್ಲಿದ್ದು, ಮಾರ್ಚ್ ೧೯೯೬ರಲ್ಲಿ ಸ್ಥಾಪನೆಗೊಂಡಿದೆ. ಇದರಲ್ಲಿ ತೊಡಗಿಸಿರುವ ಬಂಡವಾಳ ಸು. ೧೫೦ ಕೋಟಿ ರೂ. ಗಳಾಗಿದ್ದು, ಒಟ್ಟು ೨೦೦ ಮಂದಿಗೆ ಉದ್ಯೋಗ ಒದಗಿಸಿದೆ. ಇದೊಂದು ಕೆಮಿಕಲ್ ಕಂಪನಿಯಾಗಿದ್ದು, ಡೈಸ್ ಮತ್ತು ಡಿಸ್‌ಪರ್ಶನ್ಸ್ (Dyes and Dispersion) ತಯಾರಿಸಿ ಕರ್ನಾಟಕವೂ ಸೇರಿದಂತೆ ದೇಶದ ಇತರೆ ರಾಜ್ಯಗಳಲ್ಲಿಯೂ ತನ್ನ ಉತ್ಪನ್ನಗಳನ್ನು ಮಾರಾಟ ಮಾಡುತ್ತಿದೆ. ಈ ಉದ್ಯಮ "ದಿ ಬಿ.ಐ.ಎಲ್ ಮಂಗಳೂರು ವರ್ಕ್ಸ್‌ನ ಒಂದು ಘಟಕವಾಗಿದೆ. ಕಾರ್ಮಿಕರ ಕಲ್ಯಾಣಕ್ಕಾಗಿ ಸಂಬಳದ ಜೊತೆಗೆ. ಭವಿಷ್ಯನಿಧಿ, ಉಪದಾನ (ಗ್ರಾಚ್ಯುಯಿಟಿ), ಉಪಹಾರಗೃಹ ಸೌಲಭ್ಯ, ವೈದ್ಯಕೀಯ ಸೌಲಭ್ಯ, ಮನೆಕಟ್ಟಲು ಸಹಾಯಧನ ಮುಂತಾದ ಸವಲತ್ತುಗಳನ್ನು ಕಾರ್ಮಿಕರ ಹಿತರಕ್ಷಣೆಗಾಗಿ ಒದಗಿಸುತ್ತಿದೆ.

### ಭಾರತ್ ಪೆಟ್ರೋಲಿಯಂ ಎಲ್.ಪಿ.ಜಿ. ಬಾಟ್ಲಿಂಗ್ ಪ್ಲಾಂಟ್

ಈ ಕಂಪನಿಯು ಭಾರತ್ ಪೆಟ್ರೋಲಿಯಂ ಕಾರ್ಪೋರೇಷನ್ (ಲಿ)ನ ಅಧೀನ ಘಟಕವಾಗಿದ್ದು, ೧೯೮೬ರಲ್ಲಿ ರೂ. ೧೪.೧ ಕೋಟಿ ಬಂಡವಾಳದೊಂದಿಗೆ ಸ್ಥಾಪನೆಗೊಂಡಿತು. ಈ ಘಟಕವು ವಾಣಿಜ್ಯ ಹಾಗೂ ಗೃಹಬಳಕೆಯ ಸಿಲಿಂಡರ್‌ಗಳನ್ನು ತುಂಬಿ ದಕ್ಷಿಣ ಕರ್ನಾಟಕದ ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಗಳಲ್ಲಿ, ಕೇರಳ ರಾಜ್ಯದ ಕಣ್ಣೂರು ಹಾಗೂ ಕಾಸರಗೋಡು ಜಿಲ್ಲೆಗಳಲ್ಲಿ ಮಾರಾಟ ಮಾಡುತ್ತಿದೆ. ಈ ಉದ್ದಿಮೆಯಲ್ಲಿ ೫೩ ಕಾರ್ಮಿಕರಿದ್ದು, ವೇತನ ಶ್ರೇಣಿಯ ಜೊತೆಗೆ ನಗರ ಪರಿಹಾರ ಭತ್ಯೆ, ರಜೆ ಪ್ರಯಾಣ ಭತ್ಯೆ, ಪ್ರಭಾರ ಭತ್ಯೆ ಪಾಳಿಭತ್ಯೆ, ವಿದ್ಯಾಭ್ಯಾಸದ ಭತ್ಯೆ, ತುಟ್ಟಿಭತ್ಯೆ, ಗಣಕಯಂತ್ರ ಸಾಲ, ಹಬ್ಬದ ಮುಂಗಡ, ವೈದ್ಯಕೀಯ ವೆಚ್ಚದ ಮರುಪಾವತಿ, ಗೃಹಸಾಲ, ವಾಹನಸಾಲ ಹಾಗೂ ರಿಯಾಯಿತಿ ದರದಲ್ಲಿ ಉಪಹಾರದ ಸೌಲಭ್ಯಗಳನ್ನು ತನ್ನ ಕಾರ್ಮಿಕರಿಗೆ ಕಂಪನಿಯು ನೀಡುತ್ತಿದೆ.

### ದಿ ಸೆಂಟ್ರಲ್ ಅರಿಕಾನಟ್ ಅಂಡ್ ಕೋಕೋ ಮಾರ್ಕೆಟಿಂಗ್ ಪ್ರೊಸೆಸಿಂಗ್ ಕೋ–ಆಪರೇಟಿವ್ ಲಿಮಿಟೆಡ್

ಈ ಉದ್ಯಮವು ಸಹಕಾರಿ ಕ್ಷೇತ್ರದಲ್ಲಿ ಜುಲೈ ೧೯೭೩ರಲ್ಲಿ ರೂ. ೨೨ಕೋಟಿ ಬಂಡವಾಳದೊಂದಿಗೆ ಸ್ಥಾಪಿತವಾಯಿತು. ಕರ್ನಾಟಕ ಮತ್ತು ಕೇರಳ ರಾಜ್ಯಗಳಿಂದ ತನ್ನ ಉತ್ಪಾದನೆಗೆ ಬೇಕಾದ ಕಚ್ಚಾ ವಸ್ತುಗಳನ್ನು ಖರೀದಿಸುತ್ತದೆ. ಅಮೂಲ್, ನೆಸ್ಲೇ ಚಾಕೋಲೇಟ್‌ಗಳನ್ನು ಉತ್ಪಾದಿಸಿ, ಮಂಗಳೂರು, ಬೆಂಗಳೂರು, ಹುಬ್ಬಳ್ಳಿ, ಮುಂಬೈ, ಅಹಮದಾಬಾದ್, ಕಟಕ್, ಚಂಡೀಗಡ, ಕೊಚ್ಚಿನ್, ಜಮ್ಮು, ಡೆಹರಾಡ್ಯೂನ್,

ಪಾಟ್ನಾ ಹಾಗೂ ಇಂದೂರ್‌ಗಳಲ್ಲಿರುವ ಮಾರಾಟ ಕಛೇರಿಗಳ ಮೂಲಕ ತೆರೆದು ಭಾರತದಾದ್ಯಂತ ತನ್ನ ಉತ್ಪನ್ನಗಳನ್ನು ಮಾರಾಟ ಮಾಡುತ್ತಿದೆ. ಈ ಉದ್ಯಮವು ಒಟ್ಟು ೬೩೦ ಮಂದಿಗೆ ಉದ್ಯೋಗಾವಕಾಶ ಕಲ್ಪಿಸಿದೆ. ಇವರಿಗೆ ಕ್ಯಾಂಟಿನ್ ಸೌಲಭ್ಯ ಸಮವಸ್ತ್ರ ಷೂಸ್, ವಾಹನಭತ್ಯೆ, ವೈದ್ಯಕೀಯಭತ್ಯೆ, ಎಚ್.ಟಿ.ಸಿ. ವಾಷಿಂಗ್ ಭತ್ಯೆ, ಪಾಳಿಭತ್ಯೆ ಮುಂತಾದವುಗಳಲ್ಲದೆ, ಇ.ಎಸ್.ಐ. ಪಿ.ಎಫ್, ಗ್ರಾಚ್ಯುಟಿ, ರಜೆ, ಗಳಿಕೆರಜೆ ಮುಂತಾದ ಸವಲತ್ತುಗಳನ್ನು ಒದಗಿಸುತ್ತಿದೆ.

## ದಿ ಮಂಗಳೂರು ಟ್ರೇಡಿಂಗ್ ಅಸೋಷಿಯೇಷನ್ (ಪ್ರೈ) ಲಿಮಿಟೆಡ್

ಈ ಉದ್ಯಮವು ೧೯೦೦ರಲ್ಲಿ ಆರಂಭಗೊಂಡಿತು. ಪ್ರಾರಂಭದಲ್ಲಿ ಇದರಲ್ಲಿ ತೊಡಗಿಸಿರುವ ಬಂಡವಾಳ ಕೇವಲ ೫೦ ರಿಂದ ೬೦ ಸಾವಿರ ರೂಪಾಯಿಗಳು ಮಾತ್ರ. ಈ ಉದ್ಯಮದ ಸ್ಥಾಪಕರು ಶ್ರೀಮನ್ ವಡೇರಬೆಟ್ಟು ಶ್ರೀನಿವಾಸ ಕಾಮತರು. ಈಗ ಪ್ರೆಸ್ಸು ಇರುವ ಸ್ಥಳದಲ್ಲಿ, ಸಣ್ಣ ಕಟ್ಟಡದಲ್ಲಿ ವಿವಿಧ ರೀತಿಯ ಇಂಗ್ಲಿಷ್ ಹಾಗೂ ಆಯುರ್ವೇದ ಮದ್ದುಗಳ ಮಾರಾಟಕ್ಕೆ ಒಂದು ಅಂಗಡಿಯನ್ನು ತೆರೆದಿದ್ದರು. ಇದರ ಜೊತೆಯಲ್ಲಿ ಮದ್ದನ್ನು ಮಾರಾಟ ಮಾಡಲು ಬೇಕಾಗುವ ಲೇಬಲನ್ನು ಮುದ್ರಿಸಲು ಸಣ್ಣ ಮುದ್ರಣ ಸಂಸ್ಥೆಯನ್ನು ತೆರೆದರು. ನಂತರ ತಮ್ಮ ಮುಂದಿನ ಯೋಜನೆಯನ್ನು ಜನರಿಗೆ ತಿಳಿಸಲು ಸಾಪ್ತಾಹಿಕ ಪತ್ರಿಕೆಯನ್ನು ಪ್ರಾರಂಭಿಸಿದರು. ಈ ಯೋಜನೆ ಎಲ್ಲರಿಗೂ ಮೆಚ್ಚುಗೆಯಾದುದರಿಂದ ಪತ್ರಿಕೆಗೆ 'ಸ್ವದೇಶಾಭಿಮಾನಿ' ಎಂದು ನಾಮಕರಣ ಮಾಡಿದರು. ಇದರ ಜನಪ್ರಿಯತೆ ದಿನದಿಂದ ದಿನಕ್ಕೆ ಹೆಚ್ಚಾಯಿತು. ಈ ವಾರಪತ್ರಿಕೆಯ ಮುದ್ರಣವನ್ನು ಆಕರ್ಷಕವಾಗಿ ಮುದ್ರಿಸಲು ಸಣ್ಣದಾದ ಮುದ್ರಣಾಲಯವನ್ನು ಪ್ರಾರಂಭಿಸಿದರು. ಇದು ಮುಂದೆ ಶಾರದಾ ಮುದ್ರಣಾಲಯವೆಂದು ಜನಪ್ರಿಯತೆ ಗಳಿಸಿತು. ಇದರ ಅಭಿವೃದ್ಧಿಗಾಗಿ ತೊಡಗಿಸಿದ ಬಂಡವಾಳ ಮೂರರಿಂದ ಐದು ಲಕ್ಷ ರೂಪಾಯಿಗಳಾಗಿತ್ತು.

೧೯೩೦ ರಿಂದ ೧೯೫೦ರ ಅವಧಿಯಲ್ಲಿ ಮುದ್ರಣ ಯಂತ್ರಗಳನ್ನು ಜರ್ಮನಿ, ಇಂಗ್ಲೆಂಡ್ ಹಾಗೂ ಅಮೇರಿಕಾಗಳಿಂದ ಆಮದು ಮಾಡಿಕೊಳ್ಳಲು ಸುಮಾರು ೨೦ ರಿಂದ ೨೫ ಲಕ್ಷ ರೂಪಾಯಿಗಳನ್ನು ವೆಚ್ಚಮಾಡಲಾಯಿತು. ಇಲ್ಲಿಂದ ಮುಂದಕ್ಕೆ ಪ್ರೆಸ್ಸಿನ ಅಭಿವೃದ್ಧಿಯಾಗತೊಡಗಿತು. ಹೀಗೆ ಆರಂಭವಾದ ಮುದ್ರಣಾಲಯ ೨೦೦೦ ಇಸವಿಯಲ್ಲಿ ತನ್ನ 'ಶತಮಾನೋತ್ಸವ'ವನ್ನು ಆಚರಿಸಿಕೊಂಡಿತು. ಪ್ರಾರಂಭದಲ್ಲಿ ಕೇವಲ ೨೫ ರಿಂದ ೪೦ ಮಂದಿ ಕಾರ್ಮಿಕರಿದ್ದರು. ಇವರ ಸಂಖ್ಯೆ ೧೯೫೦–೬೦ರ ಅವಧಿಯಲ್ಲಿ ೧೦೦–೧೪೦ಕ್ಕೆ ಹೆಚ್ಚಳಗೊಂಡಿತ್ತು. ಮಾನವ ಚಾಲಿತ ಯಂತ್ರಗಳ ಬಳಕೆ ಹೆಚ್ಚಾಗಿದ್ದುದೇ ಕಾರ್ಮಿಕರ ಸಂಖ್ಯೆಯಲ್ಲಿ ಹೆಚ್ಚಳಕ್ಕೆ ಕಾರಣ. ಆದರೆ ೨೦೦೫ರ ಸೆಪ್ಟೆಂಬರ್ ಅಂತ್ಯಕ್ಕೆ ಇವರ ಸಂಖ್ಯೆ ಸುಮಾರು ೫೦–೬೦ಕ್ಕೆ ಕುಸಿದಿದೆ. ಸ್ವಯಂಚಾಲಿತ ಯಂತ್ರಗಳ ಬಳಕೆ ಇದಕ್ಕೆ ಕಾರಣವಾಗಿದೆ.

ಶಾಲಾ ಪುಸ್ತಕಗಳು, ವ್ಯಾಪಾರಿಗಳಿಗೆ ಬೇಕಾದ ಪುಸ್ತಕಗಳು, ಬ್ಯಾಂಕು ಮತ್ತು ಇತರ ಸಂಸ್ಥೆಗಳಿಗೆ ಬೇಕಾಗುವ ಸ್ಟೇಶನರಿ ಮತ್ತು ಪುಸ್ತಕಗಳಿಗೆ ಬೇಡಿಕೆ ಹೆಚ್ಚುತ್ತಾ ಬಂದಿದೆ. ಇದರ ಆರ್ಥಿಕಸ್ಥಿತಿ ೨೦೦೦ದ ಮಾರ್ಚ್ ಅಂತ್ಯಕ್ಕೆ ಉತ್ತಮವಾಗಿತ್ತು.

## ರುಚಿ ಸೋಯ ಇಂಡಸ್ಟ್ರೀಸ್ ಲಿಮಿಡೆಡ್

ಈ ಉದ್ಯಮವು ಡಿಸೆಂಬರ್ ೨೦೦೧ರಲ್ಲಿ ರೂ. ೯೨ಕೋಟಿ ಬಂಡವಾಳದೊಂದಿಗೆ ಸ್ಥಾಪನೆಗೊಂಡಿತು. ಖಾದ್ಯ ತೈಲ (ಎಡಿಬಲ್ ಆಯಿಲ್) ಹಾಗೂ ವನಸ್ಪತಿ ತುಪ್ಪವನ್ನು ತಯಾರಿಸಿ ಕರ್ನಾಟಕ, ಗೋವಾ ಹಾಗೂ ಮಹಾರಾಷ್ಟ್ರದ ಕೆಲವು ಭಾಗಗಳಲ್ಲಿ ಮಾರಾಟ ಮಾಡಲಾಗುತ್ತಿದೆ. ಇಲ್ಲಿ ೯೦ ಮಂದಿ ಕಾರ್ಮಿಕರಿದ್ದು, ಇವರಿಗೆ ಇ.ಎಸ್.ಐ., ಪಿ.ಎಫ್., ಕ್ಯಾಂಟೀನ್, ವಿಶ್ರಾಂತಿ ಗೃಹ ಮುಂತಾದ ಕಾನೂನುಬದ್ಧ ಸೌಲಭ್ಯಗಳನ್ನು ನೀಡಲಾಗುತ್ತಿದೆ. ಕಾರ್ಖಾನೆಯ ಆರ್ಥಿಕ ಸ್ಥಿತಿಗತಿ ಉತ್ತಮವಾಗಿದೆ.

## ಸ್ಟ್ರೈಡ್ಸ್ ರಿಸರ್ಚ್ ಅಂಡ್ ಸ್ಪೆಶಾಲಿಟಿ ಕೆಮಿಕಲ್ಸ್ ಲಿಮಿಟೆಡ್

ಈ ಉದ್ಯಮವು ಮಾರ್ಚ್ ೧೯೯೫ರಲ್ಲಿ ರೂ. ೩೦.೩೬ ಕೋಟಿ ಕ್ರೋಢೀಕೃತ ಬಂಡವಾಳದೊಂದಿಗೆ ಸ್ಥಾಪನೆಗೊಂಡಿದೆ. ದೊಡ್ಡ ಪ್ರಮಾಣದಲ್ಲಿ ಔಷಧಿಗಳು ಹಾಗೂ ಸ್ಪೆಶಾಲಿಟಿ ಕೆಮಿಕಲ್ಸ್‌ಗಳ ತಯಾರಿಕೆಯಲ್ಲಿ ಈ ಉದ್ಯಮ ತೊಡಗಿದೆ. ತಯಾರಾಗುವ ಔಷಧಿಗಳು ದೇಶದ ಬೇಡಿಕೆಯನ್ನು ಪೂರೈಸುವುದರ ಜೊತೆಗೆ ವಿದೇಶಗಳಿಗೂ ರಫ್ತಾಗುತ್ತಿದೆ. ಈ ಉದ್ದಿಮೆಯ ವಾರ್ಷಿಕ ವಹಿವಾಟು ಡಿಸೆಂಬರ್ ೨೦೦೪ರ ಅಂತ್ಯಕ್ಕೆ ರೂ. ೪೨.೬೨ ಕೋಟಿ (ಕ್ರೋಢೀಕೃತ)ಗಳಾಗಿದೆ. ಇಲ್ಲಿ ೨೦೦ ಖಾಯಂ ಕಾರ್ಮಿಕರು, ೩೫ ತಾತ್ಕಾಲಿಕ ಕಾರ್ಮಿಕರು

ಉದ್ಯೋಗ ಪಡೆದಿದ್ದಾರೆ. ಇವರಿಗೆ ಕ್ಯಾಂಟೀನು ಸೌಲಭ್ಯ, ಸಾರಿಗೆ ಸೌಲಭ್ಯ, ವೃತ್ತಿ ನೆರವು ಕೇಂದ್ರ, ವೈದ್ಯಕೀಯ ತಪಾಸಣೆ, ವಿಶ್ರಾಂತಿ ಗೃಹ, ಸಾಮೂಹಿಕ ಹಾಗೂ ವೈಯಕ್ತಿಕ ಅಪಘಾತ ವಿಮೆ ಮುಂತಾದ ಸೌಲಭ್ಯಗಳನ್ನು ಒದಗಿಸಲಾಗಿದೆ. ಈ ಉದ್ದಿಮೆಯ ಆರ್ಥಿಕ ಸ್ಥಿತಿಗತಿ ಉತ್ತಮವಾಗಿದ್ದು, ರೂ.೨.೬೬ಕೋಟಿ ಕ್ರೋಢೀಕೃತ ನಿವ್ವಳ ಲಾಭಗಳಿಸಿದೆ.

## ಲಾಮಿನಾ ಸಸ್ಪೆನ್‌ಷನ್ ಪ್ರಾಡಕ್ಟ್ಸ್ (ಲಿ)

ಈ ಉದ್ಯಮವು ರೂ. ೨.೨೦ ಕೋಟಿ ಬಂಡವಾಳದೊಂದಿಗೆ ೧೯೭೬ರಲ್ಲಿ ಸ್ಥಾಪನೆಗೊಂಡಿತು. ಇದು ಆಟೋಮೊಬೈಲ್ ಲೀಫ್‌ಸ್ಪ್ರಿಂಗ್ಸ್ ಹಾಗೂ ಸ್ಪ್ರಿಂಗ್ ಲೀವ್ಸ್‌ಗಳನ್ನು ತಯಾರಿಸಿ ಮಾರಾಟ ಮಾಡುತ್ತಿದೆ. ಇಲ್ಲಿನ ಉತ್ಪನ್ನಗಳನ್ನು ದೇಶದ ಬೇಡಿಕೆಯನ್ನು ಪೂರೈಸುವುದರ ಜೊತೆಗೆ ಯು.ಕೆ., ಜರ್ಮನಿ, ಫ್ರಾನ್ಸ್, ಇಟಲಿ, ಬೆಲ್ಜಿಯಂ, ಯು.ಎ.ಇ., ಸಿಂಗಾಪುರ ಮುಂತಾದ ಹೊರದೇಶಗಳಿಗೂ ರಫ್ತು ಮಾಡಲಾಗುತ್ತಿದೆ. ಕಂಪನಿಯ ಉಗ್ರಾಣಗಳು ಹುಬ್ಬಳ್ಳಿ, ಕಲ್ಕತ್ತಾ, ಮಧುರೈ, ವಿಜಯವಾಡ, ಸೊಲ್ಲಾಪುರ, ಅಹಮದಾಬಾದ್, ಕಟಕ್, ರಾಯಪುರ ಹಾಗೂ ಗೋವಾಗಳಲ್ಲಿದ್ದು, ಇವುಗಳ ಮೂಲಕ ಹಂಚಿಕೆದಾರರು ಹಾಗೂ ಖರೀದಿದಾರರು ದೇಶದ ಬೇಡಿಕೆಯನ್ನು ಪೂರೈಸುತ್ತಾರೆ. ಈ ಉತ್ಪನ್ನಗಳ ಮಾರಾಟದಿಂದ ಮಾರ್ಚ್ ಅಂತ್ಯಕ್ಕೆ ರೂ. ೪೧ ಕೋಟಿ ಆದಾಯ ಬಂದಿದ್ದು, ಸು. ರೂ. ೨೦ ಲಕ್ಷ ನಿವ್ವಳ ಲಾಭ ಬಂದಿತ್ತು. ಈ ಉದ್ಯಮದಲ್ಲಿ ಖಾಯಂ ಕಾರ್ಮಿಕರಾಗಿ ೪೦೯ ಮಂದಿ ಹಾಗೂ ದಿನಗೂಲಿ ಕಾರ್ಮಿಕರಾಗಿ ೧೬೭ ಮಂದಿ (ಒಟ್ಟು ೫೭೬ ಮಂದಿ) ಕಾರ್ಮಿಕರು ದುಡಿಯುತ್ತಿದ್ದಾರೆ. ಕಾರ್ಮಿಕರ ಕಲ್ಯಾಣಕ್ಕಾಗಿ ಕಾರ್ಮಿಕರ ಭವಿಷ್ಯ ನಿಧಿ(ಇ.ಪಿ.ಎಫ್.), ಕಾರ್ಮಿಕರ ರಾಜ್ಯ ವಿಮಾ ಆಸ್ಪತ್ರೆ (ಇ.ಎಸ್.ಐ.), ಬೋನಸ್, ಉಪದಾನ (ಗ್ರಾಚ್ಯುಯಿಟಿ), ರಿಯಾಯಿತಿ ದರದಲ್ಲಿ ಆಹಾರ–ಪಾನೀಯ, ಕಾರ್ಮಿಕರ ಮಕ್ಕಳಿಗೆ ವಿದ್ಯಾಭ್ಯಾಸ, ಆರೋಗ್ಯ ಮುಂತಾದ ಸೌಲಭ್ಯಗಳನ್ನು ಒದಗಿಸಿದೆ.

## ಹಿಂದೂಸ್ತಾನ್ ಲಿವರ್ ಲಿಮಿಟೆಡ್

ಈ ಉದ್ದಿಮೆಯು ೧೯೮೭ರಲ್ಲಿ ೧೬.೨೮ ಕೋಟಿ ಬಂಡವಾಳದೊಂದಿಗೆ ಅಸ್ತಿತ್ವಕ್ಕೆ ಬಂದಿತು. ಇದು ಡಿಟರ್ಜೆಂಟ್‌ಬಾರ್ ಮತ್ತು ಪೌಡರ್‌ಗಳನ್ನು ತಯಾರಿಸುತ್ತದೆ. ಇಲ್ಲಿ ತಯಾರಾದ ಉತ್ಪನ್ನಗಳನ್ನು ದಕ್ಷಿಣ ಭಾರತದಾದ್ಯಂತ ಮಾರಾಟ ಮಾಡಲಾಗುತ್ತಿದೆ. ಈ ಉದ್ದಿಮೆಯಲ್ಲಿ ೧೮೦ ಮಂದಿ ಕಾರ್ಮಿಕರಿದ್ದು, ಇವರಿಗೆ ಉಪಹಾರಗೃಹ, ವಿಶ್ರಾಂತಿಗೃಹ ವೈದ್ಯಕೀಯ ಸೌಲಭ್ಯ ಪ್ರಥಮ ಚಿಕಿತ್ಸಾ ಪೆಟ್ಟಿಗೆಗಳು, ಮನೋರಂಜನೆ ಮುಂತಾದ ಹಲವು ಸೌಲಭ್ಯಗಳನ್ನು ಒದಗಿಸಿದೆ. ಹಿಂದೂಸ್ತಾನ್ ಲಿವರ್ ಕಂಪನಿಯ ಆರ್ಥಿಕ ಸ್ಥಿತಿ ಸ್ಥಿರವಾಗಿದೆ ಎಂಬುದನ್ನು ಕಂಪನಿಯ ಅದರ ವಾರ್ಷಿಕ ವರದಿಯು ತಿಳಿಸಿದೆ.

## ಪ್ರಕಾಶ ಆಫ್‌ಸೆಟ್ ಪ್ರಿಂಟರ್ಸ್

ಪ್ರಕಾಶ್ ಆಫ್‌ಸೆಟ್ ಪ್ರಿಂಟರ್ಸ್ ೧೯೮೩ರಲ್ಲಿ ಸ್ಥಾಪನೆಗೊಂಡಿತು. ೨೦೦೪–೦೫ರಲ್ಲಿದ್ದಂತೆ ಪ್ರಿಂಟರ್ಸ್ ರೂ. ೨.೩೮ಕೋಟಿ ಬಂಡವಾಳ ಹೊಂದಿತ್ತು. ಇದು ಪಠ್ಯಪುಸ್ತಕಗಳು ಹಾಗೂ ವಾಣಿಜ್ಯ ಉಪಯೋಗಕ್ಕೆ ಬರುವ ಮುದ್ರಣ ಕಾರ್ಯದಲ್ಲಿ ತೊಡಗಿದೆ. ಕಂಪನಿಯು ೨೦೦೨–೦೩ರಲ್ಲಿ ೨,೬೦,೨೭,೦೨೬ ರೂ.ಗಳು, ೨೦೦೩–೦೪ರಲ್ಲಿ ೩,೧೮,೩೨,೭೫೯ ರೂ.ಗಳು ಹಾಗೂ ೨೦೦೪–೦೫ರಲ್ಲಿ ೪,೨೭,೪೫,೯೮೮ ರೂ. ಗಳ ವಾರ್ಷಿಕ ವಹಿವಾಟು ನಡೆಸಿದೆ. ಈ ಉದ್ದಿಮೆಯಲ್ಲಿ ೨೦೦೪–೦೫ರಲ್ಲಿ ೪೦ ಕಾರ್ಮಿಕರಿದ್ದರು. ಇವರಿಗೆ ಕಾರ್ಮಿಕರ ನಿಧಿ, ಕಾರ್ಮಿಕರ ರಾಜ್ಯ ವಿಮಾ ಆಸ್ಪತ್ರೆ (E.S.I), ಮುಂತಾದ ಸೌಲಭ್ಯಗಳನ್ನು ನೀಡಿದೆ. ಕಂಪನಿಯು ಆರ್ಥಿಕ ಸ್ಥಿತಿ ತೃಪ್ತಿಕರವಾಗಿರುವುದು ಮಾಹಿತಿಯಿಂದ ತಿಳಿದುಬಂದಿದೆ.

## ದಿ.ಕೆನರಾ ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ (ಪ್ರೈ) ಲಿಮಿಟೆಡ್

ಈ ಉದ್ದಿಮೆಯು ಒಂದು ಲಕ್ಷ ಬಂಡವಾಳದೊಂದಿಗೆ ೧೯೩೮ರಲ್ಲಿ ಸ್ಥಾಪನೆಗೊಂಡಿತು. ಇದು ಮುದ್ರಣ ಕಾರ್ಯದಲ್ಲಿ ತೊಡಗಿದೆ. ಮುದ್ರಣ ಸರಕುಗಳಿಂದ ಬಂದ ಆದಾಯ ರೂ. ೮೧.೬೩ ಲಕ್ಷಗಳಾಗಿತ್ತು. ಈ ಕಂಪನಿಯಲ್ಲಿ ೨೦ ಮಂದಿ ಕಾರ್ಮಿಕರಿದ್ದು, ಇವರಿಗೆ ಕಾರ್ಮಿಕರ ರಾಜ್ಯ ವಿಮಾ ಆಸ್ಪತ್ರಾ ಸೌಲಭ್ಯ (E.S.I), ಕಾರ್ಮಿಕರ ಭವಿಷ್ಯ ನಿಧಿ, ಖಾಸಗಿ ವಿಮೆ ಸೌಲಭ್ಯಗಳನ್ನು ಸಹ ನೀಡಲಾಗುತ್ತಿದೆ. ಇದರ ಆರ್ಥಿಕ ಸ್ಥಿತಿ ಉತ್ತಮವಾಗಿದೆ.

### ಎಲ್ಫ್ ಗ್ಯಾಸ್ ಇಂಡಿಯಾ (ಲಿ)

ಎಲ್ಫ್ ಗ್ಯಾಸ್ ಇಂಡಿಯಾ (ಲಿ.) ಕಂಪನಯು ೧೯೯೯ರಲ್ಲಿ ರೂ. ೬೧ ಕೋಟಿ ಬಂಡವಾಳದೊಂದಿಗೆ ಅಸ್ತಿತ್ವಕ್ಕೆ ಬಂದಿದೆ. ಇಲ್ಲಿ ಅಡುಗೆ ಅನಿಲ (ಎಲ್.ಪಿ.ಜಿ) ವನ್ನು ಉತ್ಪಾದಿಸುತ್ತಿದೆ. ಇಲ್ಲಿ ಉತ್ಪಾದನೆಯಾಗುವ ಅಡುಗೆ ಅನಿಲವನ್ನು ಪ್ರಮುಖ ನಗರ/ಪಟ್ಟಣಗಳಲ್ಲಿ ಹಂಚಿಕೆದಾರರು ಹಾಗೂ ವ್ಯಾಪಾರಸ್ಥರುಗಳ ಮೂಲಕ ಮಾರಾಟ ಮಾಡಲಾಗುತ್ತಿದೆ. ೧೯೯೯–೨೦೦೦ ದಲ್ಲಿ ಮಾರಾಟದಿಂದ ಬಂದ ಆದಾಯ ರೂ. ೧೪ ಕೋಟಿಗಳಾಗಿದ್ದರೆ, ೨೦೦೦–೦೧ರಲ್ಲಿ ರೂ. ೩೮ ಕೋಟಿ, ೨೦೦೧–೦೨ರಲ್ಲಿ ರೂ. ೬೧ಕೋಟಿ, ೨೦೦೨–೦೩ರಲ್ಲಿ ರೂ. ೯೬ಕೋಟಿ, ೨೦೦೩–೦೪ರಲ್ಲಿ ರೂ. ೧೧೯ ಕೋಟಿ ಹಾಗೂ ೨೦೦೪–೦೫ರಲ್ಲಿ ರೂ. ೧೫೯ ಕೋಟಿಗೆ ಹೆಚ್ಚಳಗೊಂಡಿರುವುದು ಕಂಪನಿಯ ಆರ್ಥಿಕ ಸ್ಥಿತಿ ಉತ್ತಮವಾಗಿರುವುದನ್ನು ಸ್ಪಷ್ಟಪಡಿಸುತ್ತದೆ. ಎಲ್ಫ್‌ಗ್ಯಾಸ್ ಇಂಡಿಯಾ (ಲಿ)ನಲ್ಲಿ ೧೪ ಮಂದಿ ಕಾರ್ಮಿಕರು, ೧೪ ಮಂದಿ ಸಿಬ್ಬಂದಿ ಹಾಗೂ ನಾಲ್ಕು ಮಂದಿ ಗುತ್ತಿಗೆಯ ಆಧಾರದ ಕಾರ್ಮಿಕರಿದ್ದರು. ಕಂಪನಿಯು ಕಾರ್ಮಿಕರಿಗೆ ವರ್ಷಕ್ಕೆ ೨೭ ದಿವಸಗಳ ರಜೆಯನ್ನು, ೧೩ ದಿನಗಳ ಸಂಬಳ ಸಹಿತ ರಜೆಯನ್ನು, ಕಾರ್ಮಿಕ ಕುಟುಂಬದವರಿಗೆ ವೈದ್ಯಕೀಯ ಜೀವ ವಿಮೆಯನ್ನು, ಸಮವಸ್ತ್ರ ರಕ್ಷಣೆಗಾಗಿ ಷೂ ಮುಂತಾದ ಸೌಲಭ್ಯಗಳನ್ನು ನೀಡುತ್ತಿದೆ.

### ಅಲ್ಟ್ರಾಟೆಕ್ ಸಿಮೆಂಟ್ (ಲಿ)

ಈ ಉದ್ಯಮವು ೧೯೯೮ರಲ್ಲಿ ಪ್ರಾರಂಭವಾಯಿತು. ಇದರಲ್ಲಿ ತೊಡಗಿಸಲಾದ ಬಂಡವಾಳ ರೂ. ೧,೭೫೦ ಲಕ್ಷಗಳಾಗಿತ್ತು. ಇದು ಮೆ॥ ಆದಿತ್ಯ ಬಿರ್ಲಾ ಗ್ರೂಪ್ ಆಧೀನದಲ್ಲಿದೆ. ಇಲ್ಲಿ ತಯಾರಾಗುವ ಸಿಮೆಂಟ್ ಅನ್ನು ಉಡುಪಿ ಮಂಗಳೂರು ಜಿಲ್ಲೆಗಳಲ್ಲಿ ಹಾಗೂ ನೆರೆಯ ಕೇರಳ ರಾಜ್ಯದ ಉತ್ತರ ಭಾಗದಲ್ಲಿ ಮಾರಾಟ ಮಾಡಲಾಗುತ್ತಿದೆ. ಈ ಉದ್ಯಮದಲ್ಲಿ ೧೧ ಖಾಯಂ ಕಾರ್ಮಿಕರು ಹಾಗೂ ೨೯ ಗುತ್ತಿಗೆ ಆಧಾರದ ಕಾರ್ಮಿಕರು ಸೇರಿದಂತೆ ಒಟ್ಟು ೪೦ ಮಂದಿ ಕಾರ್ಮಿಕರಿದ್ದರು. ಇಲ್ಲಿಯ ಕಾರ್ಮಿಕರಿಗೆ ಊಟ, ವಿಶ್ರಾಂತಿಗೃಹ, ಶೌಚಾಲಯ ಹಾಗೂ ಪಿ.ಪಿ.ಇ (PPEs) ಸೌಲಭ್ಯಗಳನ್ನು ನೀಡಲಾಗಿದೆ.

### ಕೆನರಾ ವುಡ್ ಅಂಡ್ ಪ್ಲೈವುಡ್ ಇಂಡಸ್ಟ್ರೀಸ್ (ಲಿ)

ಈ ಉದ್ಯಮವು ಮಾರ್ಚ್ ೨೦೦೫ರಲ್ಲಿದ್ದಂತೆ ರೂ. ೪.೭೦ ಕೋಟಿ ಬಂಡವಾಳದೊಂದಿಗೆ ೧೯೭೨ರಲ್ಲಿ ಸ್ಥಾಪನೆಗೊಂಡಿತು. ವಿನಿಯರ್ಸ್ (Veneers), ಪ್ಲೈವುಡ್, ಕಪ್ಪು ಹಲಗೆ, ಫ್ಲಶ್‌ಡೋರ್ಸ್, ಪ್ಯಾನೆಲ್‌ಡೋರ್ಸ್, ಫೈಯರ್ ರೇಟೆಡ್ ಡೋರ್ಸ್ (Fire Rated Doors) ಮುಂತಾದ ಉತ್ಪನ್ನಗಳನ್ನು ತಯಾರಿಸಲಾಗುತ್ತಿದೆ. ಬೆಂಗಳೂರು, ಮುಂಬಯಿ, ಚೆನ್ನೈ, ಅಹಮದಾಬಾದ್, ಹೈದ್ರಾಬಾದ್ ಮತ್ತು ಗೋವಾಗಳಲ್ಲಿ ಮಾರಾಟ ಕೋಠಿ (ಕೇಂದ್ರ)ಗಳನ್ನು ತೆರೆದು ಮಾರಾಟ ಮಾಡಲಾಗುತ್ತಿದೆ. ಉತ್ಪನ್ನಗಳ ಮಾರಾಟದಿಂದ ಬಂದ ಆದಾಯ ೧೧.೫೧ ಕೋಟಿ ರೂ.ಗಳಾಗಿದೆ. ಈ ಉದ್ಯಮದಲ್ಲಿ ಕಾರ್ಮಿಕರು ಹಾಗೂ ಸಿಬ್ಬಂದಿ ವರ್ಗದವರು ಸೇರಿದಂತೆ ಒಟ್ಟು ೧೪೮ ಮಂದಿ ಕಾರ್ಮಿಕರಿದ್ದಾರೆ. ಇವರಿಗೆ ವಿಶ್ರಾಂತಿಗೃಹ, ಪ್ರಥಮ ಚಿಕಿತ್ಸೆ, ಭವಿಷ್ಯ ನಿಧಿ ಹಾಗೂ ಕಾರ್ಮಿಕರ ರಾಜ್ಯ ವಿಮಾ (ಇ.ಎಸ್.ಐ.) ಸೌಲಭ್ಯ ಒದಗಿಸಲಾಗಿರುತ್ತದೆ. ಕಂಪನಿಯು ೨೦೦೪–೦೫ರ ಸಾಲಿನಲ್ಲಿ ತೆರಿಗೆಯ ನಂತರ ೩೪.೯ ಲಕ್ಷ ರೂ.ಗಳ ನಿವ್ವಳ ಲಾಭ ಪಡೆದಿರುತ್ತದೆ.

### ದಿ ಕೆನರಾ ವರ್ಕ್‌ಶಾಪ್ಸ್ (ಲಿ)

ಈ ಕಂಪನಿಯು ಜಿಲ್ಲೆಯ ಹಳೆಯ ಕೈಗಾರಿಕೆಗಳಲ್ಲೊಂದಾಗಿದ್ದು, ೧೯೪೩ ರಿಂದ ಉತ್ಪಾದನೆಯಲ್ಲಿ ತೊಡಗಿದೆ. ಇದರಲ್ಲಿ ರೂ. ಐದು ಕೋಟಿ ಬಂಡವಾಳ ತೊಡಗಿಸಲಾಗಿದೆ. ಈ ಕಂಪನಿಯಲ್ಲಿ ವಾಹನಗಳ ಲೀಫ್ ಸ್ಪ್ರಿಂಗ್ಸ್ ತಯಾರಿಸಲಾಗುತ್ತಿದೆ. ಇಲ್ಲಿ ತಯಾರಾದ ಉತ್ಪನ್ನಗಳನ್ನು ಬೆಂಗಳೂರು, ಹುಬ್ಬಳ್ಳಿ, ಕಲ್ಲಿಕೋಟೆ, ಕೊಯಂಬತ್ತೂರು, ವಿಜಯವಾಡ, ಹೈದರಾಬಾದ್, ಚೆನ್ನೈ, ಸೋಲ್ಲಾಪೂರ್ ಹಾಗೂ ಮಂಗಳೂರಿನಲ್ಲಿರುವ ಒಂಭತ್ತು ಮಾರಾಟ ಡಿಪೋಗಳ ಮೂಲಕ ಮಾರಾಟ ಮಾಡಲಾಗುತ್ತಿದೆ. ೨೦೦೪–೦೫ರಲ್ಲಿ ಉತ್ಪನ್ನಗಳನ್ನು ಮಾರಾಟ ಮಾಡಿ ರೂ. ೨,೨೨೭೯೬ಲಕ್ಷ ಆದಾಯ ಗಳಿಸಿದೆ. ಈ ಕಾರ್ಖಾನೆಯು ೩೧೬ ಕಾರ್ಮಿಕರಿಗೆ ಉದ್ಯೋಗ ನೀಡಿದೆ. ವಿವರಗಳಿಗೆ ಕೋಷ್ಟಕ ೫.೪ ರಲ್ಲಿ ನೋಡಿ.

**ಕೋಷ್ಟಕ ೫.೪ : ಜಿಲ್ಲೆಯಲ್ಲಿ ೩೦.೦೪.೨೦೦೫ರಲ್ಲಿದ್ದ ಬೃಹತ್ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳು**

| ಕ್ರ.ಸಂ | ಕೈಗಾರಿಕೆಗಳ ಹೆಸರು | ಉತ್ಪನ್ನ | ಬಂಡವಾಳ ಕೋ. ರೂ. ಗಳಲ್ಲಿ | ಉದ್ಯೋಗ | ಸ್ಥಾಪನೆಯಾದ ವರ್ಷ |
|---|---|---|---|---|---|
| ೧ | ೨ | ೩ | ೪ | ೫ | ೬ |
| ೧. | ಮೆ॥ ಮಂಗಳೂರು ಕೆಮಿಕಲ್ಸ್ ಮತ್ತು ಫರ್ಟಿಲೈಸರ್ಸ್ ಪಣಂಬೂರು ಮಂಗಳೂರು. | ಯೂರಿಯಾಡ್ರೈ ಅಮೋನಿಯಾ ಫಾಸ್ಫೆಟ್ ಅಮೋನಿಯಾ ಬೈ ಕಾರ್ಬೋನೇಟ್ | ೩೧೬ ಕೋ | ೬೯೩ | ಜೂನ್ ೧೯೬೬ |
| ೨. | ಮೆ॥ ಕುದುರೆಮುಖ ಐರನ್ ಓರ್ ಕಂಪನಿ (ಲಿ) ಪಣಂಬೂರು, ಮಂಗಳೂರು. | ಕಬ್ಬಿಣದ ಉಂಡೆ ತಯಾರಿಕೆ | ೬೩೪.೧೫ ಕೋ | ೧೯೩೨ | ಏಪ್ರಿಲ್ ೧೯೭೬ |
| ೩. | ಮೆ॥ ಬಿ.ಎ.ಎಸ್.ಎಫ್. ಇಂಡಿಯಾ ಕಾಟಿಪಳ್ಳ, ಮಂಗಳೂರು | ಡೈಸ್ ಅಂಡ್ ಡಿಸ್‌ಪರ್ಸ್ | ೧೫೦ ಕೋ | ೨೦೦ | ೧೯೯೬ |
| ೪. | ಮೆ॥ ಎಂ.ಆರ್.ಪಿ.ಎಲ್ ಕಾಟಿಪಳ್ಳ, ಮಂಗಳೂರು. | ಕ್ರೂಡ್ ಆಯಿಲ್ ಸಂಸ್ಕರಣೆ | ೬೭೪೦೧.೯೧ ಮಿಲಿಯನ್ | ೯೭೦ | ೧೯೮೯ |
| ೫. | ಮೆ॥ ಕೆನರಾ ವರ್ಕ್‌ಶಾಫ್ ಲಿ. ಮರೋಳಿ, ಮಂಗಳೂರು | ಆಟೋಸ್ಪಿಂಗ್ಸ್, ಬ್ರೇಕ್‌ಡ್ರಮ್ಸ್ | ಐದು ಕೋಟಿ | ೩೧೬ | ಜನವರಿ ೧೯೪೩ |
| ೬. | ಮೆ॥ ಕೆನರಾ ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ನಿಯಮಿತ, ಮಂಗಳೂರು. | ಆಫ್‌ಸೆಟ್ ಪ್ರಿಂಟಿಂಗ್ | ಒಂದು ಲಕ್ಷ | ೨೦ | ೧೯೩೮ |
| ೭. | ಮೆ॥ ಮಂಗಳೂರು ಟ್ರೇಡಿಂಗ್ ಅಸೋಸಿಯೇಷನ್, ಕಾರ್‌ಸ್ಟ್ರೀಟ್, ಮಂಗಳೂರು. | ಪ್ರಿಂಟಿಂಗ್ | ೦.೬೦ ಲಕ್ಷ | ೧೧೭ | – |
| ೮. | ಮೆ॥ ಕೆನರಾ ವುಡ್ ಅಂಡ್ ಪ್ಲೈವುಡ್ ಇಂಡಸ್ಟ್ರೀಸ್, ಜಪ್ಪು, ಮಂಗಳೂರು. | ಪ್ಲೈವುಡ್, ಮತ್ತು ಬ್ಲಾಕ್ ಬೋರ್ಡ್ಸ್ | ೪.೭೦ ಕೋಟಿ | ೧೪೮ | ೧೯೭೨ |
| ೯. | ಮೆ॥ ಪ್ರಕಾಶ್ ಆಫ್‌ಸೆಟ್ ಪ್ರಿಂಟರ್ಸ್, ಬೈಕಂಪಾಡಿ, ಮಂಗಳೂರು. | ಆಫ್‌ಸೆಟ್ ಪ್ರಿಂಟಿಂಗ್ | ೨೩.೮ ಕೋಟಿ | ೪೦ | ೧೯೮೩ |
| ೧೦. | ಮೆ॥ ಭಾರತ್ ಪೆಟ್ರೋಲಿಯಮ್, ಎಲ್.ಪಿ.ಜಿ. ಬಾಟ್ಲಿಂಗ್ ಪ್ಲಾಂಟ್, ಬೈಕಂಪಾಡಿ. ಮಂಗಳೂರು. | ಎಲ್.ಪಿ.ಜಿ. ಫಿಲ್ಲಿಂಗ್ | ೧೪ ಕೋಟಿ | ೫೩ | ೧೯೮೬ |
| ೧೧. | ಮೆ॥ ಕ್ಯಾಂಪ್ಕೋ ಚಾಕಲೇಟ್ ಇಂಡಸ್ಟ್ರೀಸ್, ಮುತ್ತೂರು. | ಕೋಕೋ ಮಾಲ್ಟ್ | ೨೨ ಕೋಟಿ | ೨೫೦ | ಸಪ್ಟೆಂಬರ್ ೧೯೮೬ |

ಮುಂದುವರೆದಿದೆ.........

| ೧ | ೨ | ೩ | ೪ | ೫ | ೬ |
|---|---|---|---|---|---|
| ೧೨. | ಕುದುರೆಮುಖ ಐರನ್ ಓರ್ ಅಂಡ್ ಸ್ಟೀಲ್ ಕಂಪನಿ (ಲಿ) ಪಣಂಬೂರು, ಮಂಗಳೂರು. | ಸ್ಟೀಲ್ | ೩೦೬.೦೦ ಕೋಟಿ | ೨೩೧ | – |
| ೧೩. | ಮೆ॥ ರುಚಿ ಸೋಯಾ ಇಂಡಸ್ಟ್ರೀಸ್, ಇಂಡಸ್ಟ್ರೀಯಲ್ ಏರಿಯಾ, ಬೈಕಂಪಾಡಿ, ಮಂಗಳೂರು. | ವನಸ್ಪತಿ ಹಾಗೂ ರಿಫೈನ್ಡ್ ಆಯಿಲ್ | ೯೭ ಕೋಟಿ | ೯೦ | ಡಿಸೆಂಬರ್ ೨೦೦೧ |
| ೧೪. | ಮೆ॥ ರಾಜಶ್ರೀ ಪ್ಯಾಕರ್ಸ್, ಇಂಡಸ್ಟ್ರೀಯಲ್ ಏರಿಯಾ ಬೈಕಂಪಾಡಿ, ಮಂಗಳೂರು. | ರಿಫೈನ್ಡ್ ಆಯಿಲ್ ಅಂಡ್ ವನಸ್ಪತಿ | ೩೪೫೦ | ೬೧ | – |
| ೧೫. | ಮೆ॥ ಎಲ್ಪ್ ಗ್ಯಾಸ್, ಲಿ, ತೋಕೂರು, ಜೋಕಟ್ಟೆ ಮಂಗಳೂರು. | ಗ್ಯಾಸ್ ರಿಫಿಲ್ಲಿಂಗ್ | ೧೫೯ ಕೋಟಿ | ೩೨ | ೧೯೯೯ |
| ೧೬. | ಮೆ॥ ಸ್ಟ್ರೆಡ್ಸ್ ರಿಸರ್ಚ್ ಅಂಡ್ ಸ್ಪೆಶಾಲಿಟಿ ಕೆಮಿಕಲ್ಸ್ (ಲಿ) ಇಂಡಸ್ಟ್ರೀಯಲ್ ಏರಿಯಾ ಬೈಕಂಪಾಡಿ, ಮಂಗಳೂರು. | ಡ್ರಗ್ಸ್ ಮತ್ತು ಸ್ಪೆಶಾಲಿಟೀಸ್ ಕೆಮಿಕಲ್. | ೩೦.೩೬ ಕೋಟಿ | ೨೫ | ೧೯೯೫ |
| ೧೭. | ಮೆ॥ ಅಲ್ಟ್ರಾಟೆಕ್ ಕಂ. ಲಿಮಿಟೆಡ್, ಪಣಂಬೂರು, ಮಂಗಳೂರು. | ಸಿಮೆಂಟ್ ಪ್ಯಾಕಿಂಗ್ | ೧೬೫೦ ಕೋಟಿ | ೪೦ | ೧೯೯೮ |
| ೧೮. | ಮೆ॥ಲ್ಯಾಮಿನಾ ಸಸ್ಪೆನ್ಸನ್ ಪ್ರಾಡಕ್ಟ್ಸ್, ಇಂಡಸ್ಟ್ರಿಯಲ್ ಏರಿಯಾ ಬೈಕಂಪಾಡಿ, ಮಂಗಳೂರು. | ಆಟೋಮೊಬೈಲ್ ಲೀಫ್ ಸ್ಪ್ರಿಂಗ್ಸ್ | ೨೨೦ ಕೋಟಿ | ೫೭೬ | ೧೯೭೬ |
| ೧೯. | ಮೆ॥ ಹಿಂದೂಸ್ತಾನ್ ಲಿವರ್ಸ್, ಸುಲ್ತಾನ್ ಬತ್ತೇರಿ ರಸ್ತೆ ಬೋಳೂರು, ಮಂಗಳೂರು. | ಡಿಟರ್ಜೆಂಟ್ ಬಾರ್ ಅಂಡ್ ಪೌಡರ್ | ೧೬.೨೮ ಕೋಟಿ | ೧೫೦ | ೧೯೮೭ |

## ಮಾಹಿತಿ ತಂತ್ರಜ್ಞಾನ

ಕರ್ನಾಟಕ ರಾಜ್ಯವು ಪ್ರಪ್ರಥಮವಾಗಿ ಮಾಹಿತಿ ತಂತ್ರಜ್ಞಾನ ನೀತಿಯನ್ನು ೧೯೯೭ರಲ್ಲಿ ತಂದಿತು. ಈ ನೀತಿಯು ಮಾಹಿತಿ ತಂತ್ರಜ್ಞಾನ ಕೈಗಾರಿಕಾ ಬೆಳವಣಿಗೆಯಲ್ಲಿ ಮಹತ್ತರ ಪಾತ್ರವನ್ನು ವಹಿಸಿದೆ. ಮಂಗಳೂರಿನಲ್ಲಿ ಮಾಹಿತಿ ತಂತ್ರಜ್ಞಾನದ ಬೆಳವಣಿಗೆ ಹೇರಳವಾಗುತ್ತಿರುವುದರಿಂದ, ಬಂಡವಾಳ ಹೂಡಿಕೆ, ಉದ್ಯೋಗಾವಕಾಶಗಳು ಹೆಚ್ಚಾಗುತ್ತಿವೆ. ತಂತ್ರಾಂಶಗಳ ಹಾಗೂ ಹಾರ್ಡ್‌ವೇರ್‌ನ ರಫ್ತು ವ್ಯವಹಾರಗಳಿಂದಾಗಿ ವಿದೇಶಿ ವಿನಿಮಯ ಗಳಿಕೆ ಹೆಚ್ಚಾಗುತ್ತದೆ. ಪರಿಣಾಮವಾಗಿ ಜಿಲ್ಲೆಯ ಜನರ ಆರ್ಥಿಕ ಜೀವನಮಟ್ಟ ಸುಧಾರಿಸಲು ಕಾರಣವಾಗಿದೆ. ಮಂಗಳೂರಿನಲ್ಲಿ ಇನ್‌ಫೋಸಿಸ್ ಟೆಕ್ನೋಲಜಿಸ್ (ಲಿ), ಮಂಗಳೂರು–I, ಇನ್‌ಫೋಸಿಸ್ ಟೆಕ್ನೋಲಜಿಸ್ (ಲಿ), ಮಂಗಳೂರು–II, ಮಣಿಪಾಲ್ ಸಾಫ್ಟ್‌ವೇರ್ (ಪ್ರೈ)ಲಿ, ಮಹಾರಾಣಿ ಇನ್‌ಫೋ ಟೆಕ್‌ನೆಟ್ (ಪ್ರೈ) ಲಿ., ಮೆಡ್‌ಥೀಮ್ ಮೆಡಿಕಲ್ ಟ್ರಾನ್ಸ್‌ಕ್ರಿಪ್‌ಶನ್ ಸರ್ವಿಸಸ್ (ಪ್ರೈ)ಲಿ., ಕ್ಷಿತಿಜ ಟೆಕ್ನೋಲಜಿಸ್, ದಿವ್ಯಾ ಸಿಸ್ಟಮ್ಸ್, ಯು.ಎಸ್.ಎ. ಸಪೋರ್ಟ್, ಶ್ರೀ ಗುರು ಇನ್‌ಫೋಟೆಕ್ (ಎಲ್.ಎಲ್.ಸಿ), ಫ್ಲೆಕ್ಸಿ

ರಿಸೋರ್ಸ್‌ಸ್, ಮೊಸೊರ್ಸ್ ಇಂಡಿಯಾ (ಪ್ರೈ) ಲಿ., (Msource India Pvt. Ltd), ಗ್ಲೊಟಚ್ ಟೆಕ್ನೋಲಜಿಸ್ ಮುಂತಾದ ಮಾಹಿತಿ ತಂತ್ರಜ್ಞಾನ ಕಂಪನಿಗಳಿದ್ದು, ಇವು ಜಿಲ್ಲೆಯ ಸರ್ವತೋಮುಖ ಬೆಳವಣಿಗೆಗೆ ಸಹಕಾರಿಯಾಗಿವೆ. ಮಂಗಳೂರಿನಲ್ಲಿ ಸಾಫ್ಟ್‌ವೇರ್ ಟೆಕ್ನಾಲಜಿ ಪಾರ್ಕ್ ಆಫ್ ಇಂಡಿಯಾ (STPI) ಘಟಕ ಸ್ಥಾಪನೆಗೊಂಡಿರುವುದು ಮಾಹಿತಿ ತಂತ್ರಜ್ಞಾನ ಬೆಳವಣಿಗೆಗೆ ಮತ್ತಷ್ಟು ಸಹಕಾರಿಯಾಗಿದೆ.

ಸರ್ಕಾರವು ಕಾಲೇಜು ವಿದ್ಯಾರ್ಥಿಗಳಲ್ಲಿ ಮಾಹಿತಿ ತಂತ್ರಜ್ಞಾನದ ಬಗ್ಗೆ ಕೌಶಲ್ಯ ಬೆಳೆಸಲು ಪ್ರಯತ್ನಿಸುತ್ತಿದೆ. ಇದು ಜಿಲ್ಲೆಯಲ್ಲಿರುವ ಎಲ್ಲಾ ಇಂಜಿನೀಯರಿಂಗ್ ಕಾಲೇಜುಗಳು, ಮೆಡಿಕಲ್‌ಕಾಲೇಜುಗಳು ಪಾಲಿಟೆಕ್ನಿಕ್ ಹಾಗೂ ಐ.ಟಿ.ಐ ಕಾಲೇಜುಗಳನ್ನು ಒಳಗೊಂಡಿರುತ್ತದೆ. ರಾಜ್ಯದಾದ್ಯಂತ ೧,೦೦೦ ಶಾಲೆಗಳನ್ನು ಈ ವ್ಯಾಪ್ತಿಗೆ ತಂದಿದೆ. ಅಲ್ಲದೆ ಖಾಸಗಿ ಕ್ಷೇತ್ರಗಳು ಸಹ ಮಾಹಿತಿ ತಂತ್ರಜ್ಞಾನ ಸಂಶೋಧನಾ ಕೇಂದ್ರಗಳನ್ನು ಹಾಗೂ ತರಬೇತಿ ಕೇಂದ್ರಗಳನ್ನು ತೆರೆಯಲು, ಲ್ಯಾಬೋರೇಟರಿಗಳನ್ನು ಉನ್ನತಿಕರಿಸಲು ಪ್ರೋತ್ಸಾಹಿಸುತ್ತಿದೆ.

ಜೈವಿಕ ತಂತ್ರಜ್ಞಾನ ಕ್ಷೇತ್ರದಲ್ಲಿ ಕ್ರಾಂತಿಯನ್ನು ಉಂಟು ಮಾಡುವುದಕ್ಕೆ ಬೇಕಾದಂತಹ, ಮೂಲ ತರಬೇತಿ ಜ್ಞಾನವನ್ನು ಕರ್ನಾಟಕ ಗಳಿಸಿದೆ. ಇದಕ್ಕಾಗಿ ಜೈವಿಕ ತಂತ್ರಜ್ಞಾನ ಸಂಸ್ಥೆಗಳ ಸಮೂಹ ಹಾಗೂ ಉತ್ತಮವಾದ ಸಂಶೋಧನಾ ಕೇಂದ್ರಗಳನ್ನು, ಹೊಸ ಶೋಧ, ಉದ್ಯಮ ಸಾಹಸಿಗಳಿಗೆ ಪ್ರೋತ್ಸಾಹ ಹಾಗೂ ಪರಿಣಾಮಕಾರಿಯಾದ ತಂತ್ರಜ್ಞಾನದ ಸೌಕರ್ಯವನ್ನು ಬಳಕೆದಾರರಿಗೆ ಹಸ್ತಾಂತರಿಸಲು ಅವಕಾಶವಿದೆ

## ಸಣ್ಣ ಪ್ರಮಾಣದ ಕೈಗಾರಿಕೆಗಳು

ದಕ್ಷಿಣ ಕನ್ನಡ ಜಿಲ್ಲೆಯು ಕೈಗಾರಿಕಾರಂಗದಲ್ಲಿ ಅಭಿವೃದ್ಧಿ ಹೊಂದುತ್ತಿರುವ ಜಿಲ್ಲೆಯಾಗಿದೆ. ಕರ್ನಾಟಕ ಸರ್ಕಾರದ ೨೦೦೧–೦೬ರ ಕೈಗಾರಿಕಾ ನೀತಿಯಂತೆ ಅತೀ ಸಣ್ಣ ಪ್ರಮಾಣದ ಕೈಗಾರಿಕೆಯೆಂದರೆ, ಸ್ಥಾವರ ಮತ್ತು ಯಂತ್ರೋಪಕರಣಗಳಲ್ಲಿ ರೂ. ೨೫ ಲಕ್ಷಗಳಿಗಿಂತ ಕಡಿಮೆ ಬಂಡವಾಳ ಹೂಡಿರುವಂತಹ ಕೈಗಾರಿಕೆ. ಇವುಗಳಿಗೆ ಯಾವುದೇ ಪ್ರದೇಶ ನಿರ್ಬಂಧವಿರುವುದಿಲ್ಲ.

ಸಣ್ಣ ಪ್ರಮಾಣದ ಕೈಗಾರಿಕೆಯು ಸ್ವಂತವಾಗಿ ಅಥವಾ ಗುತ್ತಿಗೆಯ ಮೇಲೆ ಅಥವಾ ಬಾಡಿಗೆ ಖರೀದಿಯ ಷರತ್ತಿನಲ್ಲಿ ಹೊಂದಿರುವ ಸ್ಥಾವರ ಮತ್ತು ಯಂತ್ರೋಪಕರಣಗಳಲ್ಲಿ ರೂ. ೧೦೦ ಲಕ್ಷಕ್ಕಿಂತ ಕಡಿಮೆ ಬಂಡವಾಳ ಹೂಡಿರುವಂತಹ ಒಂದು ಘಟಕ. ೩೦–೦೬–೨೦೦೫ರಲ್ಲಿದ್ದಂತೆ. ೧೪,೨೧೪ ಸಣ್ಣ ಕೈಗಾರಿಕಾ ಘಟಕಗಳು ನೋಂದಣಿಗೊಂಡಿದ್ದವು. ಇವುಗಳಲ್ಲಿ ರೂ. ೪೮,೦೨೬.೭೧ ಲಕ್ಷಗಳನ್ನು ತೊಡಗಿಸಲಾಗಿದ್ದು, ೧,೯೯,೮೨೧ ಮಂದಿಗೆ ಉದ್ಯೋಗ ಒದಗಿಸಿದ್ದವು.

**ಕೋಷ್ಟಕ ೫.೫ : ಜಿಲ್ಲೆಯಲ್ಲಿ ೨೦೦೨–೦೩, ೨೦೦೩–೦೪ ಹಾಗೂ ೨೦೦೪–೦೫ರಲ್ಲಿದ್ದ ಸಣ್ಣ ಕೈಗಾರಿಕೆಗಳ ತಾಲೂಕು ವಿವರ**

| ಕ್ರ. ಸಂ. | ತಾಲೂಕು | ೨೦೦೨–೦೩ | | | ೨೦೦೩–೦೪ | | | ೨೦೦೪–೦೫ | | |
|---|---|---|---|---|---|---|---|---|---|---|
| | | ಘಟಕ | ಬಂಡವಾಳ (ಲಕ್ಷ ರೂ.ಗಳಲ್ಲಿ) | ಉದ್ಯೋಗಿಗಳು | ಘಟಕ | ಬಂಡವಾಳ (ಲಕ್ಷ ರೂ.ಗಳಲ್ಲಿ) | ಉದ್ಯೋಗಿಗಳು | ಘಟಕ | ಬಂಡವಾಳ (ಲಕ್ಷ ರೂ.ಗಳಲ್ಲಿ) | ಉದ್ಯೋಗಿಗಳು |
| ೧. | ಮಂಗಳೂರು | ೨೭೪ | ೭೩೬.೭೫ | ೮೬೭ | ೩೩೯ | ೭೫೪.೮೯ | ೧೦೮೨ | ೩೫೧ | ೧೩೨೫.೨೯ | ೧೨೫೬ |
| ೨. | ಬಂಟ್ವಾಳ | ೧೨೩ | ೧೪೪.೮೯ | ೩೩೨ | ೧೪೦ | ೨೦೬.೬೧ | ೩೭೦ | ೧೧೩ | ೮೨.೯೦ | ೩೧೧ |
| ೩. | ಪುತ್ತೂರು | ೧೧೯ | ೧೬೭.೨೨ | ೩೭೭ | ೧೪೭ | ೯೯.೧೯ | ೩೨೭ | ೧೨೬ | ೧೩೫.೦೭ | ೩೯೦ |
| ೪. | ಸುಳ್ಯ | ೫೪ | ೩೩.೧೬ | ೧೨೪ | ೫೧ | ೫೦.೧೭ | ೧೬೨ | ೪೯ | ೩೯.೦೪ | ೧೩೦ |
| ೫. | ಬೆಳ್ತಂಗಡಿ | ೫೦ | ೧೭೨.೨೦ | ೧೯೫ | ೫೧ | ೮೭.೫೩ | ೧೭೪ | ೫೪ | ೨೬೩.೪೯ | ೧೯೬ |
| | ಒಟ್ಟು | ೬೨೦ | ೧೨೫೩.೯೭ | ೧೮೯೫ | ೭೨೮ | ೧೧೯೮.೩೯ | ೨೧೧೫ | ೬೯೩ | ೧೮೪೫.೭೯ | ೨೨೮೩ |

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೨೦೦೨–೦೩, ೨೦೦೩–೦೪, ೨೦೦೪–೦೫ ಹಾಗೂ ೨೦೦೫ರ ಜೂನ್ ಅಂತ್ಯದಲ್ಲಿದ್ದಂತೆ ಸಣ್ಣ ಕೈಗಾರಿಕಾ ಘಟಕಗಳು, ಅವುಗಳಲ್ಲಿ ತೊಡಗಿಸಿದ್ದ ಬಂಡವಾಳ ಹಾಗೂ ಕಾರ್ಯ ನಿರ್ವಹಿಸುತ್ತಿದ್ದ ಕಾರ್ಮಿಕರ ಸಂಖ್ಯೆಯನ್ನು ಕೋಷ್ಟಕ ೫.೬ ಹಾಗೂ ೫.೭ ರಲ್ಲಿ ನೀಡಿದೆ.

**ಕೋಷ್ಟಕ.೫.೬; ೨೦೦೨–೦೩, ೨೦೦೩–೨೦೦೪ ಹಾಗೂ ೨೦೦೪–೦೫ರ ಸಾಲುಗಳಲ್ಲಿ ಜಿಲ್ಲೆಯಲ್ಲಿ ನೊಂದಾಯಿಸಲ್ಪಟ್ಟ ಕೈಗಾರಿಕಾ ಘಟಕಗಳು**

| ಕ್ರ.ಸಂ | ಕೈಗಾರಿಕಾ ಘಟಕಗಳ ಪ್ರವರ್ಗ | ೨೦೦೨–೦೩ | | | ೨೦೦೩–೦೪ | | | ೨೦೦೪–೦೫ | | |
|---|---|---|---|---|---|---|---|---|---|---|
| | | ಘಟಕ | ಬಂಡವಾಳ (ರೂ.ಲಕ್ಷಗಳಲ್ಲಿ) | ಉದ್ಯೋಗಿಗಳು | ಘಟಕ | ಬಂಡವಾಳ (ರೂ.ಲಕ್ಷಗಳಲ್ಲಿ) | ಉದ್ಯೋಗಿಗಳು | ಘಟಕ | ಬಂಡವಾಳ (ರೂ.ಲಕ್ಷಗಳಲ್ಲಿ) | ಉದ್ಯೋಗಿಗಳು |
| ೧ | ಆಹಾರ ಮತ್ತು ತಂಪು ಪಾನೀಯ | ೯೭ | ೨೯೫.೪೭ | ೩೯೬ | ೧೩೭ | ೩೪೯.೩೭ | ೫೪೫ | ೭೭ | ೪೫೫.೨೧ | ೩೭೯ |
| ೨ | ಜವಳಿ | ೪೬ | ೨೨.೭೬ | ೧೪೦ | ೯೧ | ೩೭.೦೭ | ೨೦೭ | ೨೫೩ | ೪೮.೩೧ | ೫೦೦ |
| ೩ | ಮರದ ಉತ್ಪನ್ನ | ೪೬ | ೧೩೫.೧೨ | ೧೭೫ | ೭೯ | ೧೫೧.೪೩ | ೨೩೭ | ೧೧೭ | ೯೪.೭೯ | ೨೭೩ |
| ೪ | ಪ್ರಿಂಟಿಂಗ್ | ೧೨ | ೨೮.೪೮ | ೪೨ | ೧೪ | ೨೪.೫೦ | ೪೪ | ೯ | ೧೯೬.೧೭ | ೫೪ |
| ೫ | ಚರ್ಮದ ಉತ್ಪನ್ನ | ೩ | ೪.೫೨ | ೮ | ೨೨ | ೦.೮೦ | ೪ | ೯ | ೧.೫೬ | ೨೦ |
| ೬ | ರಬ್ಬರ್ ಮತ್ತು ಪ್ಲಾಸ್ಟಿಕ್ | ೧೦ | ೬೫.೦೫ | ೫೩ | ೪ | ೪೨.೩೫ | ೧೬ | ೧೧ | ೧೦೬.೫೨ | ೭೧ |
| ೭ | ರಸಾಯನಿಕ | ೧೨ | ೧೫೯.೭೪ | ೬೨ | ೧೪ | ೮೫.೬೭ | ೧೦೧ | ೧೨ | ೫೮.೧೯ | ೭೯ |
| ೮ | ಗ್ಲಾಸ್ ಮತ್ತು ಸಿರಾಮಿಕ್ | ೬ | ೨೭.೩೭ | ೪೩ | ೧೨ | ೪೨.೮೬ | ೪೬ | ೧ | ೫.೦೦ | ೪ |
| ೯ | ಮೂಲ ಲೋಹದ ಉತ್ಪನ್ನ | ೩೮ | ೮೧.೫೪ | ೧೩೦ | ೨೮ | ೧೪.೩೮ | ೬೯ | ೭ | ೧.೧೨ | ೧೬ |
| ೧೦ | ಜನರಲ್ ಇಂಜಿನಿಯರಿಂಗ್ | ೧೭ | ೧೩.೭೧ | ೭೦ | ೨೯ | ೧೨೬.೧೯ | ೧೧೮ | ೨೮ | ೨೪೫.೬೩ | ೧೪೪ |
| ೧೧ | ಇಲೆಕ್ಟ್ರಿಕಲ್ ಮತ್ತು ಇಲೆಕ್ಟ್ರಾನಿಕ್ಸ್ | ೧೩ | ೨೩.೪೭ | ೩೬ | ೧೫ | ೭೫.೬೦ | ೬೩ | ೩ | ೨.೦೫ | ೯ |
| ೧೨ | ಆಟೋಮೊಬೈಲ್ | ೩ | ೨೬.೦೧ | ೧೩ | ೨ | ೧.೫೫ | ೫ | ೧ | ೬.೨೬ | ೪ |
| ೧೩ | ಸಾರಿಗೆ ಉತ್ಪನ್ನ | – | – | – | – | – | – | – | – | – |
| ೧೪ | ಫೆರಸ್ ಮತ್ತು ನಾನ್ ಫೆರಸ್ | ೩ | ೧.೪೯ | ೧೬ | ೫ | ೪.೭೫ | ೧೦ | – | – | – |
| ೧೫ | ಬೀಡಿಕೆಲಸ | ೧೯೬ | ೧೫೭.೭೧ | ೩೯೦ | ೧೮೫ | ೮೫.೦೩ | ೩೨೦ | ೪೦ | ೧೯.೩೪ | ೧೦೯ |
| ೧೬ | ಇತರೆ ಸೇವೆಗಳು | ೭೬ | ೯೪.೨೦ | ೧೪೭ | ೫೧ | ೫೫.೧೪ | ೧೦೬ | ೩೬ | ೨೬೮.೩೮ | ೧೧೭ |
| ೧೭ | ಇತರೆ ಉತ್ಪನ್ನಗಳು | ೪೨ | ೧೧೭.೩೫ | ೧೭೨ | ೬೦ | ೯೯.೭೦ | ೨೨೪ | ೮೯ | ೩೩೭.೨೬ | ೫೦೭ |
| | ಒಟ್ಟು | ೬೨೦ | ೧೨೫೩.೯೬ | ೧೮೯೫ | ೭೨೮ | ೧೧೯೬.೩೯ | ೨೧೧೫ | ೬೯೩ | ೧೮೪೫.೭೯ | ೨೨೮೬ |

**ಕೋಷ್ಟಕ ೫.೭ : ದಿನಾಂಕ:೩೦–೬–೨೦೦೫ರವರೆಗಿನ ಕೈಗಾರಿಕಾ ಘಟಕಗಳ ಪ್ರವರ್ಗವಾರು ಸಂಚಿತ ವಿವರ**

| ಕ್ರ.ಸಂ | ಕೈಗಾರಿಕಾ ಘಟಕಗಳ ಪ್ರವರ್ಗ | ಘಟಕ | ಬಂಡವಾಳ (ರೂ.ಲಕ್ಷಗಳಲ್ಲಿ ) | ಉದ್ಯೋಗಿಗಳು |
|---|---|---|---|---|
| ೧ | ಆಹಾರ ಮತ್ತು ತಂಪು ಪಾನೀಯ | ೨೭೩೬ | ೧೩೬೦೩.೬೨ | ೪೭೩೪೫ |
| ೨ | ಜವಳಿ | ೧೨೪೬ | ೬೬೪.೨೪ | ೫೪೯೮ |
| ೩ | ಮರದ ಉತ್ಪನ್ನ | ೧೪೪೩ | ೧೪೫೬.೦೯ | ೭೫೨೫ |
| ೪ | ಪ್ರಿಂಟಿಂಗ್ ಮತ್ತು ಲೇಖನ ಸಾಮಗ್ರಿ | ೫೩೬ | ೨೨೭೧.೮೫ | ೩೩೫೮ |
| ೫ | ಚರ್ಮದ ಉತ್ಪನ್ನ | ೨೪೬ | ೩೫.೮೪ | ೬೨೪ |
| ೬ | ರಬ್ಬರ್ ಮತ್ತು ಪ್ಲಾಸ್ಟಿಕ್ | ೫೮೩ | ೪೫೦೪.೩೬ | ೩೪೮೬ |
| ೭ | ರಸಾಯನಿಕ | ೨೮೪ | ೧೬೭೩.೬೧ | ೧೭೭೪ |
| ೮ | ಗ್ಲಾಸ್ ಮತ್ತು ಸಿರಾಮಿಕ್ | ೩೧೯ | ೧೩೭೮.೪೦ | ೧೯೪೮ |
| ೯ | ಮೂಲ ಲೋಹದ ಉತ್ಪನ್ನ | ೪೨೯ | ೧೦೫೦.೨೦ | ೨೦೨೦ |
| ೧೦ | ಜನರಲ್ ಇಂಜಿನಿಯರಿಂಗ್ | ೧೧೬೪ | ೪೬೦೪.೭೫ | ೬೮೩೨ |
| ೧೧ | ಇಲೆಕ್ಟ್ರಿಕಲ್ ಮತ್ತು ಇಲೆಕ್ಟ್ರಾನಿಕ್ಸ್ | ೬೬೯ | ೧೨೪೪.೮೯ | ೨೨೪೦ |
| ೧೨ | ಆಟೋಮೊಬೈಲ್ | ೪೧೩ | ೧೨೦೯.೬೫ | ೩೦೧೭ |
| ೧೩ | ಸಾರಿಗೆ ಉತ್ಪನ್ನ | – | – | – |
| ೧೪ | ಫೆರಸ್ ಮತ್ತು ನಾನ್ ಫೆರಸ್ | ೨೧೭ | ೩೭೭.೮೮ | ೧೩೪೨ |
| ೧೫ | ಬೀಡಿಕೆಲಸ | ೧೮೩೫ | ೨೩೧೩.೮೩ | ೫೪೨೫ |
| ೧೬ | ಇತರೆ ಸೇವೆಗಳು | ೮೨೭ | ೮೦೩೮.೮೭ | ೮೯೩೦ |
| ೧೭ | ಇತರೆ ಉತ್ಪನ್ನಗಳು | ೧೨೬೭ | ೩೫೯೮.೧೩ | ೮೭೫೯ |
| | ಒಟ್ಟು | ೧೪೨೧೪ | ೪೮೦೨೬.೨೧ | ೧೦೯೮೨೫ |

ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಸಣ್ಣ ಮತ್ತು ಅತೀ ಸಣ್ಣ ಕೈಗಾರಿಕಾ ಘಟಕಗಳು ಪ್ರಧಾನವಾಗಿ ಆಹಾರ ಮತ್ತು ಪಾನೀಯ, ಜವಳಿ, ಮರದ ಉತ್ಪನ್ನ, ಪ್ರಿಂಟಿಂಗ್, ಚರ್ಮದ ಉತ್ಪನ್ನ, ರಬ್ಬರ್ ಮತ್ತು ಪ್ಲಾಸ್ಟಿಕ್, ರಾಸಾಯನಿಕ, ಗ್ಲಾಸ್ ಮತ್ತು ಸಿರಾಮಿಕ್ಸ್, ಮೂಲ ಲೋಹದ ಉತ್ಪನ್ನ, ಜನರಲ್ ಇಂಜಿನಿಯರಿಂಗ್, ಇಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್, ಅಟೋಮೊಬೈಲ್, ಫೆರಸ್ ಮತ್ತು ನಾನ್ ಫೆರಸ್, ಬೀಡಿಕೆಲಸ ಮುಂತಾದ ಉತ್ಪಾದನಾ ಕಾರ್ಯಗಳಲ್ಲಿ ತೊಡಗಿವೆ. ಜಿಲ್ಲೆಯಲ್ಲಿ ೨೦೦೪–೦೫ರ ಸಾಲಿನಲ್ಲಿ ಒಟ್ಟು ೬೯೩ ಸಣ್ಣ ಕೈಗಾರಿಕಾ ಘಟಕಗಳು ನೋಂದಣಿಗೊಂಡಿದ್ದವು. ಇವುಗಳಲ್ಲಿ ತೊಡಗಿಸಿದ್ದ ಒಟ್ಟು ಬಂಡವಾಳ ರೂ. ೧,೮೪೫.೭೯ ಲಕ್ಷಗಳಾಗಿದ್ದು, ೨,೨೮೩ ಜನರಿಗೆ ಉದ್ಯೋಗ ಒದಗಿಸಿವೆ.

ಅಲ್ಲದೆ ಜಿಲ್ಲೆಯಲ್ಲಿ ಸುಮಾರು ಶೇಕಡಾ ೧೦ರಷ್ಟು ಸಣ್ಣ ಮತ್ತು ಅತೀ ಸಣ್ಣ ಪ್ರಮಾಣದ ಕೈಗಾರಿಕೆಗಳು ನೋಂದಣಿಗೊಳ್ಳದೆ ಕಾರ್ಯನಿರ್ವಹಿಸುತ್ತಿವೆ ಎಂದು ಅಂದಾಜು ಮಾಡಲಾಗಿದೆ.

೧) **ಆಹಾರ ಮತ್ತು ತಂಪು ಪಾನೀಯ ಕೈಗಾರಿಕೆ:** ಕೃಷಿ ಆಧಾರಿತ (ಆಹಾರ ಮತ್ತು ತಂಪು ಪಾನೀಯ) ಕೈಗಾರಿಕೆಗಳ ವ್ಯಾಪ್ತಿಗೆ ಪ್ರಧಾನವಾಗಿ ಹಿಟ್ಟಿನ ಗಿರಣಿ, ಪಶು ಮತ್ತು ಕೋಳಿ ಆಹಾರ ತಯಾರಿಕೆ, ಖಾದ್ಯತೈಲ, ಐಸ್‌ಕ್ರೀಂ ತಯಾರಿಕೆ, ಕಬ್ಬಿನರಸ ತಯಾರಿಕೆ, ಬೆಲ್ಲ ತಯಾರಿಕೆ, ಅಕ್ಕಿ ಗಿರಣಿ ಮುಂತಾದವುಗಳು ಸೇರುತ್ತವೆ. ಜಿಲ್ಲೆಯಲ್ಲಿ ೨೦೦೫ರ ಜೂನ್ ಅಂತ್ಯಕ್ಕೆ ಇದ್ದ ೨,೭೩೬ ಆಹಾರ ಮತ್ತು ತಂಪು ಪಾನೀಯ ಕೈಗಾರಿಕೆಗಳಿದ್ದವು. ಇವುಗಳಲ್ಲಿ ರೂ. ೧೩,೬೦೩.೬೨ ಲಕ್ಷ ಬಂಡವಾಳ ತೊಡಗಿಸಿದ್ದು, ೪೭,೩೪೫ ಮಂದಿಗೆ ಉದ್ಯೋಗ ಒದಗಿಸಿದ್ದವು.

೨) **ಜವಳಿ ಉದ್ಯಮ:** ಈ ಉದ್ಯಮದ ವ್ಯಾಪ್ತಿಗೆ ಪ್ರಧಾನವಾಗಿ ಟವಲ್, ನ್ಯಾಪ್ಕಿನ್ ಹಾಗೂ ಸಿದ್ಧ ಉಡುಪುಗಳ ತಯಾರಿಕಾ ಘಟಕಗಳು ಸೇರುತ್ತವೆ. ಜಿಲ್ಲೆಯಲ್ಲಿ ೨೦೦೫ರ ಜೂನ್ ಅಂತ್ಯಕ್ಕೆ ೧,೨೪೬ ಜವಳಿ ಘಟಕಗಳಿದ್ದು, ಇವುಗಳಲ್ಲಿ ರೂ. ೬೬೪.೨೪ ಲಕ್ಷ ಬಂಡವಾಳ ತೊಡಗಿಸಿದ್ದು, ೫,೪೯೮ ಮಂದಿಗೆ ಉದ್ಯೋಗ ಒದಗಿಸಿದ್ದವು.

೩) **ಮರದ ಉತ್ಪನ್ನ:** ಮರಕೊಯ್ಯುವುದು, ಪೀಠೋಪಕರಣ, ಕಿಟಕಿ, ಬಾಗಿಲು, ಎತ್ತಿನಗಾಡಿ, ಆಟದ ಸಾಮಾನು ಮತ್ತು ಪೋಟೋ ಚೌಕಟ್ಟುಗಳನ್ನು ತಯಾರಿಸುವುದು, ವುಡನ್ ಇನ್‌ಲೇ ವರ್ಕ್ಸ್ ಮುಂತಾದವು ಮರದ ಗೃಹೋಪಯೋಗಿ ಮತ್ತು ಪೀಠೋಪಕರಣ ಕೈಗಾರಿಕೆಗಳ ವ್ಯಾಪ್ತಿಗೆ ಒಳಪಡುತ್ತವೆ. ಜಿಲ್ಲೆಯಲ್ಲಿ ೨೦೦೫ರ ಜೂನ್ ಅಂತ್ಯದಲ್ಲಿದ್ದಂತೆ ೧,೪೪೩ ಘಟಕಗಳಿದ್ದು, ಇವುಗಳಲ್ಲಿ ರೂ. ೧,೪೫೫.೦೯ ಲಕ್ಷ ಬಂಡವಾಳ ತೊಡಗಿಸಲಾಗಿದೆ. ಇವು ೭,೫೨೫ ಮಂದಿಗೆ ಉದ್ಯೋಗ ಒದಗಿಸಿದ್ದವು.

೪) **ಮುದ್ರಣ ಮತ್ತು ಲೇಖನ ಸಾಮಗ್ರಿಗಳ ಕೈಗಾರಿಕೆ:** ಮುದ್ರಣ ಮತ್ತು ಲೇಖನ ಸಾಮಗ್ರಿಗಳ ವ್ಯಾಪ್ತಿಗೆ ಕೈಚೀಲ, ಪೇಪರ್ ಕವರ್, ವ್ಯಾಕ್ಸ್ ಕೋಟೆಡ್ ಪೇಪರ್, ಕಾರ್ಡ್‌ಬೋರ್ಡ್, ಗಮ್, ಪೇಪರ್ ಟೇಪ್, ಕಂಪ್ಯೂಟರ್ ಸ್ಟೇಷನರಿ ವಸ್ತುಗಳು, ಮುದ್ರಣಾಲಯ ಮುಂತಾದವು ಸೇರುತ್ತವೆ. ಜಿಲ್ಲೆಯಲ್ಲಿ ೨೦೦೪–೦೫ರ ಅಂತ್ಯದಲ್ಲಿದ್ದಂತೆ, ೫೩೬ ಮುದ್ರಣ ಲೇಖನ ಸಾಮಗ್ರಿಗಳ ಕೈಗಾರಿಕಾ ಘಟಕಗಳಿದ್ದವು. ಇವುಗಳಲ್ಲಿ ತೊಡಗಿಸಿರುವ ರೂ. ೨,೭೮೧.೮೫ ಲಕ್ಷ ಬಂಡವಾಳ ತೊಡಗಿಸಿದ್ದು, ೩,೩೫೮ ಮಂದಿಗೆ ಉದ್ಯೋಗ ಸೃಷ್ಟಿಸಿದ್ದವು.

೫) **ಚರ್ಮದ ಉತ್ಪನ್ನ ಘಟಕಗಳು:** ಚರ್ಮದ ಪಾದರಕ್ಷೆ ಆಟದ ಸಾಮಾನು, ಫ್ಯಾನ್ಸಿ ಸರಕು ಮುಂತಾದವುಗಳನ್ನು ತಯಾರಿಸುವ ಮತ್ತು ಚರ್ಮ ಹದ ಮಾಡುವ ಘಟಕಗಳೂ ಸೇರುತ್ತವೆ. ಜಿಲ್ಲೆಯಲ್ಲಿ ೨೦೦೫ರ ಜೂನ್ ಅಂತ್ಯಕ್ಕೆ ೨೪೬ ಚರ್ಮದ ಉತ್ಪನ್ನ ಘಟಕಗಳು ನೋಂದಣಿಗೊಂಡಿದ್ದವು. ಇವುಗಳಲ್ಲಿ ರೂ. ೩೫.೮೪ಲಕ್ಷ ಬಂಡವಾಳ ತೊಡಗಿಸಿ, ೬೨೪ ಮಂದಿಗೆ ಉದ್ಯೋಗ ನೀಡಿವೆ.

೬) **ರಬ್ಬರ್ ಮತ್ತು ಪ್ಲಾಸ್ಟಿಕ್ ಕೈಗಾರಿಕೆಗಳು:** ಪಾಲಿಥಿನ್ ಚೀಲ, ಪ್ಲಾಸ್ಟಿಕ್ ವಸ್ತು, ನೈಲಾನ್ ಚೀಲ, ಟೈರ್ ರಿಟ್ರೇಡಿಂಗ್, ಪಿ.ವಿ.ಸಿ. ಪೈಪ್ಸ್, ಹವಾಯ್ ಚಪ್ಪಲಿ, ಬಾಲಪೆನ್, ಬಾಲ್‌ಪೆನ್ ರೀಫಿಲ್ಸ್, ಪ್ಲಾಸ್ಟಿಕ್ ಗಾರ್‌ಮೆಂಟ್ಸ್, ಪ್ಲಾಸ್ಟಿಕ್ ಸೀಸೆ, ಫೈಬರ್ ಗ್ಲಾಸ್ ಮುಂತಾದವು ರಬ್ಬರ್ ಮತ್ತು ಪ್ಲಾಸ್ಟಿಕ್ ವಸ್ತುಗಳ ತಯಾರಿಕಾ ಘಟಕಗಳ ವ್ಯಾಪ್ತಿಗೆ ಸೇರುತ್ತವೆ. ಜಿಲ್ಲೆಯಲ್ಲಿ ೨೦೦೫ರ ಜೂನ್ ಅಂತ್ಯಕ್ಕೆ ಈ ಉದ್ಯಮಕ್ಕೆ ಸಂಬಂಧಿಸಿದ ಘಟಕಗಳ ಸಂಖ್ಯೆ ೫೮೩ ಆಗಿವೆ. ಇವುಗಳಲ್ಲಿ ರೂ. ೪,೫೦೪.೩೬ ಲಕ್ಷ ಬಂಡವಾಳ ತೊಡಗಿಸಿದ್ದು, ೩,೪೮೬ ಮಂದಿಗೆ ಉದ್ಯೋಗ ಒದಗಿಸಿದ್ದವು.

೭) **ರಾಸಾಯನಿಕ ವಸ್ತುಗಳ ತಯಾರಿಕೆ:** ಬಣ್ಣ ಮತ್ತು ವಾರ್ನಿಶ್, ಸಿಮೆಂಟ್, ಡಿಸ್ಟೆಂಪರ್, ಅಗರಬತ್ತಿ, ಮುದ್ರಣ ಇಂಕು, ಸೋಪಿನ ದ್ರವ ಮತ್ತು ಫಿನಾಲ್, ಲಾಂಡ್ರಿ ಸೋಪು, ಡಿಟರ್‌ಜೆಂಟ್ ಕೇಕ್ ಮತ್ತು ಪೌಡರ್, ಬರವಣಿಗೆಯ ಇಂಕು, ಬೆಂಕಿಕಡ್ಡಿ, ಸುಗಂಧದ ಪೌಡರ್, ಬ್ಲೀಚಿಂಗ್ ಪೌಡರ್ ಮೊದಲಾದವು ರಾಸಾಯನಿಕ ವಸ್ತುಗಳ ತಯಾರಿಕಾ ಗುಂಪಿನಲ್ಲಿ ಬರುತ್ತವೆ. ಜಿಲ್ಲೆಯಲ್ಲಿ ೨೦೦೫ರ ಜೂನ್ ಅಂತ್ಯಕ್ಕೆ ೨೮೪ ಘಟಕಗಳಿದ್ದು, ರೂ. ೧,೬೭೩.೬೧ ಲಕ್ಷ ಬಂಡವಾಳ ತೊಡಗಿಸಲಾಗಿದೆ. ಈ ಉದ್ಯಮಗಳು ೧,೭೭೪ ಮಂದಿಗೆ ಉದ್ಯೋಗ ಒದಗಿಸಿವೆ.

೮) **ಜನರಲ್ ಇಂಜಿನಿಯರಿಂಗ್**: ಜನರಲ್ ಇಂಜಿನಿಯರಿಂಗ್ ವ್ಯಾಪ್ತಿಗೆ ಯಂತ್ರೋಪಕರಣಗಳ ಬಿಡಿ ಭಾಗಗಳು, ವ್ಯವಸಾಯೋಪಕರಣ, ರೋಲಿಂಗ್‌ಷಟರ್ಸ್, ಗ್ರಿಲ್ಸ್ ಮತ್ತು ಗೇಟು, ಸ್ಟೀಲ್ ಫರ್ನಿಚರ್ಸ್, ಆಯಿಲ್ ಇಂಜಿನ್, ವೆಲ್ಡಿಂಗ್ ಮತ್ತು ಟರ್ನಿಂಗ್, ಬಿಲ್ಡರ್ಸ್ ಹಾರ್ಡ್‌ವೇರ್, ಬೋಲ್ಟ್ ಮತ್ತು ನಟ್ಟು, ಅಲ್ಯೂಮಿನಿಯಂ, ತಾಮ್ರ ಮತ್ತು ಹಿತ್ತಾಳೆ ಪಾತ್ರೆಗಳೇ ಮೊದಲಾದ ತಯಾರಿಕಾ ಘಟಕಗಳು ಸೇರುತ್ತವೆ. ಜಿಲ್ಲೆಯಲ್ಲಿ ೨೦೦೫ರ ಜೂನ್ ಅಂತ್ಯಕ್ಕೆ ಈ ಗುಂಪಿನ ಉದ್ಯಮಕ್ಕೆ ಸೇರಿದ ೧,೧೬೪ ಘಟಕಗಳಿದ್ದು, ರೂ. ೪,೬೦೪.೭೫ ಲಕ್ಷ ಬಂಡವಾಳ ತೊಡಗಿಸಲಾಗಿದೆ. ಇವು ೬,೮೩೨ ಮಂದಿಗೆ ಉದ್ಯೋಗ ಒದಗಿಸಿದ್ದವು.

೯) **ಗಾಜು ಮತ್ತು ಸಿರಾಮಿಕ್ ಕೈಗಾರಿಕೆ:** ಸುಣ್ಣ ತಯಾರಿಕೆ, ಟೇಬಲ್ ಮೌಲ್ಡ್, ಇಟ್ಟಿಗೆ ತಯಾರಿಕೆ, ಕಲ್ಲನ್ನು ತುಂಡರಿಸುವುದು ಮತ್ತು ಸಿಮೆಂಟ್ ಪೈಪ್ ತಯಾರಿಕೆ, ಬಳಪದ ಕಲ್ಲಿನ ಸಾಮಾನು ತಯಾರಿಕೆ ಮುಂತಾದವುಗಳು ಸೇರುತ್ತವೆ. ಜಿಲ್ಲೆಯಲ್ಲಿ ೨೦೦೫ ಜೂನ್ ಅಂತ್ಯಕ್ಕೆ ೩೧೯ ಈ ಕೈಗಾರಿಕೆಗಳ ವ್ಯಾಪ್ತಿಗೆ ಸೇರಿದ್ದು, ರೂ. ೧,೩೭೮.೪೦ ಲಕ್ಷ ಬಂಡವಾಳ ತೊಡಗಿಸಲಾಗಿದೆ. ಇವು ೧,೬೪೮ ಮಂದಿಗೆ ಉದ್ಯೋಗ ಕಲ್ಪಿಸಲಾಗಿದೆ.

**೧೦) ಫೆರಸ್ ಹಾಗೂ ನಾನ್‌ಫೆರಸ್ ಕೈಗಾರಿಕೆಗಳು:** ಜಿಲ್ಲೆಯಲ್ಲಿ ೧೯೭೦ರಲ್ಲಿ ಒಟ್ಟು ೪೬ ಫೆರಸ್ ಹಾಗೂ ನಾನ್‌ಫೆರಸ್ ಘಟಕಗಳಿದ್ದು, ಇವುಗಳಲ್ಲಿ ಸ್ಟೀಲ್‌ವೈರ್, ಇಂಡಸ್ಟ್ರೀಯಲ್ ಸ್ಟಾಂಪಲ್ಸ್, ಸ್ಟ್ರಕ್ಚರಲ್ಸ್, ನಾನ್–ಫೆರಸ್ ಕ್ಯಾಸ್ಟಿಂಗ್ಸ್ ಮೆಷಿನ್ ಪ್ಯಾಬ್ರಿಕೇಷನ್ಸ್ ಲೀಪ್ ಸ್ಪ್ರಿಂಗ್ಸ್, ಬ್ರೇಕ್‌ಡ್ರಮ್ಸ್, ಚಕ್ರದ ಮಧ್ಯ ಭಾಗ (ಹಬ್ಸ್), ಸಿಲಿಂಡರ್ ಲಾಯಿನರ್ಸ್, ಸ್ಪ್ರಿಂಗ್ ಸ್ಟೀಲ್, ಯಂತ್ರದ ಬಿಡಿ ಭಾಗಗಳು, ಮೌಲ್ಡಿಂಗ್ ರಿಂಗ್ಸ್, ವ್ಯವಸಾಯೋಪಕರಣಗಳು, ನಾನ್‌ಫೆರಸ್ ಫಿಟ್ಟಿಂಗ್ಸ್ ಮತ್ತು ಸ್ಟೀಲ್ ಉತ್ಪನ್ನಗಳು, ಸೂಟ್‌ಕೇಸ್, ಪೆಟ್ಟಿಗೆ, ಗೃಹೋಪಕರಣಗಳು ಟಿನ್‌ಕಂಟೇನರ್ಸ್ ಮುಂತಾದವುಗಳನ್ನು ತಯಾರಿಸಲಾಗುತ್ತಿತ್ತು. ಇವುಗಳಲ್ಲಿ ರೂ. ೯೦ ಲಕ್ಷಕ್ಕೂ ಹೆಚ್ಚು ಬಂಡವಾಳ ತೊಡಗಿಸಲಾಗಿದ್ದು, ೮೦೦ ಮಂದಿಗೆ ಉದ್ಯೋಗ ಒದಗಿಸಿದ್ದವು. ಜಿಲ್ಲೆಯಲ್ಲಿ ೩೦–೬–೨೦೦೫ರ ವರೆಗೆ ೨೧೭ ಫೆರಸ್ ಮತ್ತು ನಾನ್‌ಫೆರಸ್ ಘಟಕಗಳಿದ್ದು, ೩೭೭.೮೮ ಲಕ್ಷ ರೂ.ಗಳ ಬಂಡವಾಳ ತೊಡಗಿಸಿ ೧,೩೪೨ ಮಂದಿಗೆ ಉದ್ಯೋಗ ನೀಡಿದ್ದವು. ಹೆಚ್ಚಿನ ವಿವರಗಳಿಗೆ ಕೋಷ್ಟಕ ೫.೭ ಹಾಗೂ ಕೋಷ್ಟಕ ೫.೮ ಅನ್ನು ನೋಡಿ.

## ರಫ್ತು ಆಧಾರಿತ ಕೈಗಾರಿಕೆಗಳು (EOU)

ಜಿಲ್ಲೆಯಲ್ಲಿ ಶೇ. ನೂರಕ್ಕೆ ನೂರರಷ್ಟು ರಫ್ತು ಆಧಾರಿತ ಕೈಗಾರಿಕೆಗಳಿದ್ದು (EOU), ವಿದೇಶಿ ವಿನಿಮಯಗಳಿಸುವ ಮೂಲಕ ಜಿಲ್ಲೆಯ ಸರ್ವತೋಮುಖ ಬೆಳವಣಿಗೆಗೆ ಸಹಕಾರಿಯಾಗಿವೆ. ಅವುಗಳು ಹೀಗಿವೆ, ಪ್ರೈಮಸಿ ಇಂಡಸ್ಟ್ರೀಸ್ (M/S Primcy Industries (Pvt) Ltd.) (ಪ್ರೈ) ಲಿಮಿಟೆಡ್ ಕಂಪನಿಯು ೨೫,೬೦೦ ಕೆ.ಜಿ ನಿವ್ವಳ ತೂಕದ ಡಿಸೈನರ್ ವ್ಯಾಕ್ಸ್ ಕ್ಯಾಂಡಲ್, ಅರೋಮೆಟಿಕ್ ಕ್ಯಾಂಡಲ್‌ಗಳನ್ನು ಚಾರ್ಲ್ಸ್‌ಟನ್ ದೇಶಕ್ಕೆ ರಫ್ತು ಮಾಡುತ್ತಿದೆ. ಸೋನಾರ್ ಇಂಪೆಕ್ಸ್ ಕಂಪನಿಯು (M/S Sonar Impex) ಗ್ರಾನೈಟ್ ಅನ್ನು ಚೀನಾಕ್ಕೆ ರಫ್ತು ಮಾಡುತ್ತಿದೆ. ಕುದುರೆ ಮುಖ ಐರನ್ ಓರ್ ಕಂಪನಿ(ಲಿ)ಯು (KIOCL) ಕಬ್ಬಿಣದ ಅದುರು ಸಾಂದ್ರತೆ (Concentrate) ಹಾಗೂ ಚಿಕ್ಕಚಿಕ್ಕ ಕಬ್ಬಿಣದ ಅದಿರಿನ ಉಂಡೆ(Pellets)ಗಳನ್ನು ಚೀನಾ, ಇರಾನ್, ತೈವಾನ್ ಹಾಗೂ ಜಪಾನ್ ದೇಶಗಳಿಗೆ ರಫ್ತುಮಾಡುತ್ತಿದೆ. ಚಿರಾಮಿಕ್–ಪ್ರಸಿಷನ್ ಇಂಡಿಯಾ, (Chimanmith Precision India) ಷಾವಿಂಗಾಲ್ ಪ್ರಿಷಿಸನ್ ಇಂಡಿಯಾ (Shawingal Precision India) ಹಾಗೂ ಗಿಲ್‌ಟೆಕ್ ಇಂಟರ್‌ನ್ಯಾಷನ್ (ಪ್ರೈ) ಲಿ. (Gill Tech International (Pvt) Limited) ಈ ಕಂಪನಿಗಳು ಗಡಿಯಾರದ ಬಿಡಿಭಾಗಗಳನ್ನು ರಫ್ತು ಮಾಡುತ್ತಿವೆ. ಯಾನಪೋಯ ಮಿನರಲ್ ಅಂಡ್ ಗ್ರಾನೈಟ್(ಲಿ) (Yanapoya Mineral and Granits) ಗ್ರಾನೈಟಗಳನ್ನು ಹೋರದೇಶಗಳಿಗೆ ರಫ್ತು ಮಾಡಿ ವಿದೇಶಿ ವಿನಿಮಯ ಗಳಿಸುತ್ತಿದೆ.

## ಮರದ ಉತ್ಪನ್ನಗಳು

ಜಿಲ್ಲೆಯಲ್ಲಿ ೧೯೭೨ರಲ್ಲಿ ಒಟ್ಟು ಮರದ ಉತ್ಪನ್ನಗಳಿಗೆ ೬೭ ಸಂಬಂಧಿಸಿದ ಘಟಕಗಳಿದ್ದವು. ಮರದ ಪೀಠೋಪಕರಣಗಳು, ಪ್ಲೈವುಡ್, ಮೆಕಾನಿಕಲ್ ಫಿಷಿಂಗ್ ಬೋಟ್‌ಗಳು, ವ್ಯವಸಾಯ ಸಾಮಗ್ರಿಗಳು, ಕಟ್ಟಡ ಕಟ್ಟಲು ಬೇಕಾದ ಮರಮಟ್ಟುಗಳು, ಪ್ಯಾಂಕಿಂಗ್ ಕೇಸ್‌ಗಳು, ವಾಹನಗಳ ರಕ್ಷಾ ಕವಚ ತಯಾರಿಕೆ, ಮುಂತಾದವು. ಇವುಗಳಲ್ಲಿ ತೊಡಗಿಸಿದ ಬಂಡವಾಳ ರೂ. ೮೩ ಲಕ್ಷಗಳಾಗಿದ್ದು, ೧,೧೦೦ಕ್ಕೂ ಹೆಚ್ಚು ಜನರಿಗೆ ಅವು ಉದ್ಯೋಗ ಒದಗಿಸಿದ್ದವು. ಈ ಉದ್ಯಮಗಳು ೪೦ ಲಕ್ಷ ರೂ.ಗಳಿಗೂ ಹೆಚ್ಚು ವಹಿವಾಟು ನಡೆಸುತ್ತಿದ್ದವು.

ದಕ್ಷಿಣ ಕನ್ನಡ ಜಿಲ್ಲೆಯು ೧೯೯೭–೯೮ರಲ್ಲಿ ದಕ್ಷಿಣ ಕನ್ನಡ ಹಾಗೂ ಉಡುಪಿ ಎಂದು ಎರಡು ಜಿಲ್ಲೆಗಳಾಗಿ ವಿಭಜನೆಗೊಂಡಿದೆ. ವಿಭಜನೆಗೊಂಡ ನಂತರ ದಕ್ಷಿಣ ಕನ್ನಡ ಜಿಲ್ಲೆಯು ೪೭೭೧.೪೯ಚ.ಕಿ.ಮೀ. ಭೌಗೋಳಿಕ ವಿಸ್ತೀರ್ಣ ಹೊಂದಿದ್ದು, ಇದು ಕರ್ನಾಟಕದಲ್ಲಿ ಭೌಗೋಳಿಕವಾಗಿ ಹಾಗೂ ಜೀವನಶಾಸ್ತ್ರಕ್ಕೆ ಸಂಬಂಧಿಸಿದಂತೆ ಮಹತ್ವ ಪಡೆದುಕೊಂಡಿದೆ. ಜಿಲ್ಲೆಯಲ್ಲಿ ಪಶ್ಚಿಮ ಘಟ್ಟದಲ್ಲಿ ಹುಟ್ಟಿ ಪಶ್ಚಿಮಕ್ಕೆ ಹರಿಯುವ ಮೂರು ನದಿಗಳಿದ್ದು, ಇವು ಅರಬ್ಬೀ ಸಮುದ್ರ ಸೇರುತ್ತವೆ. ದಿ ಮೈಸೂರು ಕಮರ್ಷಿಯಲ್ ಯೂನಿಯಾನ್ (ಲಿ). ಇದು ೧೯೬೫ರಲ್ಲಿ ೧೮ ಲಕ್ಷ ಬಂಡವಾಳದೊಂದಿಗೆ ಬಂಟ್ವಾಳದಲ್ಲಿ ಸ್ಥಾಪನೆಗೊಂಡಿತು. ಇದು ೧೩೦ ಉದ್ಯೋಗಿಗಳಿಗೆ ಒದಗಿಸಿತ್ತು. ಇದು ವಿನಿಯರ್ಸ್ (Veneers) ಉತ್ಪಾದಿಸುವ ಏಕೈಕ ಘಟಕವಾಗಿದೆ. ಇದರ ಹಿಂದಿನ ಹೆಸರು ೧೯೪೩ರಲ್ಲಿ ಬೆಂಗಳೂರಿನಲ್ಲಿ ಸ್ಥಾಪನೆಗೊಂಡಿದ್ದ ಮೈಸೂರು ಫ್ಲೈವುಡ್ ಕಾರ್ಪೊರೇಷನ್, ಡೆಕೋರೇಟಿವ್ ಪ್ಲೈವುಡ್, ಟೀಕ್, ಭಾರತೀಯ ರೋಸ್‌ವುಡ್ ಚಾಂಪ್ ಅಕ್ರೋಟ್ (Walnut), ಪಾಡೌಕ್ (Padauk), ಬಿಳಿ ದೇವದಾರು ಮುಂತಾದ ಮರಗಳನ್ನು ಉಪಯೋಗಿಸಲಾಗುತ್ತಿತ್ತು. ಇದು ಶ್ರೀಲಂಕಾ, ಕೆನಡಾ ಹಾಗೂ ಪಶ್ಚಿಮ ಏಷ್ಯಾ ರಾಷ್ಟ್ರಗಳಿಗೆ ರಫ್ತು ಮಾಡುತ್ತಿತ್ತು. ಜಿಲ್ಲೆಯಲ್ಲಿ ೩೦–೬–೨೦೦೫ಕ್ಕೆ ೧,೪೪೩ ಮರದ ಉತ್ಪನ್ನಗಳ ೧,೪೪೩ ಮರದ ಉತ್ಪನ್ನಗಳ ಘಟಕಗಳಿದ್ದು, ೧,೪೫೬.೧೯ ರೂ.ಗಳ ಬಂಡವಾಳ ತೊಡಗಿಸಲಾಗಿದೆ. ಇವು ೭,೫೨೫ ಮಂದಿಗೆ ಉದ್ಯೋಗ ಒದಗಿಸಿವೆ.

## ಚಾಪೆ ತಯಾರಿಕೆ

**೧) ಹುಲ್ಲಿನ ಚಾಪೆ:** ಇದು ಒರಟಾದ ಚಾಪೆಯಾಗಿದ್ದು, ಇದಕ್ಕೆ ಬೇಕಾಗುವ ಹುಲ್ಲನ್ನು ದೊರೆ (Dore) ಎಂದು ಕರೆಯಲಾಗುತ್ತದೆ. ಈ ಬಗೆಯ ಹುಲ್ಲು ನದಿಗಳ ದಂಡೆಗಳಲ್ಲಿ, ನೀರು ಹರಿಯುವ ಜಾಗಗಳಲ್ಲಿ ಬೆಳೆಯುತ್ತದೆ. ಇದಲ್ಲದೆ ಈಚಲು ಗಿಡದ ಎಲೆಗಳಿಂದ ಚಾಪೆ ನೆಯ್ಯುತ್ತಾರೆ. ಇದನ್ನು 'ಈಚಲು ಚಾಪೆ' (ಕೇದಗೆ ಎಲೆಯ ಚಾಪೆ) ಎಂದೇ ಕರೆಯಲಾಗುತ್ತದೆ. ಈ ವೃತ್ತಿಯಲ್ಲಿ ತೊಡಗಿರುವವರಲ್ಲಿ ಮಹಿಳೆಯರೇ ಹೆಚ್ಚಾಗಿದ್ದರು. ಹರಿಜನ, ಮಾಪಿಗಳು, ಬಂಟರು, ಪರಿವೀಕ್ಷಣಾಕಾರರು, ಚಿನ್ನದ ಕೆಲಸಗಾರರ ಹಾಗೂ ಬಡಗಿಗಳ ಹೆಂಗಸರುಗಳು ಈ ವೃತ್ತಿಯಲ್ಲಿ ತೊಡಗಿದ್ದರು. ತಮಗೆ ಬೇಕಾದ ಕಚ್ಚಾ ವಸ್ತುಗಳನ್ನು ಸ್ಥಳೀಯ ಕಾಡುಗಳಿಂದ ಪಡೆದುಕೊಳ್ಳುತ್ತಿದ್ದರು. ಚಾಪೆಯು ಸಾಮಾನ್ಯವಾಗಿ ಐದು ಅಡಿ ಉದ್ದ ಹಾಗೂ ೨೧/೨ ಅಡಿ ಅಗಲವಿರುತ್ತಿತ್ತು. ಈ ಚಾಪೆಗಳು ಮಂಗಳೂರಿನಲ್ಲಿ ದೊಡ್ಡ ಪ್ರಮಾಣದಲ್ಲಿ ಮಾರಾಟವಾಗುತ್ತಿದ್ದವು.

**೨) ದತ್ತೆ ಚಾಪೆ** (Datte mats): ಈ ರೀತಿಯ ಚಾಪೆಗಳನ್ನು ಹೆಂಗಸರು ಮತ್ತು ಮಕ್ಕಳು ನೆಯ್ಯುತ್ತಿದ್ದರು. ಇವರು ಕಾಡುಗಳಿಂದ ಕಚ್ಚಾ ವಸ್ತುಗಳನ್ನು ತರಿಸಿಕೊಳ್ಳುತ್ತಿದ್ದರು. ದತ್ತೆ ಮರಗಳು ಜಿಲ್ಲೆಯಲ್ಲಿ ಸಮೃದ್ಧಿಯಾಗಿದ್ದು, ಈ ಮರಗಳ ಎಲೆಗಳು ಒಣಗಿದ್ದು, ಬೇಸಿಗೆವರೆಗೂ ಬಳಸಬಹುದಾಗಿತ್ತು. ಈ ಮರಗಳಿಂದ ಸಿಗುವ ಗಿಡ್ಡ ಎಲೆಗಳು, ಮೂರು ಇಂಚು ಅಗಲದಿಂದ ಕೂಡಿರುತ್ತವೆ. ಈ ಬಗೆಯ ಚಾಪೆಗಳು ಸಂತೆ ಅಥವಾ ವ್ಯಾಪಾರಸ್ಥರುಗಳಲ್ಲಿ ಸಿಗುತ್ತವೆ. ಈ ಚಾಪೆಯನ್ನು ಬೆಲ್ಲ ಹಾಗೂ ತಂಬಾಕು ಪ್ಯಾಕ್ ಮಾಡಲು ಬಳಸುತ್ತಿದ್ದರು.

## ಮರಗೆಲಸ

ಜಿಲ್ಲೆಯಲ್ಲಿ ವಿಸ್ತಾರವಾದ ಅರಣ್ಯ ಪ್ರದೇಶವಿರುವುದರಿಂದ ಮರಗೆಲಸ ಪುರಾತನವಾದ ಒಂದು ಪ್ರಮುಖ ಉದ್ಯೋಗವಾಗಿದೆ. ಗ್ರಾಮೀಣ ಬಡಗಿಗಳು, ವ್ಯವಸಾಯೋಪಕರಣ, ಬಾಗಿಲು, ಕಿಟಕಿ, ಪೀಠೋಪಕರಣ ಮುಂತಾದ ಅಗತ್ಯ ವಸ್ತುಗಳನ್ನು ಸಿದ್ಧಪಡಿಸುತ್ತಿದ್ದರು. ನಗರ ಭಾಗದ ಬಡಗಿಗಳಿಗೆ ವ್ಯಾಪಕ ಬೇಡಿಕೆಯಿದೆ. ಹಲಸಿನ ಮರ, ನಂದಿ, ಮಾವು, ತೇಗ, ಕರ್ ಮರ, ಟೀರ್‌ವಾ (Teerva) ಹಾಗೂ ಮರುವ (Maruva) ಮುಂತಾದ ಮರಗಳನ್ನು ಕೀಟಕಿ, ಬಾಗಿಲು, ಪೀಠೋಪಕರಣ ಮುಂತಾದವುಗಳನ್ನು ತಯಾರಿಸಲು ಇಂದಿಗೂ ಬಳಸಲಾಗುತ್ತಿದೆ. ಮರಗಳನ್ನು ಟಿಂಬರೂ ಡಿಪೋ ಮಾಲೀಕರಿಂದ ಅಥವಾ ಖಾಸಗಿ ಅರಣ್ಯ ಪ್ರದೇಶ ಹೊಂದಿರುವ ಮಾಲೀಕರಿಂದ ಪಡೆಯಲಾಗುತ್ತಿತ್ತು. ಮಂಗಳೂರಿನಲ್ಲಿ ಶಾಲಾ ಕಾಲೇಜುಗಳ ಸಂಖ್ಯೆ ಅಧಿಕವಾಗಿರುವುದರಿಂದ ಅವರಿಗೆ ಬೇಕಾದ ನಾನಾಬಗೆಯ ಮರದ ಪೀಠೋಪಕರಣಗಳು ಅಗತ್ಯವಾಗಿರುತ್ತವೆ. ಗ್ರಾಮೀಣ ಬಡಗಿಗಳು ಕ್ರಮೇಣ ನಗರ ಪ್ರದೇಶಗಳಿಗೆ ವಲಸೆ ಹೋಗುತ್ತಿದ್ದಾರೆ.

## ಬುಟ್ಟಿ ತಯಾರಿಕೆ

ವ್ಯವಸಾಯ ಹಾಗೂ ಗೃಹಬಳಕೆ ವಸ್ತುವನ್ನಾಗಿ ಬುಟ್ಟಿಯನ್ನು ಜಿಲ್ಲೆಯ ಎಲ್ಲಾ ಭಾಗಗಳಲ್ಲೂ ಬಳಸುತ್ತಿದ್ದರು. ಬುಟ್ಟಿಯನ್ನು ತಯಾರಿಸಲು ಬಿದಿರು, ಬೆತ್ತ, ಕುಕ್ಕೆ, ಗಾಟಿಕೆ, ತಾಳೆಮರದ ದಿಮ್ಮಿಗಳಿಂದ ಹಾಗೂ ಕಾಡುಬಳ್ಳಿಗಳನ್ನು (Wild creeper) ಬಳಸುತ್ತಿದ್ದರು. ಬಿಲ್ಲವ. ಕೊರಗ, ಗೌಡ ಹಾಗೂ ಕುಡುಬಿ ಜಾತಿಯ ಜನರು ಬುಟ್ಟಿ ಹೆಣೆಯುವ ವೃತ್ತಿಯಲ್ಲಿ ತೊಡಗಿದ್ದರು. ಕೆಲವು ಜನರು ಈ ವೃತ್ತಿಯನ್ನು ಪೂರ್ಣಕಾಲಿಕ ವೃತ್ತಿಯಾಗಿಸಿಕೊಂಡಿದ್ದರೆ, ಇನ್ನೂ ಕೆಲವರು ವ್ಯವಸಾಯದ ಜೊತೆಗೆ ಉಪ–ಕಸುಬನ್ನಾಗಿಸಿ ಕೊಂಡಿದ್ದರು. ಬೆಳ್ತಂಗಡಿ, ಸುಳ್ಯ, ಕುಂದಾಪುರ ಹಾಗೂ ಕಾರ್ಕಳ ತಾಲೂಕುಗಳಲ್ಲಿ ಸುಮಾರು ೨,೦೦೦ ಕುಟುಂಬಗಳು ಬುಟ್ಟಿ ತಯಾರಿಕಾ ವೃತ್ತಿಯನ್ನು ಅವಲಂಬಿಸಿದ್ದರು. ಬಿದಿರನ್ನು ಸೀಳಿ ಬೇಕಾದ ಗಾತ್ರಕ್ಕನುಗುಣವಾಗಿ ದೆಬ್ಬೆ (ಸ್ಟ್ರಿಪ್)ಗಳನ್ನು ಮಾಡಿಕೊಂಡು ಬುಟ್ಟಿಗಳನ್ನು ನೆಯ್ಯುತ್ತಿದ್ದರು.

ಪಶ್ಚಿಮ ಘಟ್ಟದ ಅಂಚಿನಲ್ಲಿರುವ ಪುತ್ತೂರು, ಕಾರ್ಕಳ, ಕುಂದಾಪುರಗಳಲ್ಲಿ ಬೆತ್ತ (ಕೇನ್) ಹೇರಳವಾಗಿ ದೊರಕುತ್ತಿದ್ದು, ಬೆತ್ತದ ಬುಟ್ಟಿಗಳನ್ನೂ, ಉಡುಪಿ, ಮಂಗಳೂರಿನಲ್ಲಿ ಸಿಗುವ ಬಿದಿರು ಹಾಗೂ ಕಾಡುಬಳ್ಳಿಗಳಿಂದ ಬುಟ್ಟಿಗಳನ್ನು ನೆಯ್ಯುತ್ತಿದ್ದರು. ಈ ಉದ್ದಿಮೆಯಲ್ಲಿ ತೊಡಗಿರುವವರನ್ನು ಅರಣ್ಯ ಗುತ್ತಿಗೆದಾರರು ಹಾಗೂ ಸ್ಥಳೀಯ ವ್ಯಾಪಾರಿಗಳು ಸ್ವಪ್ರಯೋಜನಕ್ಕಾಗಿ ಬಳಸಿಕೊಳ್ಳುತ್ತಿದ್ದರು. ಅವರು ಈ ವೃತ್ತಿಯಲ್ಲಿ ತೊಡಗಿರುವವರಿಗೆ ಕಡಿಮೆ ಹಣವನ್ನು ಮುಂಗಡವಾಗಿ ಕೊಟ್ಟು ವಸ್ತುಗಳನ್ನು ಕೊಂಡು ಹೆಚ್ಚು ಬೆಲೆಗೆ ಮಾರಾಟ ಮಾಡಿಕೊಳ್ಳುತ್ತಿದ್ದರು. ಇಂಥ ಸಮಸ್ಯೆಗಳಿಂದ ಹೊರ ಬರಲು ಇವರು ನಾರವಿ ಹಾಗೂ ಅರಸಿನಮಕ್ಕಿ (ಬೆಳ್ತಂಗಡಿ ತಾ॥) ಹಾಗೂ ಮಂಡೇಕೋಲು (ಸುಳ್ಯ ತಾ॥) ಗಳಲ್ಲಿ ಕೈಗಾರಿಕಾ ಸಹಕಾರಿ ಸಂಘಗಳನ್ನು ಸ್ಥಾಪಿಸಿಕೊಂಡಿದ್ದರು.

**ಜೇನು ಸಾಕಾಣಿಕೆ**

ಜಿಲ್ಲೆಯಲ್ಲಿ ೧೯೩೮ರವರೆಗೆ ಜೇನು ಸಾಕಾಣಿಕೆಯನ್ನು ಜಿಲ್ಲೆಯ ಪ್ರಮುಖ ಉದ್ಯೋಗವೆಂದು ಪರಿಗಣಿಸಿರಲಿಲ್ಲ. ಮಲೆನಾಡಿನಲ್ಲಿ ವಾಸಿಸುತ್ತಿದ್ದ ಆದಿವಾಸಿ ಜನರು ಬೇಸಿಗೆ ಕಾಲದಲ್ಲಿ ಜೇನನ್ನು ಸಂಗ್ರಹಿಸಿ, ಕಡಿಮೆ ಬೆಲೆಗೆ ಮಾರಾಟ ಮಾಡುತ್ತಿದ್ದರು. ಅಲ್ಲಿಯ ಜನ ಮಡಿಕೆಗಳಲ್ಲಿ ಜೇನು ಸಾಕಿ ಜೇನುತುಪ್ಪವನ್ನು ತೆಗೆಯುತ್ತಿದ್ದರು. ಆದರೆ ಇವರಿಗೆ ಜೇನುಸಾಕಾಣಿಕೆಯ ಬಗ್ಗೆ ತಾಂತ್ರಿಕ ಜ್ಞಾನವಿರಲಿಲ್ಲ. ಅಂತಹ ಸಂದರ್ಭದಲ್ಲಿ ದಕ್ಷಿಣ ಕನ್ನಡ ಸಹಕಾರಿ ಜೇನು ಸಾಕಾಣಿಕೆ, ಜೇನುತುಪ್ಪ ಉತ್ಪಾದನೆ ಹಾಗೂ ಮಾರಾಟ ಸಂಘ (ಲಿ) ೧೯೩೮ರಲ್ಲಿ ಪ್ರಾರಂಭವಾಯಿತು. ಜೇನು ಸಾಕಾಣಿಕೆ ಒಂದು ಲಾಭದಾಯಕ ಗೃಹ ಕೈಗಾರಿಕೆ ಎಂದು ಜನಪ್ರಿಯಗೊಳಿಸುವುದು ಹಾಗೂ ಜೇನು ಸಾಕಾಣಿಕೆದಾರರಿಗೆ ತಾಂತ್ರಿಕ ಜ್ಞಾನ ನೀಡುವುದು ಇದರ ಮುಖ್ಯ ಉದ್ದೇಶವಾಗಿತ್ತು. ೧೯೪೫ರಲ್ಲಿ ಮಂಗಳೂರಿನಲ್ಲಿ ಅಖಿಲ ಭಾರತ ಮಟ್ಟದ ಜೇನು ಸಾಕಾಣಿಕೆಗಾರರ ಸಮ್ಮೇಳನವನ್ನು ಏರ್ಪಡಿಸಲಾಗಿತ್ತು. ೧೯೪೫ರಲ್ಲಿ ಖಾದಿ ಮತ್ತು ಗ್ರಾಮೋದ್ಯೋಗ ಆಯುಕ್ತರು ಈ ಸಂಸ್ಥೆಗಳನ್ನು ಗುರುತಿಸಿ ತನ್ನ ಪರವಾಗಿ ಜೇನು ಸಾಕಾಣಿಕೆಯ ಜವಾಬ್ದಾರಿಯನ್ನು ವಹಿಸಿದ್ದರು. ಈ ಸಂಸ್ಥೆಯು ಜೇನು ಸಾಕಾಣಿಕೆಯ ಅಭಿವೃದ್ಧಿಗೆ ವಿವಿಧ ಯೋಜನೆಗಳಲ್ಲಿ ಖರ್ಚು ಮಾಡಬಹುದಾದ ಹಣದ ವಿವರವನ್ನು ನೀಡುತ್ತಿತ್ತು. ೩೫ ಉಪ–ಕೇಂದ್ರಗಳು, ಒಂದು ಮಾದರಿ ಜೇನುಹುಳ ಇಟ್ಟ ಸ್ಥಳ (One Apiary), ೧೦–ಜೇನು ಸಂಘ (Bee-Club), ೧೮ ಶಾಲೆಗಳ ಜೊತೆಗೆ ಜೇನು ಸಾಕಾಣೆ ಕೈಗಾರಿಕೆ ಹಾಗೂ ೧೦ ವಾಣಿಜ್ಯ ಜೇನುಹುಳ ಇಟ್ಟ ಸ್ಥಳಗಳು ಇದ್ದವು.

ಜಿಲ್ಲಾ ಖಾದಿ ಮತ್ತು ಗ್ರಾಮೀಣ ಕೈಗಾರಿಕೆಗಳ ಆಯೋಗವು ಜಿಲ್ಲೆಯಲ್ಲಿ ಎರಡು ಕ್ಷೇತ್ರ ಕಛೇರಿಗಳನ್ನು ಸ್ಥಾಪಿಸಿದೆ. ಒಂದು ಪುತ್ತೂರಿನಲ್ಲಿ, ಇನ್ನೊಂದು ಉಡುಪಿಯಲ್ಲಿವೆ. ನಾಲ್ಕು ಉಪ–ಕೇಂದ್ರಗಳನ್ನು ಬೆಳ್ಮಣ್ಣು (ಕಾರ್ಕಳ ತಾಲೂಕು) ಮುದಿಪುರ (ಬಂಟ್ವಾಳ ತಾ॥), ಗರಡಾಡಿ (ಬೆಳ್ತಂಗಡಿ ತಾ॥) ಹಾಗೂ ಕರ್ಮಾರ್ (ಪುತ್ತೂರು ತಾ॥)ನಲ್ಲಿ ಸ್ಥಾಪಿಸಲಾಗಿದೆ ಜೇನು ಸಾಕಾಣಿಕೆದಾರರಿಗೆ ಅನುಕೂಲ ಮಾಡಿಕೊಡಲು ಆಯೋಗವು ಕಾರ್ಯಶೀಲ ತರಬೇತಿ ಕ್ಯಾಂಪ್ ಅನ್ನು ವ್ಯವಸ್ಥೆಗೊಳಿಸಿ ಜೇನು ಉದ್ಯಮ ಅಭಿವೃದ್ಧಿಗೊಳಿಸಲು ಪ್ರಚಾರ ಕೈಗೊಂಡಿತು. ಅಲ್ಲದೆ ಬಹುಮಾನ ವಿತರಿಸಿತು. ಶುದ್ಧ ಜೇನುತುಪ್ಪವನ್ನು ಒದಗಿಸುವ ಮೂಲಕ ಜೇನಿಗೆ ಉತ್ತಮ ಬೆಲೆ ದೊರಕಿಸಲು ಪ್ರಯತ್ನಿಸಿತು.

**ಗೇರುಬೀಜ (ಗೋಡಂಬಿ) ಉದ್ಯಮ**

ಗೋಡಂಬಿ ಉದ್ಯಮ ಜಿಲ್ಲೆಯ ಮತ್ತೊಂದು ಪ್ರಮುಖ ಕೈಗಾರಿಕೆ. ಭಾರತದಲ್ಲಿ ಈ ಉದ್ಯಮ ೨೦ನೇ ಶತಮಾನದ ಎರಡನೇ ದಶಕದಲ್ಲಿ ಮೊದಲಭಾರಿಗೆ ಮಂಗಳೂರಿನಲ್ಲಿ ಪ್ರಾರಂಭವಾಯಿತು. ಆದ್ದರಿಂದ ಮಂಗಳೂರನ್ನು ಗೋಡಂಬಿ ಉದ್ಯಮದ ತವರು ಎಂದು ಕರೆಯಲಾಗುತ್ತದೆ. ನಂತರ ಈ ಉದ್ಯಮ ದೇಶದ ವಿವಿಧ ಭಾಗಗಳಿಗೆ ವಿಸ್ತರಿಸಿತು. ಭಾರತದಲ್ಲಿ ೧೯೭೨ರ ಹೊತ್ತಿಗೆ ಶೇ. ೮೦ರಷ್ಟು ಗೋಡಂಬಿ ಉದ್ಯಮ ಕೇರಳ ರಾಜ್ಯದ ಕೊಲ್ಲಂ ಮತ್ತಿತರ ಪ್ರದೇಶದಲ್ಲಿ ಕೇಂದ್ರಿಕೃತಗೊಂಡಿದ್ದರೆ, ಶೇ. ೧೨ರಷ್ಟು ದಕ್ಷಿಣ ಕನ್ನಡದಲ್ಲಿ ಕೇಂದ್ರಿಕೃತಗೊಂಡಿತ್ತು. ಜಿಲ್ಲೆಯಲ್ಲಿ ೧೯೭೧–೭೨ರಲ್ಲಿ ಗೋಡಂಬಿ ಬೆಳೆದ ಪ್ರದೇಶ ೧,೦೦,೭೯೪ ಎಕರೆಗಳಾಗಿದ್ದರೂ, ಬೇಡಿಕೆಗನುಗುಣವಾಗಿ ಗೋಡಂಬಿ ಉತ್ಪಾದನೆಯಾಗುತ್ತಿರಲಿಲ್ಲ. ಹಾಗಾಗಿ ಆಫ್ರಿಕದಿಂದ ಕಚ್ಚಾ ಗೋಡಂಬಿಯನ್ನು ಆಮದು ಮಾಡಿಕೊಳ್ಳಲಾಗುತ್ತಿತ್ತು. ಉತ್ತರ ಕನ್ನಡ ಹಾಗೂ ಕೇರಳದಿಂದಲೂ ಸ್ವಲ್ಪ ಪ್ರಮಾಣದ ಗೋಡಂಬಿಯನ್ನು ಪಡೆದುಕೊಳ್ಳಲಾಗಿತ್ತು.

ಜಿಲ್ಲೆಯ ಗೋಡಂಬಿ ಉದ್ಯಮಗಳಲ್ಲಿ ಮೂರು ಬಗೆಯ ಕಚ್ಚಾ ಗೋಡಂಬಿಯನ್ನು ಬಳಸಲಾಗುತ್ತಿದೆ. ೧) ಒಂದೇ ತೆರನಾದ ಉದ್ದವಾದ ಉತ್ತಮ ಗುಣಮಟ್ಟದ ಹಾಗೂ ಎಣ್ಣೆ ತೆಗೆಯಲು ಯೋಗ್ಯವಾದ ಸ್ಥಳೀಯವಾಗಿ ಉತ್ಪಾದಿಸುವ ಗೋಡಂಬಿಯನ್ನು ಪುತ್ತೂರು, ವಿಟಲ ಹಾಗೂ ಇತರೆ ಸ್ಥಳಗಳಿಂದ ಪಡೆಯಲಾಗುತ್ತಿತ್ತು. ೨) ಸ್ಥಳೀಯವಾಗಿ ಲಭ್ಯವಿರುವ ಗೋಡಂಬಿಗಿಂತ ತುಂಡಾಗಿರುವ ಆಫ್ರಿಕಾದ ಗೋಡಂಬಿಗೆ ಅಧಿಕ ಬೇಡಿಕೆ ಇದೆ. ಆದರೆ ಆಫ್ರಿಕಾದ ಗೋಡಂಬಿಯಲ್ಲಿ ಎಣ್ಣೆ ಅಂಶ ಕಡಿಮೆಯಿದ್ದು, ೧೬೮ ಪೌಂಡುಗೆ ೧೦ ರಿಂದ ೧೪ ಪೌಂಡು ಎಣ್ಣೆಯ ಅಂಶವಿದೆ. ೩) ಉತ್ತರ ಕನ್ನಡದಿಂದ ತರಿಸಿಕೊಳ್ಳುವ ಗೋಡಂಬಿ ಸ್ಥಳೀಯ ಗೋಡಂಬಿಗೆ ಹೋಲಿಸಿದರೆ ಇದು ಉತ್ತಮ ಗುಣಮಟ್ಟದ್ದಾಗಿರಲಿಲ್ಲ. ಜಿಲ್ಲೆಯಲ್ಲಿ ೨೦೦೪–೦೫ರ ಅಂತ್ಯಕ್ಕೆ ಸು ೫೦–೬೦ ಗೋಡಂಬಿ ಉದ್ಯಮಗಳು ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿವೆ

## ಇನ್ನಿತರೆ ಕೈಗಾರಿಕೆಗಳು

ಜಿಲ್ಲೆಯಲ್ಲಿ ೧೯೭೭ರಲ್ಲಿ ೨೮ ಇತರೆ ಸಣ್ಣ ಪ್ರಮಾಣದ ಕೈಗಾರಿಕಾ ಘಟಕಗಳಿದ್ದವು. ಅವುಗಳಲ್ಲಿ ಪಾಲಿಥಿನ್ ಬ್ಯಾಗ್, ಶೀಟ್, ನೈಲಾನ್ ಬಟನ್ಸ್, ಪ್ಲಾಸ್ಟಿಕ್ ಬಳೆ, ಪಾಲಿಥಿನ್ ಟ್ಯೂಬಿಂಗ್, ಕೇನ್ ಚೇರ್ಸ್ ಮತ್ತು ಇತರೆ ಕೇನ್‌ನಿಂದ ತಯಾರಾಗುವ ಉತ್ಪನ್ನಗಳು, ಚಿನ್ನದ ಆಭರಣ, ನಾರು (Coir), ಪ್ಲಾಸ್ಟಿಕ್ ಹಾಗೂ ಸೆಲ್ಯುಲಾಯಿಡ್ ಛತ್ರಿ, ಹ್ಯೂಮ್ ಪೈಪ್, ಸೆಪ್ಟಿಕ್ ಟ್ಯಾಂಕ್ (Septic tank), ಆರ್.ಸಿ.ಸಿ. ಕಂಬ ಮುಂತಾದ ಉತ್ಪನ್ನಗಳು ಸೇರಿದ್ದವು. ಇವುಗಳಲ್ಲಿ ೧೮ ಲಕ್ಷ ಬಂಡವಾಳ ತೊಡಗಿಸಲಾಗಿತ್ತು. ೪೦೦ಕ್ಕೂ ಹೆಚ್ಚು ಮಂದಿಗೆ ಉದ್ಯೋಗ ಒದಗಿಸಿದ್ದವು. ಈ ಉದ್ಯಮಗಳ ವಾರ್ಷಿಕ ಆದಾಯ ರೂ. ೨೧ ಲಕ್ಷಗಳಾಗಿತ್ತು. ಆದರೆ ೩೦.೬.೨೦೦೫ರ ಅಂತ್ಯಕ್ಕೆ ೧,೨೬೭ ಇತರೆ ಉತ್ಪನ್ನಗಳ ಘಟಕಗಳಿದ್ದು, ಇವುಗಳಲ್ಲಿ ರೂ. ೩,೫೯೮.೧೩ ಲಕ್ಷ ಬಂಡವಾಳ ತೊಡಗಿಸಲಾಗಿತ್ತು. ಇವು ೮,೭೪೯ ಮಂದಿಗೆ ಉದ್ಯೋಗ ಒದಗಿಸಿದ್ದವು.

## ಸಾಬೂನು ತಯಾರಿಕೆ

ದಕ್ಷಿಣ ಕನ್ನಡ ಜಿಲ್ಲೆಯು ಸಾಬೂನು ತಯಾರಿಕೆಯಲ್ಲಿ ಪ್ರಾಮುಖ್ಯತೆಯನ್ನು ಪಡೆದುಕೊಂಡಿತ್ತು. ಜಿಲ್ಲೆಯಲ್ಲಿ ೧೯೭೭ರಲ್ಲಿ ಸಾಬೂನು ತಯಾರಿಸುವ ಒಟ್ಟು ೧೬ ಕಾರ್ಖಾನೆಗಳಿದ್ದವು. ಅವುಗಳಲ್ಲಿ ೧೨ ಮಂಗಳೂರಿನಲ್ಲೂ, ಉಳಿದ ನಾಲ್ಕು ಜಿಲ್ಲೆಯ ಇತರೆ ಭಾಗಗಳಲ್ಲಿ ಇದ್ದವು. ಈ ಕೈಗಾರಿಕೆಗಳಿಗೆ ಬೇಕಾದ ಕಚ್ಚಾ ಪದಾರ್ಥಗಳೆಂದರೆ, ಕಾಸ್ಟಿಕ್ ಸೋಡ ಹಾಗೂ ಕೊಬ್ಬರಿ ಎಣ್ಣೆ ಪ್ರಾರಂಭದಲ್ಲಿ ನಮ್ಮ ರೈತರು ಬಾಂಬೆಯಿಂದ ಎಣ್ಣೆ ಆಮದು ಮಾಡಿಕೊಳ್ಳುತ್ತಿದ್ದರು. ನಂತರ ನಮ್ಮಲ್ಲಿ ಎಣ್ಣೆಗಾಣಗಳಿಂದ ಎಣ್ಣೆ ತೆಗೆಯಲು ಪ್ರಾರಂಭಿಸಿದರು. ಅಲ್ಲದೆ ಮಲಬಾರ್ ಹಾಗೂ ಕೊಚ್ಚಿನ್ ಮಾರುಕಟ್ಟೆಗಳಿಂದಲೂ ತರಿಸಿಕೊಳ್ಳುತ್ತಿದ್ದರು. ಮಂಗಳೂರಿನಲ್ಲಿ ಕೆಲವು ಜನಪ್ರಿಯ ಸಾಬೂನುಗಳನ್ನು ತಯಾರಿಸಲಾಗುತ್ತಿತ್ತು. ಮಂಗಳೂರಿನಲ್ಲಿ ತಯಾರಾಗುತ್ತಿದ್ದ ಸ್ನಾನದ ಸಾಬೂನಿಗೆ ಹೆಚ್ಚು ಬೇಡಿಕೆ ಇದ್ದುದ್ದರಿಂದ ಜಿಲ್ಲೆಯಲ್ಲಿಯೇ ಹೆಚ್ಚಾಗಿ ಬಳಸಲಾಗುತ್ತಿತ್ತು. ಉಳಿದ ಜಿಲ್ಲೆಗಳಲ್ಲೂ ಸಾಬೂನಿಗೆ ಹೆಚ್ಚು ಬೇಡಿಕೆ ಬಂದಿತು. ಕೆಳಗಿನ ಕೋಷ್ಟಕ ೫.೮ರಲ್ಲಿ ಕಾರ್ಖಾನೆಗಳಲ್ಲಿ ದುಡಿಯುತ್ತಿದ್ದ ಕಾರ್ಮಿಕರ ಸಂಖ್ಯೆ ಉತ್ಪಾದಿಸಿದ ಪ್ರಮಾಣವನ್ನು ನೀಡಲಾಗಿದೆ.

**ಕೋಷ್ಟಕ ೫.೮ : ಜಿಲ್ಲೆಯಲ್ಲಿದ್ದ ಸಾಬೂನು ಕಾರ್ಖಾನೆಗಳ ವಿವರ**

| ಕ್ರ.ಸಂ. | ಕಾರ್ಖಾನೆ ಹೆಸರು | ಕಾರ್ಮಿಕರ ಸಂಖ್ಯೆ | ಉತ್ಪನ್ನ (ಟನ್ನುಗಳಲ್ಲಿ) | |
|---|---|---|---|---|
| | | | ೧೯೬೮–೬೯ | ೧೯೬೯–೭೦ |
| ೧. | ಶ್ರೀ ರಾಮಕೃಷ್ಣ ಆಯಿಲ್‌ಮಿಲ್ಸ್ ಮಂಗಳೂರು | ೧೨೯ | ೧೭೨೮.೭೨೫ | ೧೬೫೫.೪೮೩ |
| ೨. | ವೆಸ್ಟ್ ಇಂಡಿಯಾ ಸೋಪ್ ಇಂಡಸ್ಟ್ರಿ, ಮಂಗಳೂರು | ೨೦ | ೬೪೧ | ೬೩೬ |
| ೩. | ಸಿ.ಜಿ. ಕಾಮತ್ ಅಂಡ್ ಕಂ. ಮಂಗಳೂರು | ೦೭ | ೧೫೭.೫೬೦ | ೨೨೪.೭೮೦ |
| ೪. | ಮಲ್ಯ ಸೋಪ್ ವರ್ಕ್ಸ್, ಮಂಗಳೂರು | ೧೭ | ೪೯೦ | ೫೬೫ |
| ೫. | ಹೈಕೊ ಸೋಪ್ ಇಂಡಸ್ಟ್ರಿ, ಮಂಗಳೂರು | ೦೫ | ೧೩೦ | ೧೪೦ |
| ೬. | ನಿತ್ಯಾನಂದ ಸೋಪ್ ಇಂಡಸ್ಟ್ರಿ, ಮಂಗಳೂರು | ೦೭ | ೧೦೦ | ೯೬ |

## ವಸ್ತ್ರೋದ್ಯಮ

ಜಿಲ್ಲೆಯಲ್ಲಿ ೧೯೭೭ರಲ್ಲಿ ಬಟ್ಟೆಗೆ ಸಂಬಂಧಿಸಿದ ೬೫ ಘಟಕಗಳಿದ್ದವು. ಕೈಮಗ್ಗದ ಸೀರೆ, ಲುಂಗಿ, ಸಿದ್ಧ ಉಡುಪು, ಹೊಸೈರಿ, ನಿಟ್ಟಿಂಗ್ (Knitting) ಹೊಸೈರಿ, ಹ್ಯಾಂಡ್‌ಲೂಮ್ ಫ್ಯಾಬ್ರಿಕ್ಸ್ ಮುಂತಾದವುಗಳ ತಯಾರಿಕೆಯ ಜೊತೆಗೆ ಬಟ್ಟೆಗೆ ಬಣ್ಣ ಹಾಕಲಾಗುತ್ತಿತ್ತು. ಈ ಉದ್ಯಮದಲ್ಲಿ ತೊಡಗಿಸಿದ್ದ ಬಂಡವಾಳ ರೂ. ೧೨ ಲಕ್ಷಗಳಾಗಿತ್ತು. ಸುಮಾರು ೨,೦೦೦ ಮಂದಿಗೆ ಉದ್ಯೋಗ ದೊರಕಿತ್ತು. ಈ ಉದ್ಯಮದ ವಾರ್ಷಿಕ ಉತ್ಪನ್ನ ರೂ. ೪೦ ಲಕ್ಷಗಳಾಗಿತ್ತು. ೩೦–೬–೨೦೦೫ರಲ್ಲಿ ೧,೨೪೬ ಜವಳಿ ಉದ್ಯಮದ ಘಟಕಗಳಿದ್ದು, ಇವುಗಳಲ್ಲಿ ೬೬೪.೨೪ ಲಕ್ಷ ರೂ.ಗಳ ಬಂಡವಾಳ ತೊಡಗಿಸಲಾಗಿದೆ. ಇವು ೫,೪೯೮ ಮಂದಿಗೆ ಉದ್ಯೋಗ ಸೃಷ್ಟಿಸಿವೆ.

## ಮುದ್ರಣಾಲಯಗಳು

ಜಿಲ್ಲೆಯಲ್ಲಿ ಅಕೌಂಟ್ ಬುಕ್ಸ್, ಬಿಲ್‌ಬುಕ್ಸ್, ನೋಟ್‌ಪುಸ್ತಕ, ಮದುವೆಯ ಕರೆಯೋಲೆ ಪತ್ರಿಕೆಗಳು, ಹ್ಯಾಂಡ್‌ಬಿಲ್ಸ್ ಮತ್ತು ಲೇಬಲ್ಸ್, ಕಾದಂಬರಿ, ಸಾಹಿತ್ಯ ಗ್ರಂಥಗಳು, ಡೈರೀಸ್, ಕ್ಯಾಲೆಂಡರ್, ನ್ಯೂಸ್ ಪೇಪರ್ಸ್ ಮುಂತಾದ ಕೆಲಸಗಳನ್ನು ಮುದ್ರಣಾಲಯಗಳು ಮಾಡುತ್ತಿವೆ. ಹಲವು ಮುದ್ರಣಾಲಯಗಳು ಬೈಂಡಿಂಗ್ ಕೆಲಸವನ್ನೂ ಸಹ ತೆಗೆದುಕೊಳ್ಳುತ್ತವೆ. ಇವು ಸ್ಥಳೀಯ ಸಗಟು ವ್ಯಾಪಾರಿಗಳಿಂದ ಪೇಪರ್ ಹಾಗೂ ಇಂಕನ್ನು ಖರೀದಿಸುತ್ತಿದ್ದು, ಹಿಂದೆ ಇಂಕನ್ನು ಮದ್ರಾಸ್‌ನಿಂದ ಆಮದು ಮಾಡಿಕೊಳ್ಳುತ್ತಿದ್ದವು. ಜಿಲ್ಲೆಯಲ್ಲಿ ೩೦-೬-೨೦೦೫ರಲ್ಲಿದ್ದಂತೆ ಒಟ್ಟು ೫೩೬ ಪ್ರಿಂಟಿಂಗ್ ಮತ್ತು ಲೇಖನ ಸಾಮಗ್ರಿ ಘಟಕಗಳಿದ್ದವು. ಇವುಗಳಲ್ಲಿ ೨.೨೯೧.೮೫ ಲಕ್ಷ ಬಂಡವಾಳ ತೊಡಗಿಸಲಾಗಿದ್ದು, ೩,೩೫೮ ಮಂದಿಗೆ ಉದ್ಯೋಗ ಒದಗಿಸಿದ್ದವು.

ಜಿಲ್ಲೆಯ ಉದಯವಾಣಿ, ವಿಜಯಕರ್ನಾಟಕ, ದಿ ಹಿಂದೂ, ಪ್ರಜಾವಾಣಿ. ಡೆಕನ್ ಹೆರಾಲ್ಡ್ ಪ್ರಮುಖ ವೃತ್ತ ಪತ್ರಿಕೆಗಳಾಗಿದ್ದು, ಜನತೆಗೆ ಸುದ್ದಿ ಮಧ್ಯಮಗಳಾಗಿವೆ. ಮಣಿಪಾಲ್ ಮಿಡಿಯಾ ನೆಟ್‌ವರ್ಕ್ಸ್ (ಲಿ). ಸಂಸ್ಥೆಯು, ೧೯೭೦ರಲ್ಲಿ ಸ್ಥಾಪನೆಗೊಂಡಿತು. ಈ ಸಂಸ್ಥೆಯು ಉದಯವಾಣಿ ವೃತ್ತಪತ್ರಿಕೆ ಪ್ರಸರಣ ಮಾಡುತ್ತಿದೆ. ಅಲ್ಲದೆ ೨೦,೦೦೦ ತರಂಗ (ವಾರಪತ್ರಿಕೆ) , ೫೦೦೦ ತುಷಾರ (ಮಾಸಿಕ) , ೧೫,೦೦೦ ರೂಪತಾರ (ಮಾಸಿಕ) ಚಲನಚಿತ್ರ ಮ್ಯಾಗಝೈನ್, ೧,೦೦,೦೦೦ ತುಂತುರು (೧೫ ದಿನಗಳಿಗೊಮ್ಮೆ) ಮಕ್ಕಳ ಮ್ಯಾಗಝೈನ್ ಮುಂತಾದ ಪತ್ರಿಕೆಗಳನ್ನು ಪ್ರಕಟಿಸಿ ಶಿಕ್ಷಣ, ವಿಜ್ಞಾನ, ಪರಿಸರ, ಕ್ರೀಡೆ, ಮನರಂಜನೆ ಮುಂತಾದ ಕ್ಷೇತ್ರಗಳಿಗೆ ಸಂಬಂಧಿಸಿದ ಜ್ಞಾನ ಸುಧೆಯನ್ನು ಓದುಗರಿಗೆ ಧಾರೆ ಎರೆಯುತ್ತಿದೆ. ಉದಯವಾಣಿ ಪತ್ರಿಕೆಯ ಮುದ್ರಣಾಲಯವು ಆದುನಿಕ ಮುದ್ರಣ ಯಂತ್ರಗಳಿಂದ ಕೂಡಿದ್ದು, ಒಂದು ಗಂಟೆಗೆ ಬಣ್ಣದ ೧೬ ಪುಟಗಳ ೫೦,೦೦೦ ಪ್ರತಿಗಳಗನ್ನು ಮುದ್ರಿಸುವ ಸಾಮರ್ಥ್ಯಹೊಂದಿದೆ. ಜಿಲ್ಲೆಯಲ್ಲಿ ಪ್ರಜಾವಾಣಿ ಪ್ರತಿದಿನ ೩೭೫೫ ಪತ್ರಿಕೆಗಳನ್ನು ಮುದ್ರಣ ಮಾಡುತ್ತಿದೆ. ೩೮೭೬ ಡೆಕ್ಕನ್ ಹೆರಾಲ್ಡ್, ೧೪೭೧ ಮಯೂರ ಹಾಗೂ ೩೪೫೫ ಸುಧಾ (ವಾರಪತ್ರಿಕೆ) ಪ್ರತಿಕೆಗಳಾಗಿವೆ. ಪ್ರಜಾವಾಣಿ ಮುದ್ರಣಾಲಯವು ನ್ಯೂಸ್‌ಲೈನ್ ೪೫ ಪ್ರಿಂಟಿಂಗ್ ಮಿಷನ್ ಬಳಸುತ್ತಿದ್ದು, ಇದರ ಸಾಮರ್ಥ್ಯ ಪ್ರತಿ ಗಂಟೆಗೆ ೪೫,೦೦೦ ಪ್ರತಿಗಳಾಗಿವೆ

## ಹೆಂಚಿನ ಕಾರ್ಖಾನೆ

ಮಂಗಳೂರಿನಲ್ಲಿ ತಯಾರಾಗುವ ಹೆಂಚುಗಳು **"ಮಂಗಳೂರು ಹೆಂಚು"** ಎಂದೇ ಇಂದಿಗೂ ಪ್ರಸಿದ್ಧಿ ಪಡೆದುಕೊಂಡಿದೆ. ಜಿಲ್ಲೆಯ ಮೊಟ್ಟ ಮೊದಲ ಹೆಂಚಿನ ಕಾರ್ಖಾನೆ ೧೮೬೫ರಲ್ಲಿ ಬಾಸೆಲ್ ಮಿಷನ್‌ನಿಂದಾಗಿ ಸ್ಥಾಪನೆಗೊಳ್ಳಲು ಸಾಧ್ಯವಾಯಿತು. ಮಿ॥ ಪ್ಲೀಬ್ಯಾಟ್ ಗೆ ಮೊದಲ ಹೆಂಚಿನ ಕಾರ್ಖಾನೆ ಸ್ಥಾಪಿಸಿದ ಕೀರ್ತಿ ಸಲ್ಲುತ್ತದೆ. ೧೨ ಮಂದಿಯೊಂದಿಗೆ ಆರಂಭಗೊಂಡ ಈ ಕಾರ್ಖಾನೆ. ಪ್ರತಿದಿನ ೫೬೦ ಹೆಂಚುಗಳನ್ನು ತಯಾರಿಸುತ್ತಿತು.

ವಿಭಜಿತ ಜಿಲ್ಲೆಯಲ್ಲಿ ಒಟ್ಟು ೬೯ ಹೆಂಚಿನ ಕಾರ್ಖಾನೆಗಳಿದ್ದು, ಅವುಗಳಲ್ಲಿ ೪೩ ಮಂಗಳೂರು ನಗರದಲ್ಲೇ ಸ್ಥಾಪನೆಗೊಂಡಿದ್ದವು. ಹೆಂಚು ತಯಾರಿಕೆಗೆ ಬೇಕಾದ ಉತ್ತಮವಾದ ಮಣ್ಣು ಹೇರಳವಾಗಿ ಸಿಗುತ್ತಿದೆ. ಅಲ್ಲದೆ ಪಶ್ಚಿಮ ಘಟ್ಟಗಳಿಂದಾಗಿ ಅಗ್ಗದ ಬೆಲೆಗೆ ಕಟ್ಟಿಗೆ ದೊರೆಯುತ್ತದೆ. ನೇತ್ರಾವತಿ ನದಿಯ ಉತ್ತರ ದಂಡೆಯ ಮೇಲೆ, ಹಿನ್ನೀರಿನ ಪ್ರದೇಶ ಹಾಗೂ ಸಮುದ್ರ ತೀರಗಳಲ್ಲಿ ಇವು ಸ್ಥಾಪನೆಯಾಗಿರುವುದು ಕಂಡುಬರುತ್ತದೆ. ಇಲ್ಲಿ ತಯಾರಾಗುವ ಹೆಂಚುಗಳು ಶ್ರೀಲಂಕಾ, ಬರ್ಮಾ, ಪೂರ್ವ ಆಫ್ರಿಕಾ, ಅಸ್ಟೇಲಿಯಾ ಹಾಗೂ ಪ್ರಪಂಚದ ಇತರೆ ಭಾಗಗಳಿಗೆ ರಫ್ತಾಗುತ್ತಿವೆ. ೧೯೯೧ರ ಸರ್ವೆ ಪ್ರಕಾರ ಕರ್ನಾಟಕದಲ್ಲಿ ೧೬೧ ಟೈಲ್ಸ್ ಕಾರ್ಖಾನೆಗಳಿದ್ದು, ಅವುಗಳಲ್ಲಿ ೭೫ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೇ ಇದ್ದ ಬಗ್ಗೆ ತಿಳಿದುಬರುತ್ತದೆ. ಮಂಗಳೂರಿನಲ್ಲಿ ಹೆಂಚಿನ ಕಾರ್ಖಾನೆಗಳ ಸಂಖ್ಯೆ ದಿನೇ ದಿನೇ ಕುಸಿಯುತ್ತಿದ್ದು, ಈಗ ೧೮ ರಿಂದ ೨೦ ಹೆಚ್ಚಿನ ಕಾರ್ಖಾನೆಗಳು ಕಾರ್ಯನಿರ್ವಹಿಸುತ್ತಿವೆ. ಭಾರತದಲ್ಲಿ ಒಟ್ಟು ರೂ. ೬೦ ಕೋಟಿ ಮೌಲ್ಯದ ಹೆಂಚುಗಳನ್ನು ತಯಾರಿಸುತ್ತಿದ್ದು, ಅದರಲ್ಲಿ ರೂ. ೨೦ ಕೋಟಿ ಮೌಲ್ಯದ ಹೆಂಚುಗಳನ್ನು ವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತಯಾರಿಸಲಾಗುತ್ತಿರುವುದು ಗಮನಾರ್ಹವಾಗಿದೆ. ಮಂಗಳೂರಿನಲ್ಲಿ ಈ ಕೈಗಾರಿಕೆಗಳ ಮೇಲೆ ರೂ. ೧೦ ಕೋಟಿ ಮೀರಿ ಬಂಡವಾಳ ತೊಡಗಿಸಲಾಗಿದೆ. ಇಲ್ಲಿ ತಯಾರಾಗುವ ಪ್ರತಿ ಸಾವಿರ ಹೆಂಚುಗಳಿಗೆ ರೂ. ೩೭೫೦ ರಿಂದ ರೂ. ೪೦೦೦ ಮೌಲ್ಯವಿದೆ. ರೂಫಿಂಗ್ ಟೈಲ್ಸ್, ಗ್ಲಾಸ್‌ಟೈಲ್ಸ್, ಗಾಗ್ಲೆಟ್ (ಮಣ್ಣಿನ ಹೂಜಿ) ಪ್ಲಾವರ್‌ಪಾಟ್ಸ್, ಪ್ಲೋರಿಂಗ್ ಬಿಕ್ಸ್, ಪಾಟ್ಸ್, ಜಗ್ಸ್, ಪೈಪ್ಸ್, ರಿಡ್ಜ್, ಸೀಲಿಂಗ್‌ಟೈಲ್ಸ್ ಮುಂತಾದ ಬಗೆಬಗೆಯ ಉತ್ಪನ್ನಗಳನ್ನು ಈ ಉದ್ದಿಮೆಗಳು ತಯಾರಿಸುತ್ತಿವೆ.

## ಬೀಡಿ ಉದ್ಯಮ

ಜಿಲ್ಲೆಯ ಬೀಡಿ ಕಾರ್ಮಿಕರ ಸ್ಥಿತಿಗತಿಗಳನ್ನು ಇತರೆ ಜಿಲ್ಲೆಯ ಬೀಡಿ ಕಾರ್ಮಿಕರಿಗೆ ಹೋಲಿಸಿದರೆ ತುಂಬಾ ವ್ಯತ್ಯಾಸವಿದೆ. ಬೀಡಿ ಸುತ್ತುವುದು ಜಿಲ್ಲೆಯಲ್ಲಿ ಗೃಹ ಕೈಗಾರಿಕೆಯಾಗಿ ಗಣನೀಯ ಪ್ರಗತಿ ಸಾಧಿಸಿದೆ. ಈ ಉದ್ಯಮದಲ್ಲಿ ತೊಡಗಿದ್ದ ಕಾರ್ಮಿಕರು ಗುತ್ತಿಗೆದಾರರಿಂದ ಬೀಡಿಗೆ ಬೇಕಾದ ಎಲೆ ಮತ್ತು ತಂಬಾಕನ್ನು ಪಡೆದು ಬೀಡಿ ಸುತ್ತುತ್ತಿದ್ದರು. ಇವರಿಗೆ ಕೂಲಿಯಾಗಿ ಒಂದು ಸಾವಿರ ಬೀಡಿಗಳಿಗೆ ರೂ. ೨.೫೦ ರಿಂದ ರೂ. ೪.೩೦ ಪೈಸೆ ಸಿಗುತ್ತಿತ್ತು. ಬೀಡಿ ಕಾರ್ಮಿಕರ ಹಾಗೂ ಗುತ್ತಿಗೆದಾರರ ಮಧ್ಯೆ ಯಾವುದೇ ಲಿಖಿತ ಒಪ್ಪಂದವಿರುತ್ತಿರಲಿಲ್ಲ. ಕೇವಲ ಮಾತಿನ ಮೂಲಕ ವ್ಯವಹಾರ ನಡೆಸುತ್ತಿದ್ದರು. ಗುತ್ತಿಗೆದಾರರು ಬೀಡಿಗೆ ಬೇಕಾದ ಕಚ್ಚಾ ವಸ್ತುಗಳನ್ನು ಮನೆ ಬಾಗಿಲಿಗೆ ತಲುಪಿಸಿ ವಿಶ್ವಾಸದಿಂದ ಬೀಡಿ ಪಡೆಯುತ್ತಿದ್ದರು. ಹೀಗೆ ಬಹಳ ಕಾಲದವರೆಗೂ ಉತ್ತಮ ಬಾಂಧವ್ಯವಿರಿಸಿಕೊಂಡಿದ್ದರು. ಅದರೆ ಈ ಸಂಬಂಧ ಬಹಳ ದಿನಗಳವರೆಗೆ ಉಳಿಯಲಿಲ್ಲ. ಗುತ್ತಿಗೆದಾರರ ವಿರುದ್ಧ ಸಿಡಿದೆದ್ದರು. ೧೯೫೬ಕ್ಕಿಂತ ಮುಂಚೆ ಈ ವಿಚಾರವಾಗಿ ಮದ್ರಾಸ್ ಸರ್ಕಾರ ವಿಚಾರಣೆ ಅಧಿಕಾರಿಯನ್ನು ನೇಮಿಸಿ ತನಿಖೆ ನಡೆಸಿತು. ವಿಚಾರಣೆಯ ನಂತರ ಇಬ್ಬರ ನಡುವಿನ ಬಾಂಧವ್ಯ ಮತ್ತಷ್ಟು ಹದಗೆಟ್ಟಿತು.

ಜಿಲ್ಲೆಯಲ್ಲಿ ಬೀಡಿ ಉದ್ಯಮ ಒಟ್ಟು ಆರು ಕೋಟಿ ರೂ.ಗಳ ವಾರ್ಷಿಕ ವಹಿವಾಟು ನಡೆಸುತ್ತಿದ್ದು, ಪ್ರತಿದಿನ ೪.೫ ಕೋಟಿ ಬೀಡಿಗಳನ್ನು ತಯಾರಿಸಲಾಗುತ್ತಿತ್ತು. ಜಿಲ್ಲೆಯಲ್ಲಿ ೧೯೭೭ರಲ್ಲಿದ್ದ ಪ್ರಮುಖ ಬೀಡಿ ಫ್ಯಾಕ್ಟರಿಗಳನ್ನು ಕೋಷ್ಟಕ ೫.೯ರಲ್ಲಿ ನೀಡಿದೆ.

**ಕೋಷ್ಟಕ ೫.೯**

| ಕ್ರ.ಸಂ. | ಕಾರ್ಖಾನೆಯ ಹೆಸರು/ವಿಳಾಸ | ಸ್ಥಾಪನೆಯಾದ ವರ್ಷ | ತೊಡಗಿಸಿದ ಬಂಡವಾಳ (ರೂ.ಗಳಲ್ಲಿ) | ಉದ್ಯೋಗಿಗಳು | ಉತ್ಪಾದನಾ ಮೌಲ್ಯ (ರೂಗಳಲ್ಲಿ) |
|---|---|---|---|---|---|
| ೧. | ಮಹಾಲಕ್ಷ್ಮಿ ಬೀಡಿ ವರ್ಕ್ಸ್ ಪಾಣೆ ಮಂಗಳೂರು. | ೧೯೧೪ | ೨೦,೦೦೦ | ೩೦೫ | ೨,೮೮,೨೦೦ |
| ೨. | ಪಿ.ವಿ.ಎಸ್. ಬೀಡೀಸ್ ಮಂಗಳೂರು. | ೧೯೧೮ | ೪,೦೦,೦೦೦ | ೭೫ | ೯೦,೦೦,೦೦೦ |
| ೩. | ಭಾರತ್ ಬೀಡಿ ವರ್ಕ್ಸ್ ಕಾರ್ಕಳ. | ೧೯೩೦ | – | ೧೯ | ೨,೧೨,೦೦,೦೦೦ |
| ೪. | ಗಣೇಶ್ ಬೀಡಿ ವರ್ಕ್ಸ್ ಬಂಟ್ವಾಳ. | ೧೯೩೦ | ೫೦,೦೦೦ | ೭೨ | ೫೫,೦೦,೦೦೦ |
| ೫. | ಶೆಣೈ ಬೀಡಿ ವರ್ಕ್ಸ್, ಕಾರ್ಕಳ. | ೧೯೩೨ | ೩,೮೦೦ | ೮೩ | ೧,೭೪,೦೦೦ |
| ೬. | ಕಾಟ್‌ಲೇರಿ ಬೀಡಿ ವರ್ಕ್ಸ್ ಪುತ್ತೂರು. | ೧೯೪೦ | ೨೦,೦೦೦ | ೮೦ | ೧,೮೦,೦೦೦ |
| ೭. | ಮಂಗಳೂರು ಗಣೇಶ್ ಬೀಡಿ ವರ್ಕ್ಸ್ ಮಂಗಳೂರು. | ೧೯೪೦ | ೭,೦೦,೦೦೦ | ೬೦ | ೬೫,೦೦,೦೦೦ |
| ೮. | ಪ್ರಕಾಶ್ ಬೀಡೀಸ್ ಮಂಗಳೂರು. | ೧೯೪೦ | ೪೮,೦೦೦ | ೬೪ | ೮೫,೦೦,೦೦೦ |
| ೯. | ಜನರಲ್ ಬೀಡಿ ವರ್ಕ್ಸ್, ಪುತ್ತೂರು. | ೧೯೪೦ | ೩೫,೦೦೦ | ೦೯ | ೨,೫೦೦ |
| ೧೦. | ಶ್ರೀ ಗಣೇಶ್ ಬೀಡೀಸ್, ಪುತ್ತೂರು. | ೧೯೪೭ | ೧,೩೦,೦೦೦ | ೫೦ | ೪೨,೦೦,೦೦೦ |
| ೧೧. | ಗಣೇಶ್ ಬೀಡಿ ವರ್ಕ್ಸ್, ಮಂಗಳೂರು. | ೧೯೪೮ | ೮೦,೦೦೦ | ೩೦ | ೫೨,೦೦,೦೦೦ |
| ೧೨. | ಶ್ರೀ ಗಣೇಶ್ ಬೀಡಿ ವರ್ಕ್ಸ್ ಉಪ್ಪಿನಂಗಡಿ, ಪುತ್ತೂರು ತಾ॥ | ೧೯೫೮ | ೧೦,೦೦೦ | ೧೨ | ೨,೦೦,೦೦೦ |
| ೧೩ | ಉದಯ ಬೀಡಿ ವರ್ಕ್ಸ್, ಪುತ್ತೂರು. | ೧೯೫೮ | ೧೦,೦೦೦ | ೦೪ | ೫,೦೦೦ |
| ೧೪. | ಸಾಧು ಬೀಡಿ ವರ್ಕ್ಸ್ ಮಂಗಳೂರು. | ೧೯೬೩ | ೨,೦೦,೦೦೦ | ೬೫ | ೭೦,೦೦,೦೦೦ |
| ೧೫. | ಉದಯ ಬೀಡಿ ವರ್ಕ್ಸ್, ಸುಳ್ಯ. | ೧೯೬೩ | ೧,೧೨೦ | ೦೨ | ೨,೦೦೦ |
| ೧೬. | ಚೈತ್ರ ಬೀಡೀಸ್, ಬೆಳ್ತಂಗಡಿ. | – | ೧೮,೦೦೦ | ೦೬ | ೧೫,೦೦೦ |
| ೧೭ | ಮನಮೋಹನ್ ಬೀಡೀಸ್, ಬೆಳ್ತಂಗಡಿ. | – | – | ೦೩ | ೮,೦೦೦ |

ಆದರೆ ಜಿಲ್ಲೆಯಲ್ಲಿ ೨೦೦೫ರ ಜೂನ್ ಅಂತ್ಯಕ್ಕೆ ೧,೮೩೫ ಘಟಕಗಳು ಕಾರ್ಯನಿರ್ವಹಿಸುತ್ತಿದ್ದು, ಇವುಗಳಲ್ಲಿ ೨,೩೧೩.೮೩ ಲಕ್ಷ ಬಂಡವಾಳ ತೊಡಗಿಸಲಾಗಿದೆ. ಈ ಉದ್ದಿಮೆಗಳು ೫,೪೨೫ ಮಂದಿಗೆ ಉದ್ಯೋಗ ಒದಗಿಸಿವೆ.

## ಮತ್ಸ್ಯೋದ್ಯಮ

'ಮತ್ಸ್ಯಕ್ರಾಂತಿ' ಅಥವಾ 'ನೀಲಿಕ್ರಾಂತಿ' ಎಂದೇ ಪ್ರಖ್ಯಾತವಾಗಿರುವ ಮೀನುಗಾರಿಕೆಯು ದಕ್ಷಿಣ ಕನ್ನಡ ಜಿಲ್ಲೆಯ ಪ್ರಮುಖ ಸಂಪತ್ತಾಗಿದೆ. ಮೀನುಗಾರಿಕೆ ಆಹಾರದ ಮೂಲಗಳಲ್ಲಿ ಒಂದಾಗಿದೆ. ಏಕೆಂದರೆ ಅದರಲ್ಲಿ ವಿಟಮಿನ್ 'ಎ' ಮತ್ತು 'ಬಿ' ಅಧಿಕ ಪ್ರಮಾಣದಲ್ಲಿದೆ. ಜಿಲ್ಲೆಯಲ್ಲಿ ಬಂಗುಡೆ, ಬೂತಾಯಿ, ಅಂಜಾಲ್, ಕೇದರ್, ಮಾಂಜಿ, ಸ್ಕೇಟ್ಎಟ್ಟಿ ಬಲ್ಲಿಯಾರ್, ತಾಟೆ, ಕಾಟೆ, ಅಡೆಮೀನು, ಗೂರಿಮೀನು, ಸಿಗಡಿ ಮುಂತಾದ ಜಾತಿಯ ಮತ್ಸ್ಯ ಸಂಪತ್ತು ಹೇರಳವಾಗಿದ್ದು, ಜಿಲ್ಲೆಯ ಆರ್ಥಿಕಾಭಿವೃದ್ಧಿಯಲ್ಲಿ ಇದು ಮಹತ್ವದ ಪಾತ್ರವಹಿಸಿದೆ.

'ಬಂಗುಡೆ' ಮೀನು ವಿಫುಲವಾಗಿರುವುದರಿಂದ ಅದನ್ನು 'ರಾಷ್ಟ್ರೀಯ ಮೀನು' ಎಂದು ಕರೆಯಲಾಗುತ್ತದೆ. 'ಸೀಗಡಿ'ಯನ್ನು ಕಡಲಿನ ಚಿನ್ನದ ಗಣಿ ಎಂದೇ ಕರೆಯಲಾಗುತ್ತಿದೆ. ದಕ್ಷಿಣ ಕನ್ನಡ ಜಿಲ್ಲೆಯ ಸಿಗಡಿಯನ್ನು ಜಪಾನ್ ಮುಂತಾದ ರಾಷ್ಟ್ರಗಳಿಗೆ ರಫ್ತು ಮಾಡುವ ಘಟಕ ನೆರೆಯ ಉಡುಪಿ ಜಿಲ್ಲೆಯ ಮಲ್ಪೆಯಲ್ಲಿ ಇದೆ. ಹೀಗೆ ಕರಾವಳಿಯಲ್ಲಿ ಎರಡು ಶತಮಾನಗಳಷ್ಟು ಹಿಂದೆಯೇ ಮೀನುಗಾರಿಕೆ ಪ್ರಾರಂಭವಾಗಿದ್ದರೂ, ಯಾಂತ್ರೀಕರಣಗೊಂಡು ಆಧುನಿಕತೆಯ ಸ್ವರೂಪ ಶುರುವಾದದ್ದು ೧೯೫೦ರ ದಶಕದ ಕೊನೆಯಲ್ಲೇ. ಆಗ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೇವಲ ನಾಡದೋಣಿಗಳು ಮಾತ್ರ ಬಳಕೆಯಲ್ಲಿದ್ದವು. ಅದರಲ್ಲೂ ಓಡದೋಣಿಗಳು, ರಂಪಣಿ ದೋಣಿಗಳು ಹಾಗೂ ಮರದ ಹಲಗೆಗಳಿಂದ ರಚಿತವಾದವು ಪ್ರಮುಖವಾದವು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ದ್ವಿತೀಯ ಪಂಚವಾರ್ಷಿಕ ಯೋಜನೆಯವರೆಗೂ ಮೀನುಗಾರಿಕೆಯು ಆಧುನಿಕ ರೀತಿಯಲ್ಲಿ ಬೆಳೆದಿರಲಿಲ್ಲ. ಕಾರಣ ಪ್ರಥಮ ಪಂಚವಾರ್ಷಿಕ ಯೋಜನೆಯ ವೇಳೆಯಲ್ಲಿ ಈ ಜಿಲ್ಲೆಯು ಮದ್ರಾಸ್ ಪ್ರಾಂತದಲ್ಲಿತ್ತು. ಆಗ ಕೇವಲ ಮೀನುಗಾರ ಸಹಕಾರೀ ಸಂಘಗಳನ್ನು ಮಾತ್ರ ಮದ್ರಾಸ್ ಸರ್ಕಾರ ಪ್ರೋತ್ಸಾಹಿಸುತ್ತಿತ್ತು. ಹೀಗಾಗಿ ದ್ವಿತೀಯ ಪಂಚವಾರ್ಷಿಕ ಯೋಜನೆಯೇ ನಿಜವಾಗಿ ದಕ್ಷಿಣ ಕನ್ನಡ ಜಿಲ್ಲೆಯ ಮೀನುಗಾರಿಕೆಗೆ ಪ್ರಥಮ ಪಂಚವಾರ್ಷಿಕ ಯೋಜನೆಯೆನ್ನಬಹುದು. ೧೯೫೮ರಲ್ಲಿ ಮಂಗಳೂರಿನಲ್ಲಿ ಮೀನುಗಾರಿಕೆ ತರಬೇತಿ ಕೇಂದ್ರವನ್ನು ತೆರೆಯಲಾಯಿತು. ದ್ವಿತೀಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಒಟ್ಟು ೬೫ ಮಂದಿಗೆ ಯಾಂತ್ರೀಕೃತ ದೋಣಿಗಳ ಚಾಲನೆ, ನಿರ್ವಹಣೆಯಲ್ಲಿ ತರಬೇತಿ ನೀಡಲಾಯಿತು. ಮೀನೆಣ್ಣೆ, ಮೀನು ಕಾಯ್ದಿಡುವುದು, ಮತ್ತು ಮೀನಿನ ಗುಣಾಂಶ ಕಾಪಾಡುವ ಬಗೆಗೆ ಪ್ರಯೋಗಾತ್ಮಕ ಸಂಶೋಧನೆಯಲ್ಲಿ ತೊಡಗುವ ಗುರಿಯೊಂದಿಗೆ ೧೯೬೦ರಲ್ಲಿ ಮಂಗಳೂರಿನಲ್ಲಿ 'ಮೀನುಗಾರಿಕಾ ತಾಂತ್ರಿಕ ಸಂಶೋಧನಾ ಪ್ರಯೋಗ ಶಾಲೆ'ಯನ್ನು ತೆರೆಯಲಾಯಿತು. ಆಧುನಿಕ ತಂತ್ರಜ್ಞಾನದಿಂದ ಮೀನಿನ ಉಪ ಉತ್ಪನ್ನಗಳಾದ ಮೀನಿನ ಸಾಸೇಜ್, ಹ್ಯಾವಲ್, ಮೀನಿನ ಡಬ್ಬೀಕರಣ ಸಂಸ್ಕರಣೆ ಬಗ್ಗೆ ಡಿಪ್ಲೊಮಾ ತರಬೇತಿ ನೀಡಲು ೧೯೬೩ರಲ್ಲಿ ಭಾರತ–ಜಪಾನ್ ಸಹಯೋಗದಲ್ಲಿ ಮಂಗಳೂರಿನಲ್ಲಿ 'ಕಡಲ ಮೀನು ಸಂಸ್ಕರಣ ತರಬೇತಿ ಕೇಂದ್ರ'ವನ್ನು ಸ್ಥಾಪಿಸಲಾಯಿತು. ೧೯೬೯ರಲ್ಲಿ ದೇಶದಲ್ಲೇ ಪ್ರಥಮ ಬಾರಿಗೆ ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಇದರ ಆಶ್ರಯದಲ್ಲಿ ಮೀನುಗಾರಿಕಾ ವಿಜ್ಞಾನದಲ್ಲಿ ಸಮಗ್ರ ಶಿಕ್ಷಣ ನೀಡುವ ವಿಶ್ವವಿದ್ಯಾಲಯ ಪದವಿ ಮಟ್ಟದ ಮೀನುಗಾರಿಕಾ ಕಾಲೇಜನ್ನು ಮಂಗಳೂರಿನಲ್ಲಿ ಪ್ರಾರಂಭಿಸಲಾಯಿತು. ದೇಶದಲ್ಲೇ ಮೊಟ್ಟ ಮೊದಲ ಬಾರಿಗೆ ೧೯೭೦ರ ದಶಕದಲ್ಲಿ "ಕೋಲ್ಡ್‌ಚೈನ್" ಎನ್ನುವ ಕೊಂಡಿ ಜಾಲವನ್ನು ಮೀನುಗಾರಿಕಾ ಅಭಿವೃದ್ಧಿ ನಿಗಮದ ಮುಖಾಂತರ ರಚಿಸಲಾಯಿತು. ಕೋಲ್ಡ್‌ಚೈನ್‌ನಿಂದಾಗಿ ಸಮುದ್ರದಿಂದ ಹಿಡಿದ ತಾಜಾ ಮೀನನ್ನು ಮಂಗಳೂರಿನಿಂದ ಶೀತ ಘನೀಕೃತ ವಾಹನಗಳ ಮೂಲಕ ರಾಜ್ಯದ ೨೦ ಪ್ರಮುಖ ನಗರಗಳಿಗೆ ಪೂರೈಸುವ ಕಾರ್ಯ ಯೋಜನೆ ಜಾರಿಗೆ ಬಂದಿದೆ. ಇದರಿಂದಾಗಿ ಪ್ರಸ್ತುತ ಬೆಂಗಳೂರು, ಮೈಸೂರು, ಕೊಡಗು, ಹುಬ್ಬಳ್ಳಿ ನಗರಗಳಿಗೆ ಮೀನು ತಾಜಾ ಗುಣಮಟ್ಟದಲ್ಲಿ ದೊರಕಲು ಸಾಧ್ಯವಾಗಿದೆ. ವಿಶ್ವ ಸಂಸ್ಥೆಯ ಕಡಲ ಕಾನೂನು ನಿರ್ಣಯದ ಪ್ರಕಾರ, ರಾಜ್ಯ ಸರ್ಕಾರವು ೧೯೭೭ರಲ್ಲಿ ಸಮುದ್ರ ಪ್ರದೇಶವನ್ನು "ಪ್ರತ್ಯೇಕ ಆರ್ಥಿಕ ವಲಯ" ಎಂದು ಘೋಷಿಸಿದೆ.

### ಮೀನುಗಾರಿಕಾ ಕಾಲೇಜು, ಮಂಗಳೂರು

ಮಂಗಳೂರಿನ ಎಕ್ಕೂರಿನಲ್ಲಿರುವ ಮೀನುಗಾರಿಕಾ ವಿದ್ಯಾಲಯವು ಒಂದು ತಾಂತ್ರಿಕ ವಿದ್ಯಾಲಯವಾಗಿದ್ದು, ಇದು ದೇಶದ ಪ್ರಪ್ರಥಮ ಮೀನುಗಾರಿಕಾ ವಿದ್ಯಾಲಯವಾಗಿರುತ್ತದೆ. ೧೯೬೩ರಲ್ಲಿ ಭಾರತ–ಜಪಾನ್ ಸಹಯೋಗದಲ್ಲಿ ಮೆರೈನ್ ಪ್ರಾಡಕ್ಟ್ಸ್ ಪ್ರಾಸೆಸಿಂಗ್ ಟ್ರೈನಿಂಗ್ ಸೆಂಟರ್ (ಎಂ.ಪಿ.ಪಿ.ಟಿ ಮಂಗಳೂರು) ಸ್ಥಾಪನೆಗೊಂಡಿದ್ದು, ೧೯೬೯ರಲ್ಲಿ ಇದನ್ನು ಮೀನುಗಾರಿಕಾ ಕಾಲೇಜಾಗಿ ಪರಿವರ್ತಿಸಲಾಯಿತು.

ಇದರ ಮುಖ್ಯ ಧ್ಯೇಯೋದ್ದೇಶವು ಮೀನುಗಾರಿಕೆಯಲ್ಲಿ ಪರಿಣತಿ ಹೊಂದಿದ ಪದವೀಧರರನ್ನು ರೂಪಿಸುವುದು, ವಿಜ್ಞಾನಿಗಳು ಕಂಡುಹಿಡಿದ ಹೊಸ ಮಾಹಿತಿಗಳನ್ನು ಸಾಮಾನ್ಯ ಜನರಿಗೆ ತಲುಪಿಸುವುದು ಮತ್ತು ಮೀನುಗಾರರ ಏಳಿಗೆಗಾಗಿ ಶ್ರಮಿಸುವುದು ಮುಂತಾದವು. ಹಿಂದೆ ಈ ಸಂಸ್ಥೆಯು ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು ಇದರ ಅಧೀನದಲ್ಲಿದ್ದು, ಇದೀಗ ೨೦೦೪–೦೫ನೇ ಸಾಲಿನಿಂದ ಇದನ್ನು ಬೀದರ್‌ನ ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ನಿಯಂತ್ರಣಕ್ಕೆ ಒಳಪಡಿಸಲಾಗಿದೆ. ಇಲ್ಲಿ ಮೀನುಗಾರಿಕೆಯಲ್ಲಿ ಸ್ನಾತಕ, ಪದವಿ, ಸ್ನಾತಕೋತ್ತರ ಹಾಗೂ ಡಾಕ್ಟರೇಟ್ ಪದವಿಗಳನ್ನು ನೀಡಲಾಗುತ್ತಿದೆ.

ಜಿಲ್ಲೆಯಲ್ಲಿ ಮೀನುಗಾರಿಕೆಯು ಕೈಗಾರಿಕಾ ಬೆಳವಣಿಗೆಗೆ ಸಹಕಾರಿಯಾಗಿದೆ. ಜಿಲ್ಲೆಯಲ್ಲಿ ಫಿಷ್‌ಮೀಲ್ ಅಂಡ್ ಫಿಷ್‌ಆಯಿಲ್ ತಯಾರಿಸುವ ಘಟಕಗಳನ್ನು ಸ್ಥಾಪಿಸಲಾಗಿದೆ. ಬಾವಾ ಫಿಶ್‌ಮೀಲ್ ಅಂಡ್ ಆಯಿಲ್ ಕಂ, ಹೆಚ್.ಕೆ. ಬಾವಾ ಅಂಡ್‌ಸನ್ಸ್, ಮುಕ್ಕ ಆಯಿಲ್ ಅಂಡ್ ಸೀ ಫುಡ್ ಇಂಡಸ್ಟ್ರೀಸ್, ಪಾತದ ಫಿಶ್‌ಮೀಲ್ ಅಂಡ್ ಆಯಿಲ್ ಕಂ. ಹಾಗೂ ಏಷಿಯನ್ ಫಿಶ್‌ಮೀಲ್ ಅಂಡ್ ಆಯಿಲ್ ಕಂಪನಿಗಳು ಮೀನಿನ ಆಹಾರ, ಪೌಲ್ಟ್ರಿ ಆಹಾರ ಹಾಗೂ ಮೀನಿನ ಎಣ್ಣೆಯನ್ನು ತಯಾರಿಸುತ್ತವೆ. ನೂರಾರು ಮಂದಿಗೆ ಉದ್ಯೋಗ ನೀಡಿವೆ. ಅಲ್ಲದೆ ಜೋರ್ಡಾನ್, ಜಪಾನ್, ಸೌಧಿ ಹಾಗೂ ದರ್ಬಾನ್‌ದೇಶಗಳಿಗೆ ರಫ್ತು ಮಾಡುತ್ತಿವೆ. ಅಲ್ಲದೆ. ಬೇಬಿ ಫೂರೈಸ್ ಇಂಟರ್‌ನ್ಯಾಷನಲ್ (ಬಿಎಂಬಿ) ಬೈಕಂಪಾಡಿ ಕೈಗಾರಿಕಾ ಪ್ರದೇಶ, ಭೂ ವಾಟರ್–ಸೀ ಫುಡ್ಸ್ ಬೈಕಂಪಾಡಿ, ಸ್ಟರ್ಲಿಂಗ್ ಫುಡ್ಸ್ ಮುಕ್ಕ, ಇಂಡೋ–ಫೀಷರೀಸ್, ಬರಕ್ಕ ಒವರ್‌ಸೀಸ್ ಟ್ರೇಡರ್ಸ್ ಉಲ್ಲಾಳ ಮುಂತಾದವು ಮೀನನ್ನು ಕೆಡದಂತೆ ಪ್ಯಾಕ್ ಮಾಡಿ, ಜಪಾನ್, ಚೀನಾ ಅಮೇರಿಕಾ ಸಂಯುಕ್ತ ಸಂಸ್ಥಾನ ರೇಬಿಯಾ ಮುಂತಾದ ದೇಶಗಳಿಗೆ ರಫ್ತು ಮಾಡಲಾಗುತ್ತಿವೆ. ಇದರಿಂದ ವಿದೇಶಿ ವಿನಿಮಯ ಗಳಿಸುವ ಮೂಲಕ ಜಿಲ್ಲೆಯ ಪ್ರಗತಿಗೆ ಸಹಕಾರಿಯಾಗಿದೆ.

ಜಿಲ್ಲೆಯಲ್ಲಿ ೨೨ ಮೀನುಗಾರರ ಸಹಕಾರಿ ಸಂಘಗಳಿದ್ದು, ಅವುಗಳಲ್ಲಿ ಒಂದು ಫೆಡರೇಷನ್, ೧೭ ಮೀನುಗಾರರ ಸಹಕಾರಿ ಸಂಘಗಳು ಹಾಗೂ ನಾಲ್ಕು ಎಫ್. ಡಬ್ಲ್ಯು. ಸಿ. ಎಸ್. ಗಳು ಸೇರಿವೆ. ಇವುಗಳಲ್ಲಿ ೩೫ ಮಂದಿ ಪರಿಶಿಷ್ಟ ಜಾತಿಗೂ, ೨೭ ಮಂದಿ ಪರಿಶಿಷ್ಟ ಪಂಗಡಕ್ಕೂ ಹಾಗೂ ೨೦,೯೯೧ ಮಂದಿ ಇತರೆ (ಒಟ್ಟು ೨೦೫೮೯) ಮಂದಿ ಸದಸ್ಯರಿದ್ದರೆ. ಹೆಚ್ಚಿನ ವಿವರಗಳಿಗೆ ಕೋಷ್ಟಕ ೫.೧೦ ರಲ್ಲಿ ನೋಡಿ.

**ಕೋಷ್ಟಕ ೫.೧೦ : ಜಿಲ್ಲೆಯಲ್ಲಿ ೩೧–೩–೨೦೦೫ರಲ್ಲಿದ್ದ ಮೀನುಗಾರರ ಸಹಕಾರಿ ಸಂಘಗಳು**

| ಕ್ರ.ಸಂ | ಮೀನುಗಾರರ ಸಹಕಾರಿ ಸಂಘಗಳ ಹೆಸರು, ವಿಳಾಸ, ನೋಂದಣಿ ಸಂಖ್ಯೆ ಹಾಗೂ ದಿನಾಂಕ | ಸದಸ್ಯರು | | | |
|---|---|---|---|---|---|
| | | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ | ಇತರೆ | ಒಟ್ಟು |
| ೧ | ೨ | ೩ | ೪ | ೫ | ೬ |
| ೧. | ಬೈಕಂಪಾಡಿ ಫಿಶರ್‌ಮೆನ್ ಕೋ–ಆಪರೇಟಿವ್ ಸೊಸೈಟಿ ಮೀನಕಲ್ಯೆಯ ಕುಲ್ಯೆ ಮಂಗಳೂರು. ನಂ. ೭೧೬, ದಿ:೬–೧೧–೧೯೫೧ | – | – | ೪೧೨ | ೪೧೨ |
| ೨. | ಬೋಲಾರ್ ಫಿಶರ್ ವುಮೆನ್ ಕೋ–ಆಪರೇಟಿವ್ ಸೊಸೈಟಿಬೋಲಾರ್, ಮಂಗಳೂರು. ನಂ ೮೫೫೧, ದಿ:೨೧–೪–೧೯೮೨ | – | – | ೪೩೧ | ೪೩೧ |
| ೩. | ಹೊಸಬೆಟ್ಟು ಫಿಶರ್‌ಮೆನ್ ಕೋ–ಆಪರೇಟಿವ್ ಸೊಸೈಟಿ ಪೋಸ್ಟ್: ಕುಲ್ಯೆ ಹೊಸಬೆಟ್ಟು ಮಂಗಳೂರು. ನಂ ೭೧೯ ದಿ: ೨೭–೧೧–೧೯೫೯ | ೯ | – | ೭೨೦ | ೭೨೯ |
| ೪. | ಇಡ್ಯಾ ಫಿಶರ್‌ಮೆನ್ ಕೋ–ಆಪರೇಟಿವ್ ಸೊಸೈಟಿ, ಗುಡ್ಡೆಕೊಪ್ಪಲ ಪೋಸ್ಟ್ ಸುರತ್ಕಲ್, ಮಂಗಳೂರು. ನಂ ೨೭೧೯ ದಿ: ೨೩–೩–೧೯೧೮ | – | – | ೩೫೧ | ೩೫೧ |

ಮುಂದುವರೆದಿದೆ....

| ೧ | ೨ | ೩ | ೪ | ೫ | ೬ |
|---|---|---|---|---|---|
| ೫. | ಜೀವನದೀಪಾ ಫಿಶರ್‌ಮೆನ್ ಮಲ್ಟಿ ಪರ್ಪಸ್ ಕೋ–ಆಪರೇಟಿವ್ ಸೊಸೈಟಿ ಮೀನಕಲ್ಯೆಯ ಮಂಗಳೂರು. ನಂ. ೨೫೪೯೮ ದಿ:೪–೧೨–೨೦೦೨ | – | – | ೫೩೧ | ೫೩೧ |
| ೬. | ಕುಲ್ಯೈ ಫಿಶರ್‌ಮೆನ್ ಕೋ–ಆಪರೇಟಿವ್ ಸೊಸೈಟಿ ಪೋಸ್ಟ್ ಕುಲ್ಯೈ–೫೭೪೧೯೬ ಮಂಗಳೂರು. ನಂ. ೭೧೮ ದಿ ೨೧–೧೧–೧೯೫೧ | ೧೬ | – | ೧೧೮೪ | ೧೨೦೦ |
| ೭. | ಮಂಗಳೂರು ಬೆಂಗ್ರೆ ಫಿಶರ್‌ಮೆನ್ ಕೋ–ಆಪರೇಟಿವ್ ಸೊಸೈಟಿ ಪೋಸ್ಟ್ ಬೆಂಗ್ರೆ ಮಂಗಳೂರು–೫೭೫೦೦೧ ನಂ. ೭೦೭, ದಿ: ೨೩–೧೧–೧೯೫೫ | – | – | ೭೨೧ | ೭೨೧ |
| ೮. | ಮಂಗಳೂರು ಬೆಂಗ್ರೆ ಫಿಶರ್‌ವುಮೆನ್ ಕೋ–ಆಪರೇಟಿವ್ ಸೊಸೈಟಿ ಸ್ಯಾಂಡ್‌ಸ್ಪಿಟ್, ಬೆಂಗ್ರೆ ಮಂಗಳೂರು–೫೭೫೦೦೧ ನಂ. ೨೩೫೭೧/೯೭ ದಿ: ೦೮–೦೯–೧೯೯೭ | – | – | ೫೦೨ | ೫೦೨ |
| ೯. | ಮಂಗಳೂರು ಟ್ರಾವಲ್ ಬೋಟ್ ಫಿಶರ್‌ಮೆನ್ ಪ್ರೈಮರಿ ಕೋ–ಆಪರೇಟಿವ್ ಸೊಸೈಟಿ, ಸೌಥ್ ವರ್ಫ ಬಂದರ್ ಮಂಗಳೂರು–೫೭೫೦೦೧. ನಂ. ಆರ್.ಎಸ್.ಆರ್/೧೯೧೭೨ ದಿ: ೧೧–೧೦–೧೯೯೩ | – | – | ೫೨೨ | ೫೨೨ |
| ೧೦. | ಮಂಗಳೂರು ಯಾಂತ್ರಿಕ ಫಿಶರ್‌ಮೆನ್ ಪ್ರೈಮರಿ ಕೋ–ಆಪರೇಟಿವ್ ಸೊಸೈಟಿ ಸೌಥ್ ವರ್ಫ ಬಂದರ್ ಮಂಗಳೂರು–೫೭೫೦೦೧. ನಂ.೬೭೪೦ ದಿ: ೧೪–೦೩–೧೯೮೦ | – | – | ೪೬೮ | ೪೬೮ |
| ೧೧. | ಮಂಗಳೂರು ಮೊಗವೀರ ಫಿಶರ್‌ಮೆನ್ ಕೋ–ಆಪರೇಟಿವ್ ಸೊಸೈಟಿ ಬೋಳೂರು ಯುನೈಟೆಡ್ ಸ್ಪೋರ್ಟ್ಸ್ ಕ್ಲಬ್, ಬೋಳೂರು ಮಂಗಳೂರು–೫೭೫೦೦೩ ನಂ. ೪೫೫ ದಿ: ೨೪–೭–೧೯೪೨ | ೨೫೮ | – | ೧೦೦೫ | ೧೨೬೩ |
| ೧೨. | ಮಂಗಳೂರು ಕರಾವಳಿ ಅಲ್ಪಸಂಖ್ಯಾತ ಫಿಶರ್‌ಮೆನ್ ಪ್ರೈಮರಿ ಕೋ–ಆಪರೇಟಿವ್ ಸೊಸೈಟಿ ಮಂಗಳೂರು–೫೭೫೦೦೧ ನಂ ೨೫೯೨೩ ದಿ: ೨೭–೨–೨೦೦೨ | – | – | ೧೨೬ | ೧೨೬ |
| ೧೩. | ಮಂಗಳೂರು ಡ್ರೈ ಫಿಶ್ ವ್ಯಾಪಾರಸ್ಥರ ಸಹಕಾರ ಸಂಘ ಮಂಗಳೂರುನಂ: ೨೫೪೭೨ ದಿ:೧–೪–೨೦೦೦ | – | – | ೨೫೦ | ೨೫೦ |
| ೧೪. | ಮಂಗಳೂರು ಅಲ್ಪಸಂಖ್ಯಾತ ಯಾಂತ್ರಿಕ ಫಿಶರ್‌ಮೆನ್ ಗ್ರಾಹಕರ ಕೋ–ಆಪರೇಟಿವ್ ಸೊಸೈಟಿ, ಮಂಗಳೂರು.ನಂ:೨೫೪೭೩ ದಿ:೧೦–೮–೨೦೦೦ | – | – | ೭೦೫ | ೭೦೫ |

ಮುಂದುವರೆದಿದೆ....

| ೧ | ೨ | ೩ | ೪ | ೫ | ೬ |
|---|---|---|---|---|---|
| ೧೫. | ಮಂಗಳೂರು ಕರಾವಳಿ ಫಿಶರ್‌ಮೆನ್ ವ್ಯಾಪಾರ ಮತ್ತು ಸಂಸ್ಕರಣ ಕೋ–ಆಪರೇಟಿವ್ ಸೊಸೈಟಿ ಮಂಗಳೂರು. ನಂ: ೨೫೪೯೬ ದಿ:೨೭–೯–೨೦೦೨. | – | – | ೭೬೦ | ೭೬೦ |
| ೧೬. | ಮೂಡಬಿದ್ರೆ ಫಿಶರ್‌ಮೆನ್ ಕೋ–ಆಪರೇಟಿವ್ ಸೊಸೈಟಿ, ಮೂಡಬಿದ್ರೆ ಮಂಗಳೂರು ತಾಲೂಕು ನಂ:೨೦೩೭೦/೯೪ ದಿ:೨೩–೧೧–೧೯೯೪ | – | – | ೪೦ | ೪೦ |
| ೧೭. | ಮುಲ್ಕಿ ಫಿಶರ್‌ವುಮೆನ್ ಕೋ–ಆಪರೇಟಿವ್ ಸೊಸೈಟಿ, ಒಡಿಯಾರಬೆಟ್ಟು ಮುಲ್ಕಿ ಮಂಗಳೂರು ತಾಲೂಕು ನಂ:೨೪೬೩೨/೯೮ ದಿ:೧೨–೮–೧೯೯೮ | ೪ | – | ೧೩೬ | ೧೪೦ |
| ೧೮. | ಸಸಿಹಿತ್ಲು ಫಿಶರ್‌ಮೆನ್ ಕೋ–ಆಪರೇಟಿವ್ ಸೊಸೈಟಿ, ಪೋಸ್ಟ್ ಸಸಿಹಿತ್ಲು, ಮಂಗಳೂರು ತಾಲೂಕು ನಂ:೭೩೩ ದಿ:೪–೬–೧೯೩೨ | ೪ | – | ೯೬೩ | ೯೬೭ |
| ೧೯. | ದಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲಾ ಕೋ–ಆಪರೇಟಿವ್ ಫಿಶ್ ಮಾರ್ಕೆಟಿಂಗ್ ಫೆಡರೇಷನ್ ಲಿಮಿಟೆಡ್ ಪೋಸ್ಟ್ ಬಾಕ್ಸ್ ನಂ. ೧೪೪, ಮುಲಿಹಿತ್ಲು ಮಂಗಳೂರು ನಂ:೭೫೨ ದಿ: ೨೮–೨–೧೯೫೪ | ೬೦ | ೨೭ | ೮೩೮೧ | ೮೪೬೮ |
| ೨೦. | ಉಚ್ಚಿಲಾ ಬೋವಿಸ್ ಫಿಶರ್‌ಮೆನ್ ಕೋ–ಆಪರೇಟಿವ್ ಸೊಸೈಟಿ ಪೋಸ್ಟ್ ಸೋಮೇಶ್ವರ ಉಚ್ಚಿಲ್–೫೭೫೦೨೩ ಮಂಗಳೂರು ನಂ: ೮೨೨೨ ದಿ:೨–೩–೧೯೨೩ | – | – | ೩೨೪ | ೩೨೪ |
| ೨೧. | ಉಳ್ಳಾಲ ಫಿಶರ್‌ಮೆನ್ ಮಲ್ಟಿಪರ್ಪಸ್ ಪ್ರೈಮರಿ ಕೋ–ಆಪರೇಟಿವ್ ಸೊಸೈಟಿ. ಮೊಗವೀರಪಟ್ಟಣ ಉಳ್ಳಾಲ–೫೭೪೧೯೯ ಮಂಗಳೂರು ನಂ: ೪೫೬, ದಿ:೮–೭–೧೯೪೨ | – | – | ೯೧೮ | ೯೧೮ |
| ೨೨. | ಉಳ್ಳಾಲ ಫಿಶರ್‌ವುಮೆನ್ ಕೋ–ಆಪರೇಟಿವ್ ಸೊಸೈಟಿ ಮೊಗವೀರಪಟ್ಟಣ ಉಳ್ಳಾಲ–೫೭೪೧೯೯ ಮಂಗಳೂರು ನಂ: ೧೮೯, ದಿ:೨೧–೪–೧೯೮೨ | – | – | ೭೪೧ | ೭೪೧ |

**ಆಧಾರ** : ಮೀನುಗಾರಿಕಾ ಇಲಾಖೆ, ಮಂಗಳೂರು

ಜಿಲ್ಲೆಯಲ್ಲಿ ೧೯೭೭ರಲ್ಲಿ ೨೪ ಬೋಟ್ ಬಿಲ್ಡಿಂಗ್ ಯಾರ್ಡ್‌ಗಳಿದ್ದವು. ಅವುಗಳಲ್ಲಿ ಒಂದು ಸಾರ್ವಜನಿಕ ಕ್ಷೇತ್ರದಲ್ಲೂ ಹಾಗೂ ಎರಡು ಸಹಕಾರಿ ಕ್ಷೇತ್ರದಲ್ಲೂ ಹಾಗೂ ೨೧ ಖಾಸಗಿ ಕ್ಷೇತ್ರದಲ್ಲೂ ಇದ್ದವು. ಇದೇ ಅವಧಿಯಲ್ಲಿ ೭೭೭ ಯಾಂತ್ರೀಕೃತ (Mechanised Fishing boats) ಮೀನು ಹಿಡಿಯುವ ಬೋಟ್‌ಗಳು ಇದ್ದವು. ಜಿಲ್ಲೆಯಲ್ಲಿ ೩೬ ಮಂಜುಗಡ್ಡೆ ಘಟಕಗಳಿದ್ದವು. ಅವುಗಳಲ್ಲಿ ಒಂಭತ್ತು ಸಾರ್ವಜನಿಕ ಕ್ಷೇತ್ರದಲ್ಲಿ, ೨೫ ಖಾಸಗಿ ಕ್ಷೇತ್ರದಲ್ಲಿ ಹಾಗೂ ಎರಡು ಸಹಕಾರಿ ಕ್ಷೇತ್ರದಲ್ಲಿದ್ದವು. ಅವುಗಳಲ್ಲದೆ ೧೬ ಶೀತಲ ಗೃಹಗಳು (Cold

Storage Plants) ಇದ್ದವು. ಇವುಗಳಲ್ಲಿ ಎಂಟು ಸಾರ್ವಜನಕ ಕ್ಷೇತ್ರದಲ್ಲಿ, ಆರು ಖಾಸಗಿ ಕ್ಷೇತ್ರದಲ್ಲಿ ಹಾಗೂ ಎರಡು ಸಹಕಾರಿ ಕ್ಷೇತ್ರದಲ್ಲಿದ್ದವು. ಅಲ್ಲದೆ ೧೫ ಫ್ರೀಝಿಂಗ್ ಪ್ಲಾಂಟ್‌ಗಳು (Freezing Plants), ೧೨ ಪ್ರೋಜನ್ ಫ಼ಿಷಿಂಗ್ ಸ್ಟೋರೇಜ್ (Frozen Fish storages), ಆರು ಕ್ಯಾನಿಂಗ್ ಪ್ಲಾಂಟ್ಸ್ (Canning Plants) ಹಾಗೂ ಮೀನಿನ ಎಣ್ಣೆ ತೆಗೆಯುವ ಕಾರ್ಖಾನೆಗಳಿದ್ದವು (ಹೆಚ್ಚಿನ ವಿವರಗಳಿಗೆ ಅಧ್ಯಾಯ–೦೪ ನೋಡಿ). ಜಿಲ್ಲೆಯಲ್ಲಿ ೨೦೦೦–೦೧ ರಿಂದ ೨೦೦೪–೦೫ರ ವರೆಗಿದ್ದ ಮೀನುಗಾರರ ಸಂಖ್ಯೆ ಹಾಗೂ ಇನ್ನಿತರೆ ಮಾಹಿತಿಗಳಿಗಾಗಿ ಕೋಷ್ಟಕ ೫.೧೧ ನೋಡಿ

**ಕೋಷ್ಟಕ ೫.೧೧ : ಜಿಲ್ಲೆಯಲ್ಲಿದ್ದ ಮೀನುಗಾರರ ಸಂಖ್ಯೆ, ಶಿಥಲಗೃಹಗಳು ಇನ್ನಿತರೆ ವಿವರಗಳು**

| ಕ್ರಸಂ | ಮೀನುಗಾರಿಕೆ | | ೨೦೦೦–೦೧ | ೨೦೦೧–೦೨ | ೨೦೦೨–೦೩ | ೨೦೦೩–೦೪ | ೨೦೦೪–೦೫ |
|---|---|---|---|---|---|---|---|
| ೧. | ಮೀನುಗಾರರ ಸಂಖ್ಯೆ | | ೨೧,೮೩೧ | ೨೨,೨೬೮ | ೨೨,೯೩೬ | ೨೩,೬೨೬ | ೨೪,೩೩೭ |
| ೨. | ಬೋಟ್ ಬಿಲ್ಡಿಂಗ್ ಯಾರ್ಡ್‌ಗಳು | ಖಾಸಗಿ | ೮ | ೮ | ೯ | ೯ | ೯ |
| | | ಸಾರ್ವಜನಿಕ | – | – | – | – | – |
| | | ಸಹಕಾರಿ | – | – | – | – | – |
| | | ಒಟ್ಟು | ೮ | ೮ | ೯ | ೯ | ೯ |
| ೩. | ಯಾಂತ್ರೀಕೃತ ಮೀನುಗಾರಿಕೆ ದೋಣಿಗಳ ಸಂಖ್ಯೆ | ಖಾಸಗಿ | ೧,೫೧೮ | ೧,೫೫೬ | ೧,೫೫೨ | ೧,೬೮೩ | ೧,೭೯೪ |
| | | ಸಾರ್ವಜನಿಕ | – | – | – | – | – |
| | | ಸಹಕಾರಿ | – | – | – | – | – |
| | | ಒಟ್ಟು | ೧,೫೧೮ | ೧,೫೫೬ | ೧,೫೫೨ | ೧,೬೮೩ | ೧,೭೯೪ |
| ೪. | ಮಂಜುಗಡ್ಡೆ ಘಟಕಗಳು | ಖಾಸಗಿ | ೬೨ | ೬೨ | ೬೧ | ೬೧ | ೫೯ |
| | | ಸಾರ್ವಜನಿಕ | ೨ | – | – | – | – |
| | | ಸಹಕಾರಿ | ೧ | ೧ | ೨ | ೧ | ೧ |
| | | ಒಟ್ಟು | ೬೫ | ೬೩ | ೬೩ | ೬೨ | ೬೦ |
| ೫. | ಶಿತಲ ಗೃಹಗಳು | ಖಾಸಗಿ | ೨ | – | – | – | – |
| | | ಸಾರ್ವಜನಿಕ | ೧೭ | ೧೫ | ೧೦ | ೧೦ | ೧೦ |
| | | ಸಹಕಾರಿ | – | ೧ | ೧ | ೧ | ೧ |
| | | ಒಟ್ಟು | ೧೯ | ೧೬ | ೧೧ | ೧೧ | ೧೧ |
| ೬. | ಫ್ರೀಝಿಂಗ್ ಪ್ಲಾಂಟ್‌ಗಳು (Freezing Plants) | | ೮ | ೫ | ೫ | ೪ | ೪ |
| ೭. | ಪ್ರೋಜನ್ ಫ಼ಿಷಿಂಗ್ ಸ್ಟೋರೇಜ್ | | ೬ | ೩ | ೩ | ೩ | ೩ |
| ೮. | ಕ್ಯಾನಿಂಗ್ ಪ್ಲಾಂಟುಗಳು | | – | – | – | – | – |

## ರೇಷ್ಮೆ ಉದ್ಯಮ

ಗ್ರಾಮೀಣ ರೈತರ ಜೀವನಮಟ್ಟವನ್ನು ಸುಧಾರಿಸುವಲ್ಲಿ ರೇಷ್ಮೆ ವ್ಯವಸಾಯ ಪ್ರಮುಖ ಪಾತ್ರ ವಹಿಸುತ್ತದೆ. ಉದ್ಯಮ ಮನೋಭಾವ ಹೊಂದಿದ್ದ ಟಿಪ್ಪು ಸುಲ್ತಾನನು ಆಗಿನ ಮೈಸೂರು ರಾಜ್ಯದಲ್ಲಿ ರೇಷ್ಮೆ ಉದ್ಯಮ ಪ್ರಾರಂಭ ಮಾಡಿದನು. ಈ ಉದ್ಯಮದಲ್ಲಿ ಬರುವಂತಹ ರೇಷ್ಮೆಹುಳು ಸಾಕಾಣಿಕೆ ಗೂಡುಗಳಿಂದ ರೇಷ್ಮೆ ನೂಲು ಬಿಚ್ಚುವುದು ಹಾಗೂ ಬಟ್ಟೆ ನೇಯ್ಗೆಗೆ ಪ್ರೋತ್ಸಾಹ ಹಾಗೂ ತಾಂತ್ರಿಕ ಸಲಹೆಯನ್ನು ನೀಡುತ್ತಿದ್ದರು. ದಕ್ಷಿಣ ಕನ್ನಡ ಜಿಲ್ಲೆಗೆ ರೇಷ್ಮೆ ಕೃಷಿ ಕಾಲಿಟ್ಟು ೨೦ ವರ್ಷಗಳಾಗಿದ್ದರೂ ನಿರೀಕ್ಷಿಸಿದ ಪ್ರಗತಿ ಇನ್ನೂ ಸಾಧ್ಯವಾಗದಿರಲು ಹಲವಾರು ಕಾರಣಗಳಿವೆ. ಜೂನ್‌ನಿಂದ ಸೆಪ್ಟೆಂಬರ್‌ವರೆಗೆ ಅತೀ ಮಳೆ ಹಾಗೂ ಮಾರ್ಚ್‌ನಿಂದ ಮೇ ವರೆಗೆ ಅತೀ ಉಷ್ಣತೆಯಿಂದಾಗಿ ವಾರ್ಷಿಕ ಮೂರರಿಂದ ನಾಲ್ಕು ಬೆಳೆ ಮಾತ್ರ ಬೆಳೆಯಬಹುದಾಗಿದೆ. ಕೂಲಿ ಜನರ ಅಭಾವ, ಕೃಷಿ ಭೂಮಿಯ ಕೊರತೆ, ರೈತರು ಬೆಳೆದ ರೇಷ್ಮೆಗೂಡುಗಳಿಗೆ ಸ್ಥಳೀಯವಾಗಿ ಸಮರ್ಪಕ ಮಾರುಕಟ್ಟೆ ವ್ಯವಸ್ಥೆ ಇಲ್ಲದಿರುವುದು, ಅಡಿಕೆಯಂಥ ಸುಲಭ ಹಾಗೂ ಹೆಚ್ಚಿನ ಆದಾಯ ತರುವ ಆರ್ಥಿಕ ಬೆಳೆಗಳತ್ತ ಕೃಷಿಕರ ತೀವ್ರ ಆಸಕ್ತಿ, ಪ್ರತಿ ಮಹಿಳೆಯೂ ಮನೆಯಲ್ಲಿದ್ದುಕೊಂಡೆ ಕನಿಷ್ಠ ರೂ. ೫೦ರ ವರೆಗೆ ಬೀಡಿ ಉದ್ಯಮದಿಂದ ಗಳಿಸುತ್ತಿರುವುದು ಮುಂತಾದವು ಇದಕ್ಕೆ ಕಾರಣಗಳಾಗಿವೆ.

ಜಿಲ್ಲೆಯಲ್ಲಿ ಜನವರಿ ೨೦೦೫ರ ಅಂತ್ಯದಲ್ಲಿದ್ದಂತೆ ಒಟ್ಟು ೭೮.೬೮ ಹೆಕ್ಟೇರ್ ಪ್ರದೇಶದಲ್ಲಿ ಹಿಪ್ಪುನೇರಳೆ ಬೇಸಾಯ ಮಾಡುತ್ತಿದ್ದರು. ರೇಷ್ಮೆ ಬೆಳೆಗಾರರು ದ್ವಿತಳಿ ಹಾಗೂ ಮಿಶ್ರ ತಳಿ ರೇಷ್ಮೆಗೂಡನ್ನು ಉತ್ಪಾದಿಸುತ್ತಿದ್ದರು. ಜಿಲ್ಲೆಯಲ್ಲಿ ಒಟ್ಟು ೨೪೯ ಜನ ರೇಷ್ಮೆ ಬೆಳೆಗಾರರಿದ್ದು, ೩೨ ಮಂದಿ ಪರಿಶಿಷ್ಟ ಜಾತಿಯವರು, ೬೭ ಮಂದಿ ಪರಿಶಿಷ್ಟ ಪಂಗಡದವರೂ, ೧೭ ಮಂದಿ ಅಲ್ಪಸಂಖ್ಯಾತರು ಹಾಗೂ ೧೩೩ ಮಂದಿ ಇತರೆ ಜಾತಿಗೆ ಸೇರಿದವರು ಈ ಕೃಷಿಯಲ್ಲಿ ತೊಡಗಿಸಿಕೊಂಡಿದ್ದರು. ಒಟ್ಟು ರೇಷ್ಮೆ ಬೆಳೆಗಾರರಲ್ಲಿ ೩೯ ಮಹಿಳೆಯರು ರೇಷ್ಮೆ ಕೃಷಿಯಲ್ಲಿ ತೊಡಗಿದ್ದರು. ಜಿಲ್ಲೆಯ ಸುಳ್ಯ ತಾಲೂಕನ್ನು ಮಾತ್ರ ಬಿತ್ತನೆ ಪ್ರದೇಶವೆಂದು ಪರಿಗಣಿಸಲಾಗಿದ್ದು, ಇಲ್ಲಿ ಶುದ್ಧ ದ್ವಿತಳಿ ಗೂಡುಗಳನ್ನು ಉತ್ಪಾದಿಸಲಾಗುತ್ತಿದೆ. ಬಂಟ್ವಾಳ, ಬೆಳ್ತಂಗಡಿ, ಮಂಗಳೂರು ಹಾಗೂ ಪುತ್ತೂರು ತಾಲೂಕುಗಳನ್ನು ಬಿತ್ತನೇತರ ಪ್ರದೇಶವೆಂದು ಗುರುತಿಸಲಾಗಿದ್ದು, ಇಲ್ಲಿ ದ್ವಿತಳಿ ಹಾಗೂ ಮಿಶ್ರತಳಿ ಗೂಡುಗಳನ್ನು ಉತ್ಪಾದನೆ ಮಾಡಲಾಗುತ್ತಿದೆ.

ಜಿಲ್ಲೆಯಲ್ಲಿ ಮೂರು ರೇಷ್ಮೆ ಸಹಾಯಕ ನಿರ್ದೇಶಕರ ಕಛೇರಿ, ಒಂದು ತಾಂತ್ರಿಕ ಸೇವಾ ಕೇಂದ್ರ, ಮೂರು ಗಿರಿಜನ ರೇಷ್ಮೆ ವಿಸ್ತರಣಾ ಕೇಂದ್ರ, ನಾಲ್ಕು ವಿಸ್ತರಣಾ ಕೇಂದ್ರ, ಎರಡು ಸರ್ಕಾರಿ ರೇಷ್ಮೆ ಕೃಷಿ ಕ್ಷೇತ್ರಗಳು ಹಾಗೂ ಬಂಟ್ವಾಳ ತಾಲೂಕಿನಲ್ಲಿ ಒಂದು ಸರ್ಕಾರಿ ರೇಷ್ಮೆಗೂಡಿನ ಮಾರುಕಟ್ಟೆ ಇದೆ. ಅಲ್ಲದೆ ರೈತರ ಅನುಕೂಲಕ್ಕಾಗಿ ಜಿಲ್ಲೆಯಲ್ಲಿ ನಾಲ್ಕು ಕ್ವಾಲಿಟಿ ಸಂಘಗಳನ್ನು ಸ್ಥಾಪಿಸಲಾಗಿದೆ. ಸಂಘದ ಅಭಿವೃದ್ಧಿ ಚಟುವಟಿಕೆಗಾಗಿ ಪ್ರತಿ ಸಂಘಕ್ಕೆ ರೂ. ೧೦,೦೦೦ ಸುತ್ತು ನಿಧಿಯನ್ನು ಇಲಾಖೆಯು ನೀಡುತ್ತಿದೆ. ದಕ್ಷಿಣ ಕನ್ನಡ ಜಿಲ್ಲೆಯ ರೇಷ್ಮೆ ಬೆಳೆಗಾರರ ಸಂಘವು ಬಂಟ್ವಾಳದಲ್ಲಿದ್ದು, ರೇಷ್ಮೆ ಬೆಳೆಗಾರರ ಅಭಿವೃದ್ಧಿಗೊಸ್ಕರ ಶ್ರಮಿಸುತ್ತಿದೆ. ಜಿಲ್ಲೆಯಲ್ಲಿ ೨೦೦೫ರ ಜನವರಿ ಅಂತ್ಯಕ್ಕೆ ೩.೦೨೦ ಮೆಟ್ರಿಕ್ ಟನ್ ರೇಷ್ಮೆಗೂಡಿನ ಉತ್ಪಾದನೆ ಆಗಿತ್ತು. ತಾಲೂಕುವಾರು ರೇಷ್ಮೆಗೂಡಿ ಉತ್ಪಾದನೆಯ ವಿವರಗಳನ್ನು ಕೋಷ್ಟಕ ೫.೧೨ ರಲ್ಲಿ ನೀಡಿದೆ.

**ಕೋಷ್ಟಕ ೫.೧೨ : ರೇಷ್ಮೆಗೂಡಿನ ಉತ್ಪಾದನಾ ವಿವರ**

| ಕ್ರ.ಸಂ | ತಾಲೂಕು | ತಳಿ | ೨೦೦೧–೦೨ | ೨೦೦೨–೦೩ | ೨೦೦೩–೦೪ | ೨೦೦೪–೦೫ (ಜನವರಿ–೦೫ರ ಅಂತ್ಯದವರೆಗೆ) |
|---|---|---|---|---|---|---|
| ೧. | ಬಂಟ್ವಾಳ | ಮಿಶ್ರ | ೩.೬೦೩ | ೧.೫೧೧ | ೦.೮೯೯ | ೦.೧೮೦ |
| | | ದ್ವಿತಳಿ | ೫.೪೦೬ | ೨.೮೦೩ | ೦.೬೯೯ | ೦.೩೮೩ |
| | | ಒಟ್ಟು | ೯.೦೦೯ | ೪.೩೧೪ | ೧.೫೮೮ | ೦.೫೬೩ |
| ೨. | ಬೆಳ್ತಂಗಡಿ | ಮಿಶ್ರ | ೨.೪೩೩ | ೧.೨೩೩ | ೧.೦೨೩ | ೦.೩೮೨ |
| | | ದ್ವಿತಳಿ | ೪.೧೯೦ | ೩.೩೩೬ | ೧.೬೪೦ | ೦.೯೭೫ |
| | | ಒಟ್ಟು | ೬.೬೨೩ | ೪.೫೬೯ | ೨.೬೬೩ | ೧.೩೫೭ |
| ೩. | ಮಂಗಳೂರು | ಮಿಶ್ರ | ೧.೨೪೪ | ೧.೦೨೮ | ೦.೦೭೯ | ೦.೦೦೮ |
| | | ದ್ವಿತಳಿ | ೦.೮೭೫ | ೦.೪೨೯ | ೦.೩೮೮ | ೦.೨೭೯ |
| | | ಒಟ್ಟು | ೨.೧೧೯ | ೧.೪೫೭ | ೦.೪೬೭ | ೦.೨೮೭ |
| ೪. | ಪುತ್ತೂರು | ಮಿಶ್ರ | ೨.೨೩೦ | ೧.೩೮೯ | ೦.೩೭೭ | ೦.೪೪೨ |
| | | ದ್ವಿತಳಿ | ೨.೧೩೦ | ೧.೩೮೯ | ೧.೩೭೭ | ೦.೪೪೨ |
| | | ಒಟ್ಟು | ೪.೩೫೮ | ೩.೩೭೭ | ೧.೦೪೭ | ೦.೫೩೪ |
| ೫. | ಸುಳ್ಯ | ಮಿಶ್ರ | – | ೦.೫೦೪ | ೦.೦೧೫ | ೦.೦೪೪ |
| | | ದ್ವಿತಳಿ | ೪.೬೫೬ | **೧೧.೨೦೬** | ೦.೫೩೮ | ೦.೨೩೫ |
| | | ಒಟ್ಟು | ೪.೬೫೬ | ೨.೨೧೦ | ೦.೫೫೩ | ೦.೨೭೯ |
| | ಒಟ್ಟು | ಮಿಶ್ರ | ೯.೫೦೮ | ೬.೨೬೪ | ೨.೬೭೬ | ೦.೭೦೬ |
| | | ದ್ವಿತಳಿ | ೧೭.೨೫೭ | ೯.೬೬೩ | ೩.೬೪೨ | ೨.೩೧೪ |
| | | ಒಟ್ಟು | ೨೬.೭೬೫ | ೧೫.೯೨೭ | ೬.೩೧೮ | ೩.೦೨೦ |

**ಆಧಾರ** : ಕರ್ನಾಟಕ ರೇಷ್ಮೆ ಇಲಾಖೆ–ಮಂಗಳೂರು.

ಜಿಲ್ಲೆಯಲ್ಲಿ ೨೦೦೩–೦೪ರಲ್ಲಿ ರೇಷ್ಮೆ ಕೃಷಿ ಕ್ಷೇತ್ರಗಳು, ಸಲಹಾತ್ಮಕ ಸೇವೆಗಳು, ಪ್ರಾತ್ಯಕ್ಷತೆ ಮತ್ತು ಪ್ರಚಾರ, ಮಹಿಳಾ ಪ್ರಾತ್ಯಕ್ಷತಾ ಕ್ಷೇತ್ರ ತರಬೇತಿ ಕಾರ್ಯಕ್ರಮ, ರೋಗ ನಿಯಂತ್ರಣ ಕಾರ್ಯಕ್ರಮ, ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆ ಮುಂತಾದ ರೇಷ್ಮೆ ಇಲಾಖೆಯ ವಿವಿಧ ಅಭಿವೃದ್ಧಿ ಯೋಜನೆಗಳನ್ನು ಹಮ್ಮಿಕೊಂಡಿದ್ದು, ಅವುಗಳ ವಿವರಗಳನ್ನು ಕೋಷ್ಟಕ ೫.೧೩ರಲ್ಲಿ ನೀಡಲಾಗಿದೆ.

**ಕೋಷ್ಟಕ ೫.೧೩ : ರೇಷ್ಮೆ ಅಭಿವೃದ್ಧಿಗಾಗಿ ಕೈಗೊಂಡ ಕಾರ್ಯಕ್ರಮಗಳ ವಿವರ.**

| ಕ್ರ. ಸಂ. | ಯೋಜನೆಯ ಹೆಸರು | ವಾರ್ಷಿಕ ಗುರಿ ಆರ್ಥಿಕ (ರೂ. ಲಕ್ಷಗಳಲ್ಲಿ) | ವಾರ್ಷಿಕ ಗುರಿ ಭೌತಿಕ ಎ | ವಾರ್ಷಿಕ ಗುರಿ ಭೌತಿಕ ಬಿ | ಬಿಡುಗಡೆಯಾದ ಅನುದಾನ | ೩೧–೦೩–೨೦೦೪ರ ವರೆಗಿನ ಸಾಧನೆ ಆರ್ಥಿಕ ರೂ. ಲಕ್ಷಗಳಲ್ಲಿ) | ೩೧–೦೩–೨೦೦೪ರ ವರೆಗಿನ ಸಾಧನೆ ಭೌತಿಕ ಎ | ೩೧–೦೩–೨೦೦೪ರ ವರೆಗಿನ ಸಾಧನೆ ಭೌತಿಕ ಬಿ |
|---|---|---|---|---|---|---|---|---|
| | | | | **ಜಿಲ್ಲಾ ಪಂಚಾಯತ್ ಕಾರ್ಯಕ್ರಮಗಳು** | | | | |
| ೧. | ರೇಷ್ಮೆ ಕೃಷಿ ಕ್ಷೇತ್ರಗಳು | ೨.೩೫ | ೨.೫೦ ಲಕ್ಷ ಗೂಡುಗಳು | ೦.೫೦ ಲಕ್ಷ ನರ್ಸರಿ | ೧.೪೩೩ | ೧.೫೬೫ | ೧,೪೧,೩೬೦ | ೫೦,೦೦೦ |
| ೨. | ಸಲಹಾತ್ಮಕ] ಸೇವೆಗಳು ಪ್ರಾತ್ಯಕ್ಷಿತೆ ಮತ್ತು ಪ್ರಚಾರ | ೦.೬೬ | ೧೨ ಕ್ಷೇತ್ರೋತ್ಸವ | – | ೦.೪೦೩ | ೦.೩೫೯ | ೯ | – |
| ೩. | ತರಬೇತಿ ಕಾರ್ಯಕ್ರಮ | ೦.೩೯ | ೨೫ ಮಹಿಳೆಯರು | ೨೫ ಪುರುಷರು | ೦.೨೩೮ | ೦.೨೨ | ೨೬ | – |
| ೪. | ರೋಗ ನಿಯಂತ್ರಣ ಕಾರ್ಯಕ್ರಮ | ೦.೯೮ | ೨೫೦ ಫಲಾನುಭವಿಗಳು | – | ೦.೫೯೮ | ೦.೬೦೪ | ೨೫೦ | – |
| ೫. | ಮಹಿಳಾ ಪ್ರಾತ್ಯಕ್ಷತಾ ಕ್ಷೇತ್ರ | ೦.೩೯ | ೨೫ ಮಹಿಳೆಯರು | – | ೦.೨೩೮ | ೦.೧೯೯ | ೨೫ | – |
| ೬. | ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆ | ೧.೨೦ | ೬ ಫಲಾನುಭವಿಗಳು | – | ೦.೭೨ | ೦.೭೨ | ೪ | – |
| | | | | **ತಾಲೂಕು ಪಂಚಾಯತ್ ಕಾರ್ಯಕ್ರಮಗಳು** | | | | |
| ೧ | ಬೈವೋಲ್ಟೈನ್ ಗೂಡಿಗೆ ಪ್ರೋತ್ಸಾಹಧನ | ೦.೨೩ | ೨೩೦೦ ಕಿಗ್ರಾ. ಗೂಡು | – | ೦.೧೪ | ೦.೦೯ | ೮೬೧೬೦ | – |
| ೨. | ರೇಷ್ಮೆ ಹುಳು ಸಾಕುವ ಮನೆಗೆ ಮತ್ತು ರೀಲಿಂಗ್‌ಗೆ ಸಹಾಯಧನ | ೧.೧೭ | ೯ ಫಲಾನುಭವಿಗಳು | – | ೦.೭೨ | ೦.೬೯೭ | ೬ | – |

## ಪುಷ್ಪಕೃಷಿ: (Floriculture)

ಕೃಷಿಯ ಜೊತೆಗೆ ಹೆಚ್ಚು ಲಾಭ ತರುವ ಹೂಗಳನ್ನು ಬೆಳೆಯಲಾಗುತ್ತದೆ. ಪುತ್ತೂರು, ಬಂಟ್ವಾಳ, ಮಂಗಳೂರು ತಾಲೂಕುಗಳಲ್ಲಿ ಪ್ರಮುಖವಾಗಿ ಮಲ್ಲಿಗೆ, ಕನಕಾಂಬರ, ಸೇವಂತಿಗೆ, ಗುಲಾಬಿ, ಆರ್ಕಿಡ್ಸ್ ಮುಂತಾದ ಪುಷ್ಪಕೃಷಿಯ ಬೇಸಾಯ ಕಂಡು ಬರುತ್ತದೆ.

ಜಿಲ್ಲೆಯಲ್ಲಿ ಒಟ್ಟು ೭.೫೦ ಹೆಕ್ಟೇರು ಪ್ರದೇಶದಲ್ಲಿ ರೈತರು ಪುಷ್ಪಕೃಷಿಯಲ್ಲಿ ತೊಡಗಿದ್ದು, ೧೦೫.೨೫ ಟನ್ನು ಪುಷ್ಪಗಳನ್ನು ಬೆಳೆಯಲಾಗುತ್ತಿದೆ. ಪ್ರತಿ ಹೆಕ್ಟೇರಿಗೆ ೧.೬೮ ಟನ್ ಇಳುವರಿ ಪಡೆಯಲಾಗಿದ್ದು, ೨೦೦೪–೦೫ರಲ್ಲಿ ಇದರ ಒಟ್ಟು ಮೌಲ್ಯ ೭೩.೧೩ ಲಕ್ಷ ರೂ.ಗಳಾಗಿತ್ತು.

## ದಕ್ಷಿಣ ಕನ್ನಡ ಸಹಕಾರಿ ಹಾಲು ಉತ್ಪಾದಕರ ಒಕ್ಕೂಟ, ಮಂಗಳೂರು

ಈ ಒಕ್ಕೂಟವು ಕರ್ನಾಟಕದ ಹದಿಮೂರು ಹಾಲು ಒಕ್ಕೂಟಗಳಲ್ಲಿ ಅತ್ಯಂತ ಕಿರಿಯ ಒಕ್ಕೂಟವಾಗಿ ೧೯೮೬ರಲ್ಲಿ ಅಸ್ತಿತ್ವಕ್ಕೆ ಬಂದಿತು. ಅದಕ್ಕೂ ಮೊದಲು ಅಸ್ತಿತ್ವದಲ್ಲಿದ್ದ ಮಣಿಪಾಲದ ಕೆನರಾ ಹಾಲು ಒಕ್ಕೂಟದೊಂದಿಗೆ ಸಂಯೋಜನೆಗೊಂಡು ತನ್ನ ವ್ಯಾಪ್ತಿಯನ್ನು ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎಂಟು ತಾಲೂಕುಗಳಲ್ಲಿ ವಿಸ್ತರಿಸಿಕೊಂಡಿತ್ತು. ಪ್ರಸ್ತುತ ದಕ್ಷಿಣ ಕನ್ನಡ ಜಿಲ್ಲೆಯ ಐದು ತಾಲೂಕುಗಳನ್ನು ತನ್ನ ವ್ಯಾಪ್ತಿಯಲ್ಲಿ ಹೊಂದಿದೆ. ಹಾಲಿನಲ್ಲಿರುವ ಜೀವಾಣುಗಳ ಶಕ್ತಿಗುಂದಿಸಲು ಹಾಲನ್ನು ಪ್ಯಾಶ್ಚರ್ ಸಂಸ್ಕಾರಕ್ಕೆ ಒಳಪಡಿಸಿ (ಪ್ಯಾಶ್ಚರೈಸೇಷನ್), ಹಾಲಿನಲ್ಲಿರುವ ಜಿಡ್ಡನ್ನು ಒಂದು ನಿಶ್ಚಿತ ಮಟ್ಟಕ್ಕೆ ತಂದು ಪಾಲಿಥೀನ್ ಚೀಲಗಳಲ್ಲಿ ತುಂಬಿ ಮಾರಾಟ ಮಾಡಲಾಗುತ್ತದೆ. ಹಾಲಿನ ಉಪ ಉತ್ಪನ್ನಗಳಾದ ಬೆಣ್ಣೆ, ತುಪ್ಪ, ಪೇಡಾ, ಮೈಸೂರುಪಾಕ್, ಲಸ್ಸಿ, ಮಜ್ಜಿಗೆ, ಮೊಸರು, ಖೋವಾ, ಬೆಣ್ಣೆ ಸುವಾಸಿತ ಹಾಲು, ಬಾದಾಮ್ ಪೌಡರ್, ಜಾಮೂನ್ ಮಿಕ್ಸ್, ಶೈತೀಕರಣದ ಅವಶ್ಯಕತೆಯಿಲ್ಲದ ೪೫ ದಿವಸಗಳವರೆಗೆ ಇಡಬಹುದಾದ ಗುಡ್‌ಲೈಫ್ ಹಾಲು ಮುಂತಾದ ಉತ್ಪನ್ನಗಳನ್ನು ತಯಾರಿಸಿ ಮಾರಾಟ ಮಾಡಲಾಗುತ್ತಿದೆ. ಎಲ್ಲ ಉತ್ಪನ್ನಗಳ ಚೀಲದ ಮೇಲೆ 'ನಂದಿನಿ' ಎಂಬ ಟ್ರೇಡ್‌ಮಾರ್ಕ್ ಇರುತ್ತದೆ.

ಒಕ್ಕೂಟದ ಆಡಳಿತ ಕಛೇರಿ ಮತ್ತು ಉತ್ಪಾದನಾ ಘಟಕಗಳು ಕುಲಶೇಖರದಲ್ಲಿವೆ. ಈ ಉದ್ಯಮವು ಸಹಕಾರ ತತ್ವದ ಆಧಾರದ ಮೇಲೆ ಸ್ಥಾಪಿತಗೊಂಡಿದ್ದು, ಜಿಲ್ಲೆಯ ಎಲ್ಲಾ ಹಳ್ಳಿಗಳು ಈ ಒಕ್ಕೂಟದ ವ್ಯಾಪ್ತಿಗೆ ಸೇರಿವೆ. ಹಾಲು ಉತ್ಪಾದನೆ ಮತ್ತು ಮಾರಾಟ, ಉತ್ತಮ ತಳಿಗಳ ಅಭಿವೃದ್ಧಿ, ದನಗಳ ರೋಗನಿವಾರಣೆಗೆ ಏರ್ಪಾಡು, ಹಸುಗಳಿಗೆ ಪೌಷ್ಠಿಕ ಆಹಾರ ಪೂರೈಕೆ, ಸಂಶೋಧನೆ ಹಾಗೂ ಅಭಿವೃದ್ಧಿ ಮುಂತಾದ ಕಾರ್ಯಗಳನ್ನು ಒಕ್ಕೂಟ ನೋಡಿಕೊಳ್ಳುತ್ತದೆ.

ಜಿಲ್ಲೆಯಲ್ಲಿ ೨೦೦೩–೦೪ರಲ್ಲಿ ೪೩೩ ಹಾಲು ಉತ್ಪಾದಕರ ಸಂಘಗಳಿದ್ದವು. ಈ ಸಂಘಗಳಿಂದ ಸಂಚಯನಗೊಂಡ ಪಾಲು ಬಂಡವಾಳದ ಮೊತ್ತ ೧,೭೮,೬೭,೩೦೦ ರೂ.ಗಳಾಗಿತ್ತು. ಸರ್ಕಾರದ ಪಾಲು ಧನ ರೂ. ೧೧.೭೦ ಲಕ್ಷ ಸೇರಿದಂತೆ ಒಟ್ಟು ಬಂಡವಾಳ ರೂ. ೧,೯೦,೩೭,೩೦೦ ಆಗಿದೆ.

ಒಟ್ಟು ನೋಂದಾಯಿತ ೪೩೩ ಹಾಲು ಉತ್ಪಾದಕರ ಸಂಘಗಳಲ್ಲಿ ೪೩೨ ಸಂಘಗಳು ಕಾರ್ಯನಿರತವಾಗಿದ್ದು, ಇವುಗಳಲ್ಲಿ ೭೨ ಮಹಿಳಾ ಸಂಘಗಳೂ ಸೇರಿದ್ದವು. ಈ ಎಲ್ಲಾ ಸಂಘಗಳಲ್ಲಿ ಒಟ್ಟು ೭೪,೨೨೧ ಸದಸ್ಯರು ಸದಸ್ಯತ್ವವನ್ನು ಹೊಂದಿದ್ದು, ಶೇಕಡಾ ೭ರಷ್ಟು ಪ್ರಗತಿ ದಾಖಲಾಗಿದೆ. ಸಂಘಗಳಲ್ಲಿ ಒಟ್ಟು ಮಹಿಳಾ ಸದಸ್ಯರ ಸಂಖ್ಯೆ ೧೮,೦೬೭ ಆಗಿದ್ದು, ಶೇಕಡಾ ೧೫ರಷ್ಟು ಪ್ರಗತಿಯಾಗಿದೆ. ಒಟ್ಟು ಸದಸ್ಯರಲ್ಲಿ ೨೬,೭೯೯ ಸದಸ್ಯರು ಹಾಲನ್ನು ಸರಬರಾಜು ಮಾಡುತ್ತಿದ್ದು, ಹಾಲು ಹಾಕುವ ಸಕ್ರಿಯ ಸದಸ್ಯರ ಸಂಖ್ಯೆಯನ್ನು ಹೆಚ್ಚಿಸಬೇಕಾಗಿದೆ. ೨೦೦೩–೦೪ರಲ್ಲಿ ಸಂಘಗಳಿಂದ ಸಂಗ್ರಹಿಸಿದ ಹಾಲಿನ ಒಟ್ಟು ಪ್ರಮಾಣ ೪,೫೭,೯೮,೫೩೧ ಕೆ. ಜಿ.ಗಳಾಗಿದೆ. ಸಂಘ ಒಂದರ ಸರಾಸರಿ ದೈನಂದಿನ ಹಾಲು ಶೇಖರಣೆಯ ಪ್ರಮಾಣ ೨೭೫ ಲೀಟರ್‌ನಿಂದ ೨೯೧ ಲೀಟರಿಗೆ ವೃದ್ಧಿಯಾಗಿರುತ್ತದೆ. ೨೦೦೩–೦೪ನೇ ಸಾಲನ್ನು ವಿಶೇಷವಾಗಿ ಶುದ್ಧ ಹಾಲಿನ ಉತ್ಪಾದನಾ ವರ್ಷವನ್ನಾಗಿ ಪರಿಗಣಿಸಿ ಎಲ್ಲಾ ಸಂಘಗಳಲ್ಲೂ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಒಕ್ಕೂಟವು ಜಾನುವಾರುಗಳ ಆರೋಗ್ಯ ರಕ್ಷಣೆ ಮತ್ತು ಸಂವರ್ಧನೆಗಳಿಗೆ ಅಗ್ರ ಪ್ರಾಶಸ್ತ್ಯವನ್ನು ನೀಡುತ್ತಿದೆ. ಒಕ್ಕೂಟದ ವ್ಯಾಪ್ತಿಯಲ್ಲಿ ಒಟ್ಟು ೨೯೨ ಕೃತಕ ಗರ್ಭಧಾರಣಾ ಕೇಂದ್ರಗಳು ಗ್ರಾಮೀಣ ಪ್ರದೇಶಗಳಲ್ಲಿ (ಸಂಘಗಳಲ್ಲಿ) ಕಾರ್ಯನಿರ್ವಹಿಸುತ್ತಿವೆ. ೨೦೦೨–೦೩ರಲ್ಲಿ ೧.೨೪ಲಕ್ಷ ರಾಸುಗಳಿಗೆ ಕೃತಕ ಗರ್ಭಧಾರಣೆ ಕೈಗೊಳ್ಳಲಾಗಿದ್ದು, ೬೫,೩೯೯ ಕರುಗಳು ಜನಿಸಿದ್ದವು. ೨೬೮ ಪ್ರಥಮ ಚಿಕಿತ್ಸಾ ಕೇಂದ್ರಗಳಲ್ಲಿ ೩೨,೮೧೦ ಜಾನುವಾರುಗಳಿಗೆ ಪ್ರಥಮ ಚಿಕಿತ್ಸೆ ನೀಡಲಾಗಿದೆ. ತುರ್ತು ಕರೆ ಘಟಕಗಳಲ್ಲಿ ೫,೯೨೫ ಜಾನುವಾರುಗಳಿಗೆ ತುರ್ತು ಚಿಕಿತ್ಸೆ ನೀಡಲಾಗಿದೆ. ಸಂಚಾರಿ ಮಾರ್ಗದಲ್ಲಿ ೩೧,೧೨೪ ಜಾನುವಾರುಗಳು ಚಿಕಿತ್ಸೆಗೊಳಗಾಗಿವೆ. ಭೀಕರ ರೋಗವಾದ ಕಾಲುಬಾಯಿ ಜ್ವರದ ನಿರೋಧಕ ಚುಚ್ಚುಮದ್ದನ್ನು ೪೫,೧೦೦ ಜಾನುವಾರುಗಳಿಗೆ ನೀಡಲಾಗಿದೆ. ೨೫೬ ಸಂಘಗಳಲ್ಲಿ ಕೆಚ್ಚಲು ಬಾವು ನಿಯಂತ್ರಣಾ ಉಪಕರಣವಾದ 'ಡಿಫಾಲ್' ಮತ್ತು 'ಡಿಪ್‌ಕಟ್'ಅನ್ನು ನೀಡಲಾಗಿದೆ.

ಒಕ್ಕೂಟದಲ್ಲಿ ೨೦೦೨–೦೩ರಲ್ಲಿ ಒಟ್ಟು ೩೧,೯೪೮.೩೭ ಮೆಟ್ರಿಕ್ ಟನ್ ಪಶು ಆಹಾರ ಮಾರಾಟವಾಗಿದೆ. ೪೩೧ ಸಂಘಗಳಲ್ಲಿ ೭೦ ಮೆಟ್ರಿಕ್ ಟನ್ ಲವಣ ಮಿಶ್ರಣ ಮಾರಾಟವಾಗಿರುತ್ತದೆ. ೨೦೦೩–೦೪ರಲ್ಲಿ ೫.೫ ಮೆಟ್ರಿಕ್ ಟನ್ ಮೇವಿನ ಬೀಜಗಳನ್ನು ಮತ್ತು ೪೯ ಲಕ್ಷ ಮೇವಿನ ಕಡ್ಡಿಗಳನ್ನು ವಿತರಣೆ ಮಾಡಲಾಗಿದೆ.

ಒಕ್ಕೂಟವು ೨೦೦೩–೦೪ರಲ್ಲಿ ಪ್ರತಿದಿನ ೧,೪೫,೨೪೨ ಲೀಟರ್ ಹಾಲನ್ನು ಮಾರಾಟ ಮಾಡುತ್ತಿದ್ದು, ೨೬,೧೬,೬೯೭ ಕೆಜಿ. ಮೊಸರು, ೨,೭೯,೮೩೧ ಲೀಟರ್ ಲಸ್ಸಿ, ೨೭೧.೬ ಲೀಟರ್ ಮಜ್ಜಿಗೆ (ದಿನವಹಿ), ೬೧೭ ಟನ್ ತುಪ್ಪ ೧,೪೬,೭೪೮.೩ ಕೆಜಿ. ಹಾಲಿನ ಕೆನೆ, ೯,೮೪೧ ಕೆ.ಜಿ. ಬೆಣ್ಣೆ ಮುಂತಾದ ಉತ್ಪನ್ನಗಳನ್ನು ಮಾರಾಟ ಮಾಡಲಾಗಿದೆ. ಗ್ರಾಹಕರಿಗೆ ಉತ್ತಮ ಗುಣಮಟ್ಟದ ಹಾಲನ್ನು ಒದಗಿಸಲು ಒಟ್ಟು ೫೪ ವಿತರಣಾ ಮಾರ್ಗಗಳಿದ್ದು, ಅವುಗಳಲ್ಲಿ ೪೪ ಮಾರ್ಗಗಳನ್ನು ಉಷ್ಣ ಸಂಸ್ಕರಣಾ ಮಾರ್ಗಕ್ಕೆ ಉನ್ನತೀಕರಿಸಲಾಗಿದೆ. ೫೮ ಸಂಘ ಸಂಸ್ಥೆಗಳು, ೫೪೦ ವಿತರಕರು ಮಾರಾಟ ಜಾಲದಲ್ಲಿ ಸೇರಿದ್ದಾರೆ. ಕೊಲ್ಲೂರು, ಉಡುಪಿ, ಸುಬ್ರಹ್ಮಣ್ಯ, ಧರ್ಮಸ್ಥಳ, ಗೋಕರ್ಣನಾಥೇಶ್ವರ, ಕಟೀಲು ಮುಂತಾದ ಎಲ್ಲಾ ದೇವಸ್ಥಾನಗಳಿಗೆ ನಂದಿನಿಯ ತುಪ್ಪ ಸರಬರಾಜಾಗುತ್ತಿದೆ. ಹಾಲು ಮತ್ತು ಹಾಲಿನ ಉತ್ಪನ್ನಗಳ ಗುಣ ಶ್ರೇಷ್ಠತೆಗೆ ಹೆಚ್ಚು ಆದ್ಯತೆ ನೀಡಲಾಗಿದೆ. ಪರಿಣಾಮವಾಗಿ ಅಂತರಾಷ್ಟ್ರೀಯ ಗುಣಮಟ್ಟ ಧೃಢೀಕರಣ ಪತ್ರವಾದ ISO ೯೦೦೧–೨೦೦೦ ದೊರಕಿದ್ದು, ಆಹಾರ ತಯಾರಿಕೆಗೆ ನೀಡಲಾಗುವ ಹೆಚ್.ಎ.ಸಿ.ಸಿ.ಪಿ ಮತ್ತು ಪರಿಸರ ಸಂರಕ್ಷಣೆಗೆ ನೀಡುವ ISO ೧೪೦೦೧ ಧೃಡೀಕರಣವನ್ನು ಗಳಿಸಿದೆ. ಸಮಗ್ರ ಗುಣನೀತಿ ನಿರ್ವಹಣೆ (TQM) ಕಾರ್ಯನೀತಿಯನ್ನು ಅತೀ ಯಶಸ್ವಿಯಾಗಿ ನಿರ್ವಹಿಸಲಾಗುತ್ತಿದೆ. ಮಣಿಪಾಲದಲ್ಲಿ ಐದು ಕೋಟಿ ವೆಚ್ಚದೊಂದಿಗೆ ಅತ್ಯಾಧುನಿಕ, ಕೆನೆ ವಿಭಾಜಕ ಯಂತ್ರ, ಹಾಲಿನ ಪ್ಯಾಕಿಂಗ್ ಯಂತ್ರ ಹಾಗೂ ಶೀತ ಸಂಗ್ರಾಹಕ, ಸೌಲಭ್ಯಗಳನ್ನೊಳಗೊಂಡ ಮಣಿಪಾಲ ಡೇರಿಯನ್ನು ೯.೦೧.೨೦೦೪ರಲ್ಲಿ ಆರಂಭಿಸಲಾಗಿದೆ.

ಒಕ್ಕೂಟದ ಆರ್ಥಿಕ ಪರಿಸ್ಥಿತಿಯು ಅತ್ಯಂತ ಸುಭದ್ರವಾಗಿದ್ದು, ಒಕ್ಕೂಟವು ಲಾಭದಲ್ಲಿದೆ. ೨೦೦೪–೦೫ರಲ್ಲಿ ೭೦ ಲಕ್ಷ ರೂ. ಲಾಭಗಳಿಸಿದೆ ಹೆಚ್ಚಿನ ವಿವರಗಳಿಗೆ ಕೋಷ್ಠಕ ೫.೧೪ ಹಾಗೂ ೫.೧೫ ರಲ್ಲಿ ನೋಡಿ.

**ಕೋಷ್ಟಕ ೫.೧೪ : ಉತ್ಪನ್ನವಾರು ಸಾಧಿಸಿರುವ ಪ್ರಗತಿಯ ವಿವರ**

| ಕ್ರ.ಸಂ | ವಿವರ | ವಾರ್ಷಿಕ ಮಾರಾಟ | | |
|---|---|---|---|---|
| | | ೨೦೦೨–೦೩ | ೨೦೦೩–೦೪ | ಪ್ರಗತಿ ಶೇಕಡಾವಾರು |
| ೧. | ಹಾಲು (ದಿನವಹಿ ಲೀ.) | ೧೨೬೯೦.೦ | ೧೪೦೮೫೬.೦ | ೧೧.೭ |
| ೨. | ಮೊಸರು (ದಿನವಹಿ ಲೀ.) | ೫೫೮೯.೦ | ೭೪೯೯.೮ | ೩೭.೭೬ |
| ೩. | ಲಸ್ಸಿ (ದಿನವಹಿ ಲೀ.) | ೪೮೫.೬ | ೭೬೬.೦ | ೫೭.೭೪ |
| ೪. | ಮಜ್ಜಿಗೆ (ದಿನವಹಿ ಲೀ.) | ೧೩೯.೪ | ೨೭೧.೬ | ೯೪.೮ |
| ೫. | ತುಪ್ಪ (ಟನ್‌ಗಳಲ್ಲಿ) | ೫೧೫.೦ | ೬೧೭.೦ | ೧೯.೮ |
| ೬. | ಹಾಲಿನ ಕೆನೆ (ಕೆ.ಜಿ.ಗಳಲ್ಲಿ) | ೧೧೫೪೮೪.೧ | ೧೪೬೭೪೮.೩ | ೨೭.೦ |
| ೭. | ಪೇಡಾ (ಟನ್‌ಗಳಲ್ಲಿ) | ೧೩.೩ | ೧೪.೫ | ೯.೦ |
| ೮. | ಮೈಸೂರ್‌ಪಾಕ್ (ಟನ್‌ಗಳಲ್ಲಿ) | ೧೪.೭ | ೧೩.೨ | ೧೦.೦ |
| ೯. | ಖೋವಾ (ಕೆ.ಜಿ.ಗಳಲ್ಲಿ) | ೨೨೦೮.೦ | ೨೧೭೭.೦ | ೧.೪ |
| ೧೦. | ಬೆಣ್ಣೆ (ಕೆ.ಜಿ.ಗಳಲ್ಲಿ) | ೮೪೮೭.೦ | ೯೮೪೧.೦ | ೧೫.೯೫ |
| ೧೧. | ಸುವಾಸಿತ ಹಾಲು (ಲೀ.ಗಳಲ್ಲಿ) | ೧೪೯೯೬.೮ | ೧೮೧೫೪.೬ | ೨೧.೦ |
| ೧೨. | ಬಾದಾಮ್ ಪೌಡರ್ (ಕೆ.ಜಿ.ಗಳಲ್ಲಿ) | ೨೫೯೦.೮ | ೩೪೩೩.೬ | ೩೨.೫ |
| ೧೩. | ಜಾಮೂನು ಮಿಕ್ಸ್ | ೭೫.೭ | ೯೮.೫ | ೩೦.೧ |
| ೧೪. | ಗುಡ್‌ಲೈಫ್ ಸ್ಲಿಮ್ (ಲೀ.ಗಳಲ್ಲಿ) | – | ೧೮೮೦೬.೦ | – |
| ೧೫. | ಗುಡ್‌ಲೈಫ್ (ಲೀ.ಗಳಲ್ಲಿ) | – | ೭೧೮೮.೦ | – |

**ಒಕ್ಕೂಟದ ಸಂಸ್ಕರಣೆ ವಿಭಾಗದ ಪ್ರಗತಿ**

| ಕ್ರ.ಸಂ | ವಿವರ | ೨೦೦೧–೦೨ | ೨೦೦೨–೦೩ | ೨೦೦೩–೦೪ | ಪ್ರಗತಿ% |
|---|---|---|---|---|---|
| ೧. | ಹಾಲು (ಕೆ.ಜಿ.ಗಳಲ್ಲಿ) | ೫,೨೪,೨೫,೩೭೮ | ೫,೫೧,೪೨,೨೧೦.೦ | ೬೫,೭೦,೭೪೩.೦ | ೧೯.೦೦ |
| ೨ | ಮೊಸರು (ಕೆ.ಜಿ.ಗಳಲ್ಲಿ) | ೧೩,೮೯,೩೦೦ | ೨೦,೪೩,೯೫.೦ | ೨೮,೨೫,೨೫೮.೦ | ೩೮.೨೦ |
| ೩ | ಮಸಾಲ ಮಜ್ಜಿಗೆ (ಲೀ.ಗಳಲ್ಲಿ) | ೩೬,೧೦೦ | ೫೩,೦೦೦ | ೧,೦೪,೦೧೭.೦ | ೯೬.೨೫ |
| ೪ | ಸಿಹಿ ಲಸ್ಸಿ (ಲೀ.ಗಳಲ್ಲಿ) | ೧,೦೭,೪೦೦ | ೧,೮೧,೪೫೮.೦ | ೨,೯೧,೨೪೧.೦ | ೬೦.೫೦ |
| ೫ | ಹಾಲಿನ ಕೆನೆ (ಕೆ.ಜಿ.ಗಳಲ್ಲಿ) | ೧೩,೧೦,೩೦೦ | ೧೪,೨೬,೦೮೫.೦ | ೧೭,೦೯,೩೨೫.೦ | ೨೦.೦೦ |
| ೬ | ಪೇಡಾ (ಕೆ.ಜಿ.ಗಳಲ್ಲಿ) | ೧೦,೧೦೦ | ೧೫,೬೭೯.೦ | ೧೫,೦೮೪ | −೧.೦೦ |
| ೭ | ಮೈಸೂರ್‌ಪಾಕ್ (ಕೆ.ಜಿ.ಗಳಲ್ಲಿ) | ೧೦,೨೦೦ | ೧೫,೫೩೪.೦ | ೧೩,೮೧೫.೦ | −೧೧.೦೦ |
| ೮ | ತುಪ್ಪ (ಕೆ.ಜಿ.ಗಳಲ್ಲಿ) | ೪,೯೩,೧೦೦ | ೫,೨೩,೮೦೩.೦ | ೬,೨೭,೧೯೧.೦ | ೧೯.೭೦ |

**ಕೋಷ್ಟಕ : ೫.೧೫ ದಕ್ಷಿಣ ಕನ್ನಡ ಸಹಕಾರಿ ಹಾಲು ಉತ್ಪಾದಕರ ಒಕ್ಕೂಟ ನಿಯಮಿತ, ಮಂಗಳೂರು. ಇದರ ಸಾಧನೆ ವಿವರ**

| ಉತ್ಪನ್ನಗಳು | ೨೦೦೨–೦೩ | ೨೦೦೩–೦೪ | ೨೦೦೪–೦೫ |
|---|---|---|---|
| ಸಂಘಗಳ ಸಂಖ್ಯೆ | ೪೨೪ | ೪೪೫ | ೪೭೭ |
| ಸದಸ್ಯತ್ವ | ೬೯,೩೮೯ | ೭೪,೨೨೧ | ೭೭,೪೦೧ |
| ಹಾಲು ಶೇಖರಣೆ ದಿನವಹಿ (ಕೆ.ಜಿ.ಗಳಲ್ಲಿ) | ೧,೧೯,೭೮೨.೦ | ೧,೨೫,೪೭೫.೦ | ೧,೪೨,೯೪೩.೦ |
| ಹಾಲು ಮಾರಾಟ ದಿನವಹಿ (ಲೀಟರುಗಳಲ್ಲಿ) | ೧,೨೯,೭೭೫ | ೧,೪೫,೨೪೨.೦ | ೧,೫೧,೨೭೫.೦ |
| ಲಾಭ (ಲಕ್ಷಗಳಲ್ಲಿ) | ೫೪.೨೯ | ೭೩.೬೨ | ೭೦.೦ |
| **ಉತ್ಪನ್ನಗಳ ಮಾರಾಟ** | | | |
| ಬೆಣ್ಣೆ (ಕೆ.ಜಿ.ಗಳಲ್ಲಿ) | ೮,೪೮೭ | ೯,೮೪೧.೦ | ೪,೮೦೫.೦ |
| ತುಪ್ಪ (ಕೆ.ಜಿ.ಗಳಲ್ಲಿ) | ೫,೧೫,೫೬೭.೦ | ೬,೧೬,೮೫೬.೦ | ೬,೩೯,೭೭೦.೦ |
| ಪೇಡ್ (ಕೆ.ಜಿ.ಗಳಲ್ಲಿ) | ೧೩,೨೫೩.೦ | ೧೪,೫೦೧.೦ | ೨೦,೦೪೦.೦ |
| ಮೈಸೂರುಪಾಕ್ (ಕೆ.ಜಿ.ಗಳಲ್ಲಿ) | ೧೪,೯೦೨.೦ | ೧೩,೧೬೬.೦ | ೧೪,೬೨೮.೦ |
| ಬಟರ್ ಮಿಲ್ಕ್ (ಲೀಟರುಗಳಲ್ಲಿ) | ೫೦,೪೮೪.೦ | ೧,೦೦,೨೬೯.೦ | ೧,೧೬,೯೦೬.೦ |
| ಲಸ್ಸಿ (ಲೀಟರುಗಳಲ್ಲಿ) | ೧,೭೭,೧೬೩.೦ | ೨,೭೯,೮೩೧.೦ | ೩,೪೩,೯೦೨.೦ |
| ಮೊಸರು (ಕೆ.ಜಿ.ಗಳಲ್ಲಿ) | ೨೦,೩೮,೫೫೫.೦ | ೨೬,೧೬,೯೭.೦ | ೩೮,೨೬,೩೭೪.೦ |
| ಕ್ರೀಂ (ಕೆ.ಜಿ.ಗಳಲ್ಲಿ) | ೧,೧೫,೪೮೪.೦ | ೧,೪೬,೮೯೩.೦ | ೧,೮೨,೨೮೬.೦ |

**ಆಧಾರ:** ದಕ್ಷಿಣ ಕನ್ನಡ ಸಹಕಾರಿ ಹಾಲು ಉತ್ಪಾದಕರ ಒಕ್ಕೂಟ ನಿಯಮಿತ, ಮಂಗಳೂರು.

## ಖಾದಿ ಮತ್ತು ಗ್ರಾಮೋದ್ಯೋಗ

ಖಾದಿ ಮತ್ತು ಗ್ರಾಮೋದ್ಯೋಗ ಕೈಗಾರಿಕೆಗಳು ಕೆಲವು ವರ್ಗದ ಜನರ ಆರ್ಥಿಕಮಟ್ಟವನ್ನು ಸುಧಾರಿಸಲು ಮಹತ್ತರವಾದ ಪಾತ್ರವಹಿಸಿವೆ. ಅರ್ಥಶಾಸ್ತ್ರಜ್ಞರ ಪ್ರಕಾರ ವ್ಯವಸಾಯ ಅಭಿವೃದ್ಧಿಪಡಿಸಿದರೆ, ವ್ಯವಸಾಯವನ್ನೇ ಅವಲಂಭಿಸಿರುವ ಗ್ರಾಮೀಣ ಸಣ್ಣ ಕೈಗಾರಿಕೆಗಳ ಪುನರ್ಜನ್ಮವಾದಂತೆ ಎಂದಿದ್ದಾರೆ. ರಾಜ್ಯದಲ್ಲಿ ೨೦೦೧ರ ಜನಗಣತಿಯಂತೆ, ಇದ್ದ ಒಟ್ಟು ಕೆಲಸಗಾರರಲ್ಲಿ ವ್ಯವಸಾಯದಲ್ಲಿ ತೊಡಗಿರುವವರ ಸಂಖ್ಯೆ ಶೇ. ೫೫.೮೯ರಷ್ಟಿತ್ತು. ಜಿಲ್ಲೆಯಲ್ಲಿ ೧೯೯೧ ಹಾಗೂ ೨೦೦೧ರ ಜನಗಣತಿಯಂತೆ ಕ್ರಮವಾಗಿ ಒಟ್ಟು ಕೆಲಸಗಾರರಲ್ಲಿ ವ್ಯವಸಾಯದಲ್ಲಿ ತೊಡಗಿದ್ದವರ ಸಂಖ್ಯೆ ಶೇ. ೩೫.೭೯ರಷ್ಟು (ಈ ಸಂಖ್ಯೆಯಲ್ಲಿ ಈಗಿನ ಉಡುಪಿ ಜಿಲ್ಲೆಯು ಸೇರಿದಂತೆ) ಹಾಗೂ ಶೇ. ೯.೬೭ರಷ್ಟಾಗಿದೆ. ವ್ಯವಸಾಯ ವರ್ಷ ಪೂರ್ತಿ ಉದ್ಯೋಗ ನೀಡಿದ ಕಾರಣ ವ್ಯವಸಾಯಕ್ಕೆ ಪೂರಕವಾದ ಉದ್ಯಮಗಳು ಮಹತ್ವ ಪಡೆದುಕೊಳ್ಳುತ್ತವೆ.

ಪೂರಕ ಉದ್ಯಮಗಳಿಲ್ಲದ ಸಂದರ್ಭದಲ್ಲಿ ಜನರು ಕೈಗಾರಿಕಾ ಪ್ರದೇಶಗಳಿಗೆ ವಲಸೆ ಹೋಗಬೇಕಾಗುತ್ತದೆ. ಆಗ ಗ್ರಾಮೀಣ ಪ್ರದೇಶದ ಆರ್ಥಿಕ ವ್ಯವಸ್ಥೆಯಲ್ಲಿ ಏರುಪೇರುಗಳುಂಟಾಗುತ್ತವೆ. ಆದ್ದರಿಂದ ಕರ್ನಾಟಕ ಸರ್ಕಾರ ಈ ಉದ್ದಿಮೆಗಳಿಗೆ ಉತ್ತೇಜನ ಹಾಗೂ ಪ್ರೋತ್ಸಾಹಗಳನ್ನು ನೀಡುತ್ತಾ ಬಂದಿದೆ. ಅದಕ್ಕಾಗಿ ಜಿಲ್ಲೆಯಲ್ಲಿ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ಕಛೇರಿಯು ೧೯೫೮ರಲ್ಲೇ ಆರಂಭಗೊಂಡಿತು.

ಜಿಲ್ಲೆಯಲ್ಲಿ ಗ್ರಾಮೀಣ ಎಣ್ಣೆ ಕೈಗಾರಿಕೆ, ಏಕದಳ ಹಾಗೂ ದ್ವಿದಳ ಧಾನ್ಯಗಳ ಕೈಗಾರಿಕೆ, ಕುಂಬಾರಿಕೆ, ಚರ್ಮೋದ್ಯಮ, ಬಡಗಿತನ, ಕಮ್ಮಾರಿಕೆ, ಸುಣ್ಣ, ಹಪ್ಪಳ ಮತ್ತು ಮಸಾಲೆಪುಡಿಗಳ ತಯಾರಿಕೆ, ಗೇರುಬೀಜ ಪರಿಷ್ಕರಣೆ, ಟೈಲರಿಂಗ್, ಖಂಡಸಾರಿ, ಔಷಧಿ ಸಸ್ಯಗಳು ಹಾಗೂ ಹಣ್ಣುಗಳನ್ನು ಸಂರಕ್ಷಣೆ ಮಾಡುವುದು, ಜೇನುಸಾಕಾಣಿಕೆ, ಗೋಬರ್‌ಗ್ಯಾಸ್ ಪ್ಲಾಂಟ್ ಉದ್ಯಮ ಮುಂತಾದವು ಖಾದಿ ಮತ್ತು ಗ್ರಾಮೋದ್ಯೋಗ ಕೈಗಾರಿಕೆಗಳಾಗಿ ಜಿಲ್ಲೆಯಾದ್ಯಂತ ಹಬ್ಬಿವೆ. ಖಾದಿ ಮತ್ತು ಗ್ರಾಮೋದ್ಯೋಗ ಕೈಗಾರಿಕೆಗಳನ್ನು ವೈಜ್ಞಾನಿಕತೆಯ ಆಧಾರದ ಮೇಲೆ ಅಭಿವೃದ್ಧಿಪಡಿಸಲು, ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯು ಸಹಕಾರಿ ಸಂಘಗಳಿಗೆ ಹಾಗೂ ವೈಯಕ್ತಿಕ ಫಲಾನುಭವಿಗಳಿಗೆ ಹಣಕಾಸಿನ ನೆರವನ್ನು ನೀಡುತ್ತಿದೆ.

**ಧನ ಸಹಾಯ ಸ್ವರೂಪ ಯೋಜನೆ:** ಮಂಡಳಿಯು ಧನ ಸಹಾಯ ಸ್ವರೂಪ ಯೋಜನೆಯಲ್ಲಿ ೧೯೫೮ ರಿಂದ ೨೦೦೪ರ ವರೆಗೆ ೧೨ ಸಹಕಾರ ಸಂಘ, ೬೬ ಸಂಘ ಸಂಸ್ಥೆ ಹಾಗೂ ೨೦೪ ವೈಯಕ್ತಿಕ ಘಟಕಗಳಿಗೆ ರೂ. ೧೫೦.೧೯ ಲಕ್ಷಗಳ ಆರ್ಥಿಕ ನೆರವು ನೀಡಿರುತ್ತದೆ. ಈ ಯೋಜನೆಯಲ್ಲಿ ಘಟಕಗಳಿಗೆ ನೀಡಿದ ಸಾಲದಲ್ಲಿ ಬಡ್ಡಿ ಸೇರಿದಂತೆ ರೂ. ೧೨೪.೦೬ ಲಕ್ಷ ಸಾಲ ವಸೂಲಿಯಾಗಿದೆ. ನೆರವು ಪಡೆದ ೧೧೪ ಘಟಕಗಳು ಸಾಲ ಮತ್ತು ಬಡ್ಡಿಯನ್ನು ಸಂಪೂರ್ಣವಾಗಿ ಮರು ಪಾವತಿಸಿವೆ. ೧೬೮ ಘಟಕಗಳಿಂದ ರೂ. ೮೧.೨೨ಲಕ್ಷ ಸಾಲ ಮತ್ತು ಬಡ್ಡಿ ವಸೂಲಾಗಬೇಕಾಗಿದೆ.

**ಸಮೂಹ ಬ್ಯಾಂಕ್ ಯೋಜನೆ:** ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯು ಸೆಪ್ಟೆಂಬರ್ ೨೦೦೪ರ ಅಂತ್ಯದಲ್ಲಿದ್ದ ೧೫ ಗ್ರಾಮೋದ್ಯೋಗ ಘಟಕಗಳಿಗೆ ರೂ. ೧೨೪.೨೫ ಲಕ್ಷ ಆರ್ಥಿಕ ನೆರವು ನೀಡಿದೆ. ಈ ನೆರವಿನಲ್ಲಿ ರೂ. ೯೮.೪೩ ಲಕ್ಷ ಸಾಲ ಹಾಗೂ ರೂ. ೨೫.೮೨ ಲಕ್ಷ ಮಾರ್ಜಿನ್ ಮನಿ ಸೇರಿರುತ್ತದೆ. ಈ ಯೋಜನೆಯಲ್ಲಿ ಖನಿಜಾಧಾರಿತ ಉದ್ದಿಮೆ, ಕೊಬ್ಬರಿ ಎಣ್ಣೆ ತಯಾರಿಕೆ, ಅಲ್ಯೂಮಿನಿಯಂ, ಕೇನ್, ಹಣ್ಣು ಪರಿಷ್ಕರಣೆ, ರೂರಲ್ ಇಂಜಿನಿಯರಿಂಗ್ ಘಟಕ ಸ್ಥಾಪಿಸಲು ನೆರವು ಮುಂತಾದವು ಸೇರಿವೆ. ಈ ಸೌಲಭ್ಯ ಪಡೆದ ಘಟಕಗಳು ಸಾಲ ಮತ್ತು ಬಡ್ಡಿ ಸೇರಿದಂತೆ ೩೮.೪೨ ಲಕ್ಷ ರೂ.ಗಳನ್ನು ಮರುಪಾವತಿಸಿವೆ. ನೆರವು ಪಡೆದ ಎರಡು ಘಟಕಗಳು ಸಂಪೂರ್ಣವಾಗಿ ಸಾಲ ಮರುಪಾವತಿಸಿವೆ. ಇನ್ನೂ ೧೩ ಘಟಕಗಳು ಸಾಲ ಮರುಪಾವತಿಸಬೇಕಾಗಿವೆ. ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯು ಸಮೂಹ ಬ್ಯಾಂಕಿಂಗ್ ಯೋಜನೆಯಡಿ ಸಾಲ ಮಂಜೂರು ಮಾಡಿದ ಘಟಕಗಳ ತಾಲೂಕುವಾರು ಉದ್ದಿಮೆವಾರು ವಿವರಗಳನ್ನು ಕೋಷ್ಟಕ ೫.೧೬ರಲ್ಲೂ ಹಾಗೂ ಮಂಡಳಿಯು ಮಂಜೂರು ಮಾಡಿದ ಮೊತ್ತದ ವಿವರಗಳನ್ನು ಕೋಷ್ಟಕ ೫.೧೭ರಲ್ಲೂ ನೀಡಲಾಗಿದೆ.

**ಕೋಷ್ಟಕ ೫.೧೬ : ಸಮೂಹ ಬ್ಯಾಂಕ್ ಯೋಜನೆಯಡಿ ತಾಲೂಕುವಾರು, ಉದ್ದಿಮೆವಾರು ಘಟಕಗಳ ಮಂಜೂರಾತಿ ವಿವರ**

| ಉದ್ದಿಮೆಯ ಹೆಸರು | ಘಟಕಗಳ ಸಂಖ್ಯೆ | | | | | |
|---|---|---|---|---|---|---|
| | ಮಂಗಳೂರು | ಬಂಟ್ವಾಳ | ಬೆಳ್ತಂಗಡಿ | ಪುತ್ತೂರು | ಸುಳ್ಯ | ಒಟ್ಟು |
| ಖನಿಜಾಧಾರಿತ ಉದ್ದಿಮೆಗಳು | | | | | | |
| ಖನಿಜಾಧಾರಿತ | ೨ | ೦ | ೦ | ೧ | ೦ | ೩ |
| ಹಣ್ಣು ಪರಿಷ್ಕರಣೆ | ೦ | ೨ | ೦ | ೦ | ೦ | ೨ |
| ಗ್ರಾಮೀಣ ಎಣ್ಣೆ | ೧ | ೦ | ೦ | ೦ | ೧ | ೨ |
| ರೂರಲ್ ಇಂಜಿನಿಯರಿಂಗ್ | ೪ | ೦ | ೧ | ೦ | ೦ | ೫ |
| ಬಿದಿರು ಮತ್ತು ಬೆತ್ತ | ೦ | ೦ | ೦ | ೧ | ೦ | ೧ |
| ಫೈಬರ್ ಮತ್ತು ಅಲ್ಯೂಮಿನಿಯಂ | ೦ | ೦ | ೧ | ೦ | ೧ | ೨ |
| ಒಟ್ಟು | ೭ | ೨ | ೨ | ೨ | ೨ | ೧೫ |

**ಕೋಷ್ಟಕ ೫.೧೭ : ಸಮೂಹ ಬ್ಯಾಂಕ್ ಯೋಜನೆಯಡಿ ಸಾಲ ಮಂಜೂರಾತಿ ಹಾಗೂ ಬಿಡುಗಡೆಯಾದ ಹಣದ ವಿವರ**

ರೂ. ಲಕ್ಷಗಳಲ್ಲಿ

| ಉದ್ದಿಮೆ | ಘಟಕ ಸಂಖ್ಯೆ | ಸಾಲ | ಆರ್ಥಿಕ ನೆರವು ನೀಡಿದ್ದು ಮಾರ್ಜಿನ್ ಮನಿ |
|---|---|---|---|
| ಖನಿಜಾಧಾರಿತ | ೩ | ೧೯.೪೯ | ೭.೧೪ |
| ಹಣ್ಣು ಪರಿಷ್ಕರಣೆ | ೨ | ೭.೨೯ | ೨.೩೫ |
| ರೂರಲ್ ಇಂಜಿನಿಯರಿಂಗ್ | ೫ | ೨೬.೫೪ | ೫.೮೩ |
| ಗ್ರಾಮೀಣ ಎಣ್ಣೆ | ೨ | ೨೨.೨೨ | ೪.೯೫ |
| ಬಿದಿರು ಮತ್ತು ಚಿತ್ರ | ೧ | ೨.೪೧ | ೦.೯೨ |
| ಫೈಬರ್ | ೧ | ೧೭.೪ | ೩.೭೦ |
| ಅಲ್ಯೂಮಿನಯಂ | ೧ | ೨.೭೭ | ೦.೯೩ |
| ಒಟ್ಟು | ೧೫ | ೯೮.೪೩ | ೨೫.೮೨ |

**ಅಂಚಿನ ಹಣ (ಆರ್.ಇ.ಜಿ.ಪಿ) ಯೋಜನೆ:** ಮಂಡಳಿಯು ೨೦೦೧–೦೨ ರಿಂದ ೩೧–೧೨–೨೦೦೪ ರವರೆಗೆ ಒಟ್ಟು ೮೮ ಕೈಗಾರಿಕಾ ಘಟಕಗಳಿಗೆ ರೂ. ೮೮.೬೦ ಲಕ್ಷ ಅಂಚಿನ ಹಣ ಬಿಡುಗಡೆ ಮಾಡಿದೆ. ಈ ಘಟಕಗಳ ಒಟ್ಟು ಯೋಜನಾ ವೆಚ್ಚ ರೂ. ೪೦೨.೧೯ ಲಕ್ಷಗಳಾಗಿದ್ದು, ಮಂಜೂರಾಗಿರುವ ಬ್ಯಾಂಕ್ ಸಾಲ ರೂ. ೩೧೩.೩೬ ಲಕ್ಷಗಳಾಗಿರುತ್ತದೆ. ಈ ಯೋಜನೆಯಲ್ಲಿ ೨೦೦೪–೦೫ನೇ ಸಾಲಿಗೆ ೪೨ ಘಟಕಗಳಿಗೆ ರೂ. ೪೨.೦೦ ಲಕ್ಷಗಳ ನೆರವು ನೀಡುವ ಗುರಿಹೊಂದಲಾಗಿದ್ದು, ೧೧ ಘಟಕಗಳಿಗೆ ರೂ. ೭.೮೪ ಲಕ್ಷಗಳ ಅಂಚಿನ ಹಣ ಮಂಜೂರಾಗಿತ್ತು. ವಿವರಗಳಿಗೆ ಕೋಷ್ಟಕ ೫.೧೮ ನೋಡಿ.

**ಕೋಷ್ಟಕ : ೫.೧೮ ಮಾರ್ಜಿನ್ ಮನಿ ಯೋಜನೆಯಡಿ ಉದ್ದಿಮೆವಾರು ಮಂಜೂರಾತಿ ವಿವರ**

| ಉದ್ದಿಮೆ | ಘಟಕಗಳ ಸಂಖ್ಯೆ | ಯೋಜನಾ ವೆಚ್ಚ | ಬ್ಯಾಂಕ್ ಸಾಲ | ಅಂಚು ಹಣ |
|---|---|---|---|---|
| ೧ | ೨ | ೩ | ೪ | ೫ |
| **೨೦೦೧–೨೦೦೨** | | | | |
| ಕೃಷಿ ಆಧಾರಿತ ಹಾಗೂ ಆಹಾರ ಉದ್ದಿಮೆ | ೧ | ೧೦.೦೦ | ೯.೩೬ | ೩.೦೦ |
| ಖನಿಜಾಧಾರಿತ ಉದ್ದಿಮೆ | ೨ | ೨೦.೦೦ | ೧೮.೦೦ | ೫.೦೦ |
| ಅರಣ್ಯಾಧಾರಿತ ಉದ್ದಿಮೆ | ೧ | ೧.೮೯ | ೧.೪೨ | ೦.೪೭ |
| ಸೇವಾ ಉದ್ದಿಮೆ | ೧ | ೨.೮೦ | ೧.೨೭ | ೦.೪೯ |
| **ಒಟ್ಟು** | ೫ | ೩೩.೬೯ | ೩೦.೦೫ | ೮.೯೬ |
| **೨೦೦೨–೨೦೦೩** | | | | |
| ಖನಿಜಾಧಾರಿತ ಉದ್ದಿಮೆ | ೩ | ೧೨.೫೫ | ೧೧.೧೦ | ೩.೦೭ |
| ಅರಣ್ಯಾಧಾರಿತ ಉದ್ದಿಮೆ | ೫ | ೧೪.೮೦ | ೯.೭೮ | ೩.೯೯ |
| ಕೃಷಿ ಆಧಾರಿತ ಹಾಗೂ ಆಹಾರ ಉದ್ದಿಮೆ | ೧೯ | ೧೦೩.೧೧ | ೭೪.೦೩ | ೨೫.೮೬ |
| ಪಾಲಿಮರ್ ಮತ್ತು ರಾಸಾಯನಿಕ ಆಧಾರಿತ ಉದ್ದಿಮೆಗಳು | ೧ | ೧೦.೦೦ | ೯.೫೦ | ೩.೦೦ |
| ಇಂಜೀನಿಯರಿಂಗ್ ಮತ್ತು ಅಸಂಪ್ರದಾಯಿಕ ಶಕ್ತಿ ಉದ್ದಿಮೆಗಳು | ೧೦ | ೫೨.೫೩ | ೩೬.೮೫ | ೧೫.೧೭ |
| ವಸ್ತ್ರೋದ್ಯಮ | ೨ | ೧.೬೬ | ೧.೪೫ | ೦.೫೨ |
| ಸೇವಾ ಉದ್ದಿಮೆಗಳು | ೧೪ | ೨೬.೧೧ | ೧೯.೨೭ | ೮.೧೭ |
| ಮಾರ್ಕೇಟಿಂಗ್ | ೧ | ೨.೦೦ | ೧.೦೦ | ೦.೩೦ |
| **ಒಟ್ಟು** | **೫೫** | **೨೨೨.೭೬** | **೧೬೨.೯೮** | **೬೦.೩೮** |

ಮುಂದುವರೆದಿದೆ....

| ೧ | ೨ | ೩ | ೪ | ೫ |
|---|---|---|---|---|
| ೨೦೦೩–೨೦೦೪ | | | | |
| ಕೃಷಿ ಆಧಾರಿತ ಹಾಗೂ ಆಹಾರ ಉದ್ದಿಮೆ | ೮ | ೬೬.೦೩ | ೪೯.೨೦ | ೧೧.೫೬ |
| ಇಂಜೀನಿಯರಿಂಗ್ ಮತ್ತು ಅಸಂಪ್ರದಾಯಿಕ ಶಕ್ತಿ ಉದ್ದಿಮೆಗಳು | ೧ | ೨.೦೦ | ೧.೮೫ | ೦.೪೪ |
| ಸೇವಾ ಉದ್ದಿಮೆಗಳು | ೮ | ೪೭.೨೧ | ೪೩.೮೩ | ೯.೪೨ |
| **ಒಟ್ಟು** | **೧೭** | **೧೧೫.೨೪** | **೯೪.೮೮** | **೨೧.೪೨** |
| ೨೦೦೪–೦೫ (೩೧–೧೨–೨೦೦೪ರವರೆಗೆ) | | | | |
| ಸೇವಾ ಉದ್ದಿಮೆಗಳು | ೧ | ೧.೦೦ | ೦.೮೦ | ೦.೭೫ |
| ಕೃಷಿ ಆಧಾರಿತ ಹಾಗೂ ಆಹಾರ ಉದ್ದಿಮೆ | ೧ | ೧.೬೦ | ೦.೫೦ | ೦.೧೬ |
| ಅರಣ್ಯಾಧಾರಿತ ಉದ್ದಿಮೆಗಳು | ೫ | ೧೫.೬೦ | ೧೩.೨೬ | ೪.೧೫ |
| ವಸ್ತ್ರೋದ್ಯಮ | ೨ | ೨.೩೦ | ೧.೬೦ | ೦.೫೧ |
| ಇಂಜೀನಿಯರಿಂಗ್ ಉದ್ದಿಮೆಗಳು | ೨ | ೬.೦೦ | ೯.೨೫ | ೨.೯೮ |
| **ಒಟ್ಟು** | **೧೧** | **೩೦.೫೦** | **೨೫.೪೧** | **೭.೮೪** |

## ಕೈಮಗ್ಗ

ದೇಶದ ಬಟ್ಟೆ ಉತ್ಪಾದನೆಯಲ್ಲಿ ಕೈಮಗ್ಗ ಕ್ಷೇತ್ರದ ಪಾತ್ರ ಅಮೂಲ್ಯವಾದುದು. ಇದು ಲಕ್ಷಾಂತರ ನೇಕಾರರಿಗೆ ಪೂರ್ಣಕಾಲದ ಉದ್ಯೋಗವನ್ನು ಕೊಡುತ್ತಿದೆ. ಭಾರತೀಯ ನೇಕಾರ ಪರಂಪರಾನುಗತವಾದ ನೇಯ್ಗೆಯನ್ನು ಮಾಡುತ್ತಿರುವುದರಿಂದ ನೇಯುವ ಕುಶಲತೆಯಲ್ಲಿ ಪ್ರಾವೀಣ್ಯತೆ ಪಡೆದಿದ್ದು. ಭಾರತದ ಕೈಮಗ್ಗದ ವಸ್ತುಗಳಿಗೆ ವಿದೇಶಗಳಲ್ಲಿ ಭಾರಿ ಬೇಡಿಕೆ ಇದೆ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೧೮೪೪ರಲ್ಲಿ ಬಾಸೆಲ್ ಮಿಷನ್ನಿನ ರೆವರೆಂಡ್ ಮಿಟ್ಜ್ (Rev.Metz) ನೇಯ್ಗೆಯನ್ನು ವಾಣಿಜ್ಯ ದೃಷ್ಟಿಯಿಂದ ಪ್ರಾರಂಭಿಸಿದ ಮೂಲ ಪುರುಷನಾಗಿದ್ದಾನೆ. ಮಂಗಳೂರು ತಾಲ್ಲೂಕಿನ ಸಲಿಯನ್ ಮತ್ತು ಜೆಡಾರ್ ಗ್ರಾಮಗಳಲ್ಲಿ "ಪಿಟ್–ಲೂಮ್"ನಲ್ಲಿ ನೇಯ್ಯುತ್ತಿದ್ದರು. ಆದರೆ ಕ್ರಿಶ್ಚಿಯನ್, ಮುಸ್ಲಿಂ, ಬಿಲ್ಲವ ಮತ್ತು ಬಂಟ್ ಮೂಲದ ನೇಕಾರರು ಬಾಸೆಲ್ ಮಿಷನರಿಸ್ ಆರಂಭಿಸಿದ ಫ್ರೇಮ್–ಲೂಮ್ ಬಳಸುತ್ತಿದ್ದರು. ಪಿಟ್–ಲೂಮ್‌ನಲ್ಲಿ ಗಂಡಸರಿಗೆ ಲುಂಗಿಯನ್ನು, ಮಹಿಳೆಯರಿಗೆ ಸೀರೆಗಳನ್ನು ನೇಯ್ಯುತ್ತಿದ್ದರೆ, 'ಫ್ರೇಮ್–ಲೂಮ್'ನಲ್ಲಿ ಮಹಿಳೆಯರಿಗೆ ಬಣ್ಣದ ಗೆರೆಗಳುಳ್ಳ ಸೀರೆಗಳನ್ನು, ಪುರುಷರಿಗೆ ಷರ್ಟಿಂಗ್, ಅಲ್ಲದೆ ಬೆಡ್–ಶೀಟ್‌ಗಳನ್ನು ನೇಯ್ಯುತ್ತಿದ್ದರು. ಜಿಲ್ಲೆಯಲ್ಲಿ ಬಸ್ರೂರು, ಜೆಪ್ಪು, ಪಡಿಲ್, ಕಂಕನಾಡಿ, ಕುಲಶೇಖರ, ಕೊನೆಬಾಡಿ, ಸುರತ್ಕಲ್, ಪಣಂಬೂರು, ಮುಲ್ಕಿ, ಕಿನ್ನಿಗೋಳಿ, ಮಿಜಾರ್, ಸಿದ್ಧಕಟ್ಟೆ ಹಳೆಅಂಗಡಿ, ಪಡು–ಪಣಂಬೂರು, ಬಂಟ್ವಾಳ, ಪಾಣೆ–ಮಂಗಳೂರು ಮುಂತಾದ ಸ್ಥಳಗಳು ಪ್ರಮುಖ ಕೈಮಗ್ಗ ನೇಕಾರಿಕಾ ಕೇಂದ್ರಗಳಾಗಿದ್ದವು. ಜಿಲ್ಲೆಯಲ್ಲಿ (ಅವಿಭಜಿತ) ೧೯೯೫–೯೬ರಲ್ಲಿ ಜರುಗಿದ ಕೈಮಗ್ಗದ ಗಣತಿಯ ಪ್ರಕಾರ ೧,೦೫೮ ಶೆಡ್ಯೂಲ್‌ಗಳಲ್ಲಿ ೨,೮೫೫ ಮಂದಿ ಈ ಕೈಮಗ್ಗಗಳಲ್ಲಿ ದುಡಿಯುತ್ತಿದ್ದರು. ಜಿಲ್ಲೆಯಲ್ಲಿ ಒಟ್ಟು ೧,೪೪೨ ಕೈಮಗ್ಗಗಳಿದ್ದು, ಅವುಗಳಲ್ಲಿ ೧,೩೫೬ ಮಗ್ಗಗಳು ಕೆಲಸ ಮಾಡುತ್ತಿದ್ದು, ೮೬ ಮಗ್ಗಗಳು ಮುಚ್ಚಲ್ಪಟ್ಟಿದ್ದವು. ಎಂಟು ಶೆಡ್ಯೂಲ್‌ಗಳಲ್ಲಿ ಒಟ್ಟು ೧೦ ವಿದ್ಯುತ್‌ಮಗ್ಗಗಳಿದ್ದವು. ಅವುಗಳಲ್ಲಿ ಎಂಟು ವಿದ್ಯುತ್ ಮಗ್ಗಗಳು ಕಾರ್ಯನಿರತವಾಗಿದ್ದವು. ಎರಡು ವಿದ್ಯುತ್ ಮಗ್ಗಗಳು ಮುಚ್ಚಿದ್ದವು. ವಿದ್ಯುತ್ ಮಗ್ಗಗಳಲ್ಲಿ ೧೫ ಮಂದಿ ಕಾರ್ಮಿಕರಿದ್ದರು. ಇವರಲ್ಲಿ ಏಳು ಮಂದಿ ಪುರುಷರು ಹಾಗೂ ಎಂಟು ಮಂದಿ ಮಹಿಳೆಯರೂ ಸೇರಿದ್ದರು.

## ಕರಕುಶಲ ಕಲೆಗಳು

ಕುಶಲಕಲೆಗಳು ಪುರಾತನ ಕಾಲದಿಂದಲೂ ಉಚ್ಚ್ರಾಯ ಸ್ಥಿತಿಯಲ್ಲಿದ್ದು, ಸೌಂದರ್ಯ ಪ್ರಜ್ಞೆಯುಳ್ಳ ಜನಗಳಿಂದಲೂ, ವಿವೇಚನಾಶೀಲರಾದ ರಾಜಮನೆತನಗಳಿಂದಲೂ ಪೋಷಿಸಲ್ಪಟ್ಟಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿವಿಧ ವರ್ಗಗಳಿಗೆ ಸೇರಿದ ಕುಶಲಕರ್ಮಿಗಳಿದ್ದು, ಇವರಲ್ಲಿ ಪ್ರಮುಖವಾಗಿ ಬಡಗಿಗಳು, ಕಮ್ಮಾರರು, ಕುಂಬಾರರು, ಕೈಮಗ್ಗ ನೇಯ್ಗೆಯವರು, ಬುಟ್ಟಿ ಹೆಣೆಯುವವರು, ಚಾಪೆ ಹೆಣೆಯುವವರು, ಸಮಗಾರರು, ಗಾಣಿಗರು, ಕಂಚುಗಾರರು, ಚಿನ್ನ, ಬೆಳ್ಳಿ ಕೆಲಸಗಾರರು, ಸುಣ್ಣ ತಯಾರಿಸುವವರು. ಹುರಿಹಗ್ಗ ತಯಾರಿಕೆ ಮಾಡುವವರು

ಮುಂತಾದವರು ಸೇರಿದ್ದಾರೆ. ಜಿಲ್ಲೆಯಲ್ಲಿರುವ ಗ್ರಾಮೀಣ ಕುಶಲಕರ್ಮಿಗಳ ಬಗ್ಗೆ ೧೯೮೩ರಲ್ಲಿ ಸರ್ವೆ ಮಾಡಿ ತಾಲೂಕುವಾರು ಕುಶಲಕರ್ಮಿಗಳ ಹಾಗೂ ಕುಟುಂಬಗಳ ಸಂಖ್ಯೆಯನ್ನು ಕೋಷ್ಟಕ ೫.೧೯ ರಲ್ಲಿ ನೀಡಿದೆ.

**ಕೋಷ್ಟಕ ೫.೧೯ : ದಕ್ಷಿಣ ಕನ್ನಡ ಜಿಲ್ಲೆಯಲ್ಲಿದ್ದ ಗ್ರಾಮೀಣ ಕುಶಲಕರ್ಮಿಗಳ ತಾಲೂಕುವಾರು ವಿವರ (೧೯೮೩ರ ಸರ್ವೆ ವರದಿ).**

| ಕ್ರ.ಸಂ | ವೃತ್ತಿ | ಮಂಗಳೂರು | | ಬಂಟ್ವಾಳ | | ಪುತ್ತೂರು | | ಸುಳ್ಯ | | ಬೆಳ್ತಂಗಡಿ | |
|---|---|---|---|---|---|---|---|---|---|---|---|
| | | ಕುಟುಂಬಗಳ ಸಂಖ್ಯೆ | ಕುಟುಂಬಗಳ ಸಂಖ್ಯೆ | ಕುಟುಂಬಗಳ ಸಂಖ್ಯೆ | ಕುಟುಂಬಗಳ ಸಂಖ್ಯೆ | ಕುಟುಂಬಗಳ ಸಂಖ್ಯೆ | ಕುಟುಂಬಗಳ ಸಂಖ್ಯೆ | ಕುಟುಂಬಗಳ ಸಂಖ್ಯೆ | ಕುಟುಂಬಗಳ ಸಂಖ್ಯೆ | ಕುಟುಂಬಗಳ ಸಂಖ್ಯೆ | ಕುಟುಂಬಗಳ ಸಂಖ್ಯೆ |
| ೧ | ೨ | ೩ಅ | ೩ಆ | ೪ಅ | ೪ಆ | ೫ಅ | ೫ಆ | ೬ಅ | ೬ಆ | ೭ಅ | ೭ಆ |
| ೧. | ಬಡಗಿಗಳು | ೫೩೬ | ೭೫೯ | ೩೭೭ | ೪೩೮ | ೧೬೭ | ೨೩೦ | ೧೪೬ | ೨೨೧ | ೧೧೭ | ೧೬೪ |
| ೨. | ಕಮ್ಮಾರರು | ೭೧ | ೯೬ | ೯೭ | ೧೦೩ | ೮೪ | ೧೨೮ | ೮೨ | ೧೧೪ | ೩೪ | ೫೩ |
| ೩. | ಕುಂಬಾರರು | ೧೪೩ | ೨೬೨ | ೭೬ | ೮೫ | ೧೯೫ | ೫೭೮ | ೩೦ | ೬೨ | ೨೪ | ೭೨ |
| ೪. | ಕೈಮಗ್ಗ ನೇಯ್ಗೆ | ೩೭೭ | ೭೮೩ | ೧೯ | ೩೫ | ೧ | ೨ | – | – | – | – |
| ೫. | ಬುಟ್ಟಿ ಹೆಣೆಯುವುದು | ೧೫೦ | ೨೨೫ | ೭೮ | ೮೪ | ೧೫೪ | ೩೪೭ | ೯೦ | ೧೩೬ | ೧೦೨ | ೧೫೫ |
| ೬. | ಚಾಪೆ ಹೆಣೆಯುವುದು | ೧೧ | ೧೧ | ೯೫ | ೧೦೦ | ೮೫ | ೧೮೨ | ೬೧ | ೧೦೭ | ೧೮ | ೩೫ |
| ೭. | ಸಮಗಾರರು | ೨೬ | ೩೩ | ೨೭ | ೨೯ | ೪೩ | ೫೫ | ೯ | ೧೧ | ೯ | ೯ |
| ೮. | ಗಾಣಿಗರು | ೧ | ೪ | – | – | – | – | – | – | – | – |
| ೯. | ಅಕ್ಕಸಾಲಿಗರು | ೨೦೦ | ೨೭೨ | ೧೪೨ | ೧೬೯ | ೭೧ | ೯೩ | ೨೭ | ೩೧ | ೨೬ | ೩೪ |
| ೧೦. | ಸುಣ್ಣ ತಯಾರಿಸುವುದು | ೮ | ೮ | ೬ | ೧೨ | ೩ | ೮ | ೪ | ೯ | – | – |
| ೧೧. | ಹುರಿಹಗ್ಗ ತಯಾರಿಕೆ | ೨೨ | ೫೩ | – | – | – | – | – | – | – | – |
| ೧೨. | ತಾಮ್ರ ಬೆಸುಗೆಯವರು | ೬ | ೮ | ೩ | ೩ | ೪ | ೪ | ೧೧ | ೧೨ | – | – |
| ೧೩. | ಕಂಚುಗಾರರು | – | – | ೨ | ೨ | – | – | – | – | – | – |
| ೧೪. | ಗಂಧದ ಕೆತ್ತನೆಗಾರರು | – | – | – | – | – | – | – | – | – | – |
| ೧೫ | ಶಿಲ್ಪಿಗಳು | – | – | – | – | – | – | – | – | – | – |
| ೧೬. | ಕೊಂಬಿನ ಕೆಲಸ | – | – | – | – | – | – | – | – | – | – |

## ಆಂತರಿಕ ಸಾಧನ ಸೌಲಭ್ಯಗಳು

ಯಾವುದೇ ಪ್ರದೇಶದಲ್ಲಿ ಕೈಗಾರಿಕಾಭಿವೃದ್ಧಿಯಾಗಬೇಕಾದರೆ ಪೂರಕ ಸೌಲಭ್ಯಗಳು ವಿಪುಲವಾಗಿರಬೇಕು. ಇದರಲ್ಲಿ ಸಾರಿಗೆ ಸೌಲಭ್ಯ ಒಂದು ಮಹತ್ವದ ಪೂರಕ ವ್ಯವಸ್ಥೆಯಾಗಿದೆ. ಜಿಲ್ಲೆಯಲ್ಲಿ ಉತ್ತಮವಾದ ೧೭೪.೨೦ ಕಿ.ಮೀ ಉದ್ದದ ರಾಷ್ಟ್ರೀಯ ಹೆದ್ದಾರಿ, ೩೪೨.೫೭ಕಿ.ಮೀ ಉದ್ದದ ರಾಜ್ಯ ಹೆದ್ದಾರಿಗಳಿರುವುದರಿಂದ ವಸ್ತುಗಳ ಸಾಗಣೆಯನ್ನು ಕ್ಷಿಪ್ರವಾಗಿ ಮಾಡಲು ಸಾಧ್ಯವಾಗಿದೆ.

ಮಂಗಳೂರುನಿಂದ ಮುಂಬೈಗೆ ಕೊಂಕಣ ರೈಲ್ವೆ ಮಾರ್ಗ, ಮಂಗಳೂರಿನಿಂದ ಕೊಚ್ಚಿನ್, ಮಂಗಳೂರು–ಚೆನ್ನೈಗಳಿಗೆ ರೈಲ್ವೆ ಸಂಪರ್ಕವಿರುವುದರಿಂದ ಸರಕು ಸಾಗಾಣಿಕೆಗೆ ಬಹಳ ಅನುಕೂಲವಾಗಿದೆ. ಬಂದರುಗಳ ಮೂಲಕ ವಿದೇಶಗಳಿಗೆ ಸರಕು ಸಾಗಿಸಲು ಬಂದರು ಸೌಲಭ್ಯವಿದೆ.

ಜಿಲ್ಲೆಯಲ್ಲಿ ಆರು ಇಂಜಿನಿಯರಿಂಗ್ ಕಾಲೇಜುಗಳು, ಐದು ವೈದ್ಯಕೀಯ ಕಾಲೇಜುಗಳು, ಆರು ಭಾರತೀಯ ವೈದ್ಯ ಪದ್ಧತಿ ಕಾಲೇಜುಗಳು, ಐದು ದಂತ ವೈದ್ಯಕಾಲೇಜುಗಳು, ಆರು ಪಾಲಿಟೆಕ್ನಿಕ್‌ಗಳು, ಕೈಗಾರಿಕಾ ತರಬೇತಿ ಶಾಲೆಗಳೂ ಇವೆ. ದಕ್ಷಿಣ ಕನ್ನಡ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದಲ್ಲಿ ೨೦೦೪–೦೫ರಲ್ಲಿ ೭೩೪೬ ಪದವೀಧರರು, ೧,೬೧೧ ಡಿಪ್ಲೋಮೋ ಪದವೀಧರರು, ೩,೧೩೫ ಕೈಗಾರಿಕಾ ತರಬೇತಿ ಪಡೆದವರು ನೋಂದಾಯಿಸಿಕೊಂಡಿದ್ದರು. ಹೀಗೆ ವೃತ್ತಿಪರ ಕೋರ್ಸುಗಳಲ್ಲಿ ಅಧ್ಯಯನ ಮಾಡಿರುವುದರಿಂದ ಜಿಲ್ಲೆಯಲ್ಲಿ ಕೈಗಾರಿಕೆಗಳಿಗೆ ಬೇಕಾದ ತಂತ್ರಜ್ಞರ ಕೊರತೆಯಿರುವುದಿಲ್ಲ.

ಜಿಲ್ಲೆಯಲ್ಲಿ ಬ್ಯಾಂಕಿಂಗ್ ಸೌಲಭ್ಯ ಅತ್ಯುತ್ತಮವಾಗಿದೆ. ಕೈಗಾರಿಕೆಗಳಿಗೆ ಬೇಕಾದ ಅಲ್ಪಾವಧಿ ಮತ್ತು ಮಧ್ಯಮಾವಧಿ ಸಾಲ ನೀಡುವುದಕ್ಕೆ ಸಮರ್ಥವಾಗಿರುವ ೨೮೭ ವಾಣಿಜ್ಯ ಬ್ಯಾಂಕುಗಳು, ೧೧ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು ಹಾಗೂ ೩೪ ಇತರೆ ಬ್ಯಾಂಕುಗಳಿದ್ದು, ಇವು ರೂ. ೧,೨೪,೭೮೪ ಲಕ್ಷಗಳನ್ನು ಆದ್ಯತಾ ರಂಗಕ್ಕೆ ಸಾಲ ನೀಡಿವೆ. ೪೫ ನಗರ ಪ್ರದೇಶದ ಸಹಕಾರ ಬ್ಯಾಂಕುಗಳು, ೨೮ ಇತರ ಸಹಕಾರ ಬ್ಯಾಂಕುಗಳು, ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳು ಕಾರ್ಯನಿರತವಾಗಿವೆ. ದೀರ್ಘಾವಧಿ ಸಾಲವನ್ನು ನೀಡುವುದಕ್ಕೆ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯು ನಿರತವಾಗಿದೆ. ಆದ್ದರಿಂದ ಕೈಗಾರಿಕಾಭಿವೃದ್ಧಿಗೆ ಅಗತ್ಯವಾದ ಎಲ್ಲ ರೀತಿಯ ಸಾಲ ಸೌಲಭ್ಯ ದೊರೆಯುವುದಕ್ಕೆ ಅವಕಾಶವಿದೆ

ಜಿಲ್ಲೆಯಲ್ಲಿ ಕೈಗಾರಿಕಾಭಿವೃದ್ಧಿಯನ್ನು ಚುರುಕುಗೊಳಿಸುವುದಕ್ಕಾಗಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಬೈಕಂಪಾಡಿ, ಕಾರ್ನಾಡ್ ಹಾಗೂ ಪುತ್ತೂರು ಕೈಗಾರಿಕಾ ಪ್ರದೇಶಗಳನ್ನು ಈಗಾಗಲೇ ಅಭಿವೃದ್ಧಿಗೊಳಿಸಿದೆ.

**೧) ಪುತ್ತೂರು ಕೈಗಾರಿಕಾ ಪ್ರದೇಶ**: ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಪುತ್ತೂರು ತಾ॥ ಕೆಮ್ಮಿಂಜೆಯಲ್ಲಿ ೨೧.೭೮ ಎಕರೆ ಪ್ರದೇಶವನ್ನು ವಶಪಡಿಸಿಕೊಂಡು ೧೩.೨೮ ಎಕ್ರೆ ಪ್ರದೇಶವನ್ನು ಕೆ.ಎಸ್.ಆರ್.ಟಿ.ಸಿ. ಬಸ್ ಡಿಪೋಗೆ ನೀಡಲಾಗಿದೆ. ಉಳಿದ ಪ್ರದೇಶದಲ್ಲಿ ೩೩ ಪ್ಲಾಟ್‌ಗಳನ್ನು ನಿರ್ಮಿಸಿ ತನ್ನ ಸದಸ್ಯರುಗಳಿಗೆ ವಿತರಿಸಿದೆ. ಇಲ್ಲಿ ಈಗಾಗಲೇ ಕೆಲವು ಕೈಗಾರಿಕೆಗಳು ಉತ್ಪಾದನೆಯನ್ನು ಆರಂಭಿಸಿವೆ. ಇಲ್ಲಿ ಪ್ರಸ್ತುತ ಪ್ರತಿ ಎಕರೆಯ ಮೌಲ್ಯ ರೂ. ೫೨,೨೦೦ ಗಳಾಗಿದೆ.

**೨) ಬೈಕಂಪಾಡಿ ಕೈಗಾರಿಕಾ ಪ್ರದೇಶ**: ಈ ಕೈಗಾರಿಕಾಭಿವೃದ್ಧಿ ಪ್ರದೇಶಗಳಲ್ಲಿ ೯೪೧.೭೭ ಎಕರೆ ಪ್ರದೇಶವನ್ನು ೧೯೬೯–೭೦ರಲ್ಲಿ ವಶಪಡಿಸಿಕೊಂಡು, ಅಭಿವೃದ್ಧಿಪಡಿಸಲಾಗಿದೆ. ಒಟ್ಟು ೯೪೧.೭೭ ಎಕರೆ ಪ್ರದೇಶದಲ್ಲಿ ೨೦೦ ಎಕರೆ ಭೂಮಿಯನ್ನು ಮಂಗಳೂರು ಕೆಮಿಕಲ್ಸ್ ಅಂಡ್ ಫರ್ಟಿಲೈಸರ್ಸ್ ಕಂಪನಿಗೆ ವಿತರಿಸಿದೆ. ೧೫೭೧೬ ಎಕರೆ ಹಾಗೂ ೩೮.೫೯ ಎಕರೆ ಭೂಮಿಯನ್ನು ಕ್ರಮವಾಗಿ ಕೆಐ.ಓ.ಸಿ.ಎಲ್ (ಏಙಔಲಐ) ಹಾಗೂ ಕೆ.ಎಸ್.ಎಸ್.ಐ.ಡಿ.ಸಿ.ಗೆ ಹಂಚಲಾಗಿದೆ. ಉಳಿದ ಭೂಮಿಯಲ್ಲಿ ೪೭೦ ಪ್ಲಾಟ್‌ಗಳನ್ನು ರಚಿಸಲಾಗಿದೆ. ೪೬೩ ಘಟಕಗಳು ಸ್ಥಾಪನೆಗೊಂಡಿವೆ. ಈ ಕೈಗಾರಿಕಾ ಪ್ರದೇಶದಲ್ಲಿ ನೀರು ಸರಬರಾಜು, ಒಳಚರಂಡಿ ವ್ಯವಸ್ಥೆ, ರಸ್ತೆ, ರಸ್ತೆ ದೀಪ ಮುಂತಾದ ಇತರೆ ನಾಗರೀಕ ಸೌಲಭ್ಯಗಳ ಕಡೆಗೆ ಗಮನ ಹರಿಸಲಾಗಿದೆ. ಈ ಪ್ರದೇಶಕ್ಕೆ ಮೆಸ್ಕಾಂನಿಂದ ಒಂದು ಉಪ ಕೇಂದ್ರ, ಅರಕ್ಷಕ ಠಾಣೆ, ಬಸ್ಸು ಸೌಲಭ್ಯ ಮುಂತಾದವನ್ನು ಒದಗಿಸಲಾಗಿದೆ. ಕರ್ನಾಟಕ ನಗರ ನೀರು ಸರಬರಾಜು ಮಂಡಳಿ ವತಿಯಿಂದ ನೀರು ಸರಬರಾಜು ಮಾಡಲಾಗುತ್ತಿದ್ದು, ಈ ಕೈಗಾರಿಕಾ ಪ್ರದೇಶದ ನೀರಿನ ಬಳಕೆ ೦.೫೦ ಎಂ.ಜಿ.ಡಿ. ಆಗಿದೆ. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಉದ್ಯಮಿಗಳಿಗಾಗಿ ೮೦ ಮನೆಗಳನ್ನು ಬಾಡಿಗೆಗಾಗಿ ನಿರ್ಮಿಸಿದೆ. ಅದರಲ್ಲಿ ಶೇ. ೯೦ರಷ್ಟು ಮನೆಗಳನ್ನು ಹಂಚಿಕೆ ಮಾಡಲಾಗಿದೆ.

**೩) ಕಾರ್ನಾಡ್ ಕೈಗಾರಿಕಾ ಪ್ರದೇಶ**:– ಈ ಕೈಗಾರಿಕಾ ಪ್ರದೇಶದಲ್ಲಿ ಒಟ್ಟು ೮೫.೦೨ ಎಕರೆ ಪ್ರದೇಶವನ್ನು ವಶಪಡಿಸಿಕೊಂಡು, ೭೧ ಪ್ಲಾಟ್‌ಗಳನ್ನು ನಿರ್ಮಿಸಲಾಗಿದೆ. ಒಂದು ಎಕರೆ ಪ್ರದೇಶದಲ್ಲಿ ಅಂಚೆ ಕಚೇರಿ, ಬ್ಯಾಂಕು, ಅಗ್ನಿಶಾಮಕ ಘಟಕ, ಹೋಟೇಲ್ ಮುಂತಾದವು ಈಗಾಗಲೇ ೪೦ ಘಟಕಗಳು ಉತ್ಪಾದನೆಯನ್ನು ಪ್ರಾರಂಭಿಸಿವೆ. ವಿದ್ಯುತ್ ಸೌಲಭ್ಯ, ಸಾರಿಗೆ–ಸಂಪರ್ಕ ಕಲ್ಪಿಸಲಾಗಿದೆ. ಹೆಚ್ಚಿನ ವಿವರಗಳಿಗೆ ಕೋಷ್ಟಕ ೫.೨೦ ಅನ್ನು ನೋಡಿ.

**ಕೋಷ್ಟಕ ೫.೨೦ : ಕೆ.ಐ.ಎ.ಡಿ.ಬಿ.ಯವರಿಂದ ಹಾಲಿ ಅಭಿವೃದ್ಧಿಗೊಳಿಸಲ್ಪಟ್ಟ ಕೈಗಾರಿಕಾ ಪ್ರದೇಶಗಳು**

| ಕ್ರ.ಸಂ | ವಿವರ | ಬೈಕಂಪಾಡಿ | ಕಾರ್ನಾಡ್ | ಪುತ್ತೂರು |
|---|---|---|---|---|
| ೧. | ಸ್ವಾಧೀನಪಡಿಸಿಕೊಂಡಿರುವ ಜಮೀನಿನ ವಿಸ್ತೀರ್ಣ ಹಾಗೂ ವಶಕ್ಕೆ ಪಡೆದುಕೊಂಡ ಜಮೀನಿನ ವಿಸ್ತೀರ್ಣ | ೯೪೧.೭೭ | ೮೫.೦೨ | ೧೩.೨೮ |
| ೨. | ಬಡಾವಣೆ ನಿರ್ಮಿಸಲ್ಪಟ್ಟ: ಅಭಿವೃದ್ಧಿಗೊಳಿಸಲ್ಪಟ್ಟ ಜಮೀನ ವಿಸ್ತೀರ್ಣ | ೫೪೬.೦೨ | ೮೫.೦೨ | ೧೩.೨೮ |
| ೩. | ಈಗಾಗಲೇ ಹಂಚಿಕೆ ಮಾಡಲಾಗಿರುವ ನಿವೇಶನದ ವಿಸ್ತೀರ್ಣದ ವಿವರಗಳು | ೪೬೩.೦೦ | ೪೪.೮೭ | ೧೧.೭೦ |
| ೪. | ಖಾಲಿಯಿರುವ ನಿವೇಶನಗಳ ಸಂಖ್ಯೆ ಮತ್ತು ನಿವೇಶನದ ವಿಸ್ತೀರ್ಣದ ವಿವರಗಳು | ೧೮<br>೧೮.೦೫ ಎಕರೆಗಳು | ೩<br>೨೦ಎಕರೆಗಳು | ೧<br>೦.೨೫ಎಕರೆಗಳು |
| ೫. | ಎಕರೆ ಒಂದಕ್ಕೆ ನಿರ್ದಿಷ್ಟಪಡಿಸಲಾದ ಮೊತ್ತ (ಲಕ್ಷಗಳಲ್ಲಿ) | ೧೨.೦೦ | ೪.೦೦ | ೦.೫೨ |

**ಕೋಷ್ಟಕ ೫.೨೧ : ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ಅಭಿವೃದ್ಧಿಗೊಳಿಸಿರುವ ಕೈಗಾರಿಕಾ ವಸಾಹತುಗಳ ವಿವರ**

| ಕ್ರ.ಸಂ | ತಾಲೂಕು | ಗ್ರಾಮ | ನಿರ್ಮಿಸಲಾದ ಶೆಡ್ಡುಗಳ ಸಂಖ್ಯೆ | | | | | | ಹಂಚಿಕೆಯಾದ ಶೆಡ್ಡುಗಳ ಸಂಖ್ಯೆ | ಖಾಲಿಯಿರುವ ಶೆಡ್ಡುಗಳ ಸಂಖ್ಯೆ |
|---|---|---|---|---|---|---|---|---|---|---|
| | | | ಬಿ | ಸಿ | ಡಿ | ಎಂ | ಎಸ್.ಎಂ | ಒಟ್ಟು | ಶೆಡ್ಡುಗಳ ಸಂಖ್ಯೆ | ನವೆಂಬರ್–೨೦೦೪ರ ವರೆಗೆ |
| ೧. | ಮಂಗಳೂರು | ಎಯ್ಯಾಡಿ | ೩ | ೩೩ | ೬ | ೮ | ೮ | ೫೮ | ೫೮ | ೧ |
| ೨. | ಮಂಗಳೂರು | ಬೈಕಂಪಾಡಿ | ೩೮ | ೬೭ | ೩೪ | ೨೦ | ೨೪ | ೧೮೨ | ೧೭೮ | ೪ |
| ೩. | ಮುಲ್ಕಿ | ಕಾರ್ನಾಡ್ | ೨ | ೪ | – | – | ೧೦ | ೧೬ | ೪ | ೧೨ |
| ೪. | ಮೂಡಬಿದ್ರೆ | ಮೂಡಬಿದ್ರೆ | – | ೪ | ೪ | – | – | ೦೮ | ೮ | – |
| ೫. | ಬೆಳ್ತಂಗಡಿ | ಲೈಲಾ | – | ೩ | – | – | ೭ | ೧೦ | ೫ | ೫ |
| | | | ೪೩ | ೧೦೭ | ೪೪ | ೨೮ | ೪೯ | ೨೭೪ | ೨೫೩ | ೨೨ |

**ಕೋಷ್ಟಕ ೫.೨೨ : ರಲ್ಲಿ ಕೆ.ಎಸ್.ಎಸ್.ಐ.ಡಿ.ಸಿ ಇಂದ ಅಭಿವೃದ್ಧಿಗೊಂಡ ಕೈಗಾರಿಕಾ ವಸಾಹತುಗಳ ವಿವರ**

| ಕ್ರ.ಸಂ | ಶೆಡ್ಡಿನ ವಿವರಗಳು | ವಿಸ್ತೀರ್ಣ ಚದರ ಅಡಿಗಳಲ್ಲಿ | ಶೆಡ್ಡಿನ ಬೆಲೆ (ಲಕ್ಷಗಳಲ್ಲಿ) | ಮಾಸಿಕ ಕಂತುಗಳು (ರೂ.ಗಳು) |
|---|---|---|---|---|
| ೧. | ಬಿ | ೨,೪೮೦ | ೧೦.೦೦ | ೨೨,೦೦೦ |
| ೨. | ಸಿ | ೧,೫೦೦ | ೭.೦೦ | ೧೭,೦೦೦ |
| ೩. | ಡಿ | ೭೫೦ | ೫.೫೦ | ೮,೦೦೦ |
| ೪. | ಎಂ | ೨೪೦ | ೨.೦೦ | ೩,೦೦೦ |
| ೫. | ಎಸ್. ಎಂ | ೪೮೦ | ೩.೫೦ | ೬,೦೦೦ |

ಮಂಗಳೂರು ತಾ॥ ಗಂಜಿಮಠದ ಬಳಿ ಇ.ಪಿ.ಐ.ಪಿ. (Export Promotional Industrial Park) ಗಾಗಿ ೨೦೩ ಎಕರೆ ಜಮೀನಿನ ಭೂಸ್ವಾಧೀನ ಪ್ರಕ್ರಿಯೆ ಮುಗಿದಿದ್ದು, ಭೂ ಪರಿಹಾರ ವಿತರಣೆ ಹಂತದಲ್ಲಿದೆ. ಹಾಗೆಯೇ ಬಂಟ್ವಾಳ ತಾ॥ ಪಜೀರ್ ಮತ್ತು ಕೈರಂಗಳಲ್ಲಿ ಮಾಹಿತಿ ಮತ್ತು ತಂತ್ರಜ್ಞಾನ (I.T.) ಪಾರ್ಕ್ ನಿರ್ಮಿಸಲು ೫೦೦ ಎಕರೆ ಪ್ರದೇಶವನ್ನು ಗುರ್ತಿಸಲಾಗಿದೆ.

**ಕೆ.ಐ.ಎ.ಡಿ.ಬಿ.ಯವರಿಂದ ಗುರುತಿಸಲಾದ ಹೊಸ ಕೈಗಾರಿಕಾ ಪ್ರದೇಶದ ವಿವರಗಳು**

| ಕ್ರ. ಸಂ. | ತಾಲೂಕು | ಗ್ರಾಮ | ಅಭಿವೃದ್ಧಿಗೊಳಿಸಲು ಪ್ರಸ್ತಾಪಿಸಲಾದ ವಿವರಗಳು ಎಕರೆಗಳಲ್ಲಿ | ಷರಾ |
|---|---|---|---|---|
| ೧. | ಮಂಗಳೂರು | ಗಂಜಿಮಠ | ೨೦೩ | ಕೆ.ಐ.ಎ.ಡಿ.ಬಿ.ಯವರಿಂದ ಈ.ಪಿ.ಐ.ಪಿ.ಗಾಗಿ ಗುರುತಿಸಲ್ಪಟ್ಟ ಜಮೀನು ಭೂಸ್ವಾಧೀನ ಪ್ರಕ್ರಿಯ ಭೂ ಪರಿಹಾರ ಪಾವತಿ ಹಂತದಲ್ಲಿರುತ್ತದೆ. |

## ಹೋಟೆಲ್ ಉದ್ಯಮ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೋಟೆಲ್ ಉದ್ಯಮವು ಒಂದು ಪ್ರತಿಷ್ಠಿತ ಉದ್ಯೋಗವಾಗಿದ್ದು, ಜಿಲ್ಲೆಯ ಆರ್ಥಿಕ ಪ್ರಗತಿಗೆ ಪೂರಕವಾಗಿದೆ. ಮಂಗಳೂರು ರಿಫೈನರಿ, ಮಂಗಳೂರು ರಾಸಾಯನಿಕ ಗೊಬ್ಬರ ಕಾರ್ಖಾನೆ, ಕ್ಯಾಂಪ್ಕೊ ಚಾಕಲೇಟ್, ಕುದುರೆಮುಖ ಕಬ್ಬಿಣದ ಅದಿರು ಕಾರ್ಖಾನೆ, ಕುದುರೆಮುಖ ಅದಿರು ಮತ್ತು ಸ್ಟೀಲ್ ಕಂಪನಿ ಮುಂತಾದ ಕಾರ್ಖಾನೆಗಳಿಂದಲೂ, ಧರ್ಮಸ್ಥಳ, ಕುಕ್ಕೆಸುಬ್ರಹ್ಮಣ್ಯ, ಕಟೀಲು, ಸುರತ್ಕಲ್, ಉಳ್ಳಾಲ್, ಪಣಂಬೂರು ಮುಂತಾದ ಪ್ರೇಕ್ಷಣೀಯ ಸ್ಥಳಗಳಿಂದಲೂ, ವೈದ್ಯಕೀಯ ಹಾಗೂ ಇಂಜಿನಿಯರಿಂಗ್ ಕಾಲೇಜುಗಳಿಂದಲೂ ಹಾಗೂ ನರ್ಸಿಂಗ್‌ಹೋಂಗಳು, ಜಿಲ್ಲೆಯು ಪ್ರವಾಸಿಗರನ್ನು, ಭಕ್ತಾದಿಗಳನ್ನು, ಉದ್ಯೋಗಾಕಾಂಕ್ಷಿಗಳನ್ನು, ವಿದ್ಯಾರ್ಥಿಗಳನ್ನು, ಸೂಜಿಗಲ್ಲಿನಂತೆ ಆಕರ್ಷಿಸುತ್ತಿದೆ, ಹೋಟೆಲ್ ಉದ್ಯಮವು ಉಪಹಾರ, ಊಟ ಮತ್ತು ವಸತಿ ಸೌಲಭ್ಯಗಳನ್ನು ಒದಗಿಸುತ್ತಿದೆ. ಮಂಗಳೂರು, ದೇಶ–ವಿದೇಶಗಳಲ್ಲಿ ಜನಪ್ರಿಯವಾಗಿರುವುದರಿಂದ ಇಲ್ಲಿಗೆ ಬಂದು ಹೋಗುವ ಜನರಿಗಾಗಿ ತಾರಾ ಹೋಟೆಲ್ ಸಹ ಸ್ಥಾಪನೆಗೊಂಡಿವೆ. ಜಿಲ್ಲೆಯ ಏಕೈಕ ಪಂಚತಾರಾ ಹೋಟೆಲಾದ ಮಂಜೂರನ್ ಮಂಗಳೂರಿನ ಹಳೆಯ ಫೋರ್ಟ್ ರಸ್ತೆಯಲ್ಲಿದೆ. ಅಲ್ಲದೆ ತ್ರಿತಾರ ಹೋಟೆಲುಗಳು, ಮಂಗಳೂರು (ಮೋತಿಮಹಲ್) ಪುತ್ತೂರು (ಮೋತಿಮಹಲ್) ಉಪ್ಪಿನಂಗಡಿ (ಹೋಟೆಲ್ ಆದಿತ್ಯ ರೆಸ್ಟೋರೆಂಟ್, ಆದಿತ್ಯ ವಸತಿ ಗೃಹ, ಹಾಗೂ ಸುಳ್ಯ (ಹೋಟೆಲ್ ಸದರನ್ ರೆಸಿಡೆನ್ಸಿ, ಹೋಟೆಲ್ ಸನ್ನಿಧಿ) ಗಳಲ್ಲಿವೆ. ಬಂಟ್ವಾಳ ಹಾಗೂ ಬೆಳ್ತಂಗಡಿ ತಾಲೂಕುಗಳಲ್ಲಿ ಯಾವುದೇ ಪಂಚತಾರಾ ಹೋಟೆಲ್‌ಗಳಾಗಲೀ, ತ್ರಿತಾರ ಹೋಟೆಲ್‌ಗಳಾಗಲೀ ಇರುವುದಿಲ್ಲ. ಜಿಲ್ಲೆಯಲ್ಲಿ ೨೦೦೪–೦೫ರಲ್ಲಿದ್ದ ತಾಲೂಕುವಾರು ಹೋಟೆಲ್‌ಗಳ ಸಂಖ್ಯೆಯನ್ನು ಹೋಲಿಸಿದಾಗ ೬೫೫ ಹೋಟೆಲ್ ಮಂಗಳೂರು ತಾಲೂಕಿನಲ್ಲಿವೆ. ಅತಿ ಕಡಿಮೆ ಹೋಟಲ್‌ಗಳು (೭೩) ಬೆಳ್ತಂಗಡಿ ತಾಲೂಕಿನಲ್ಲಿವೆ. ಹೆಚ್ಚಿನ ವಿವಗಳಿಗೆ ಕೋಷ್ಟಕ ೫.೨೩ ರಲ್ಲಿ ನೋಡಿ.

**ಕೋಷ್ಟಕ ೫.೨೩ : ಜಿಲ್ಲೆಯ ತಾಲೂಕುವಾರು ಹೋಟೆಲ್ ಹಾಗೂ ಕಾರ್ಮಿಕರ ವಿವರ**

| ಕ್ರ.ಸಂ | ತಾಲ್ಲೂಕಿನ ಹೆಸರು | ೨೦೦೩–೦೪ | | ೨೦೦೪–೦೫ | |
|---|---|---|---|---|---|
| | | ಹೋಟೆಲ್‌ಗಳ ಸಂಖ್ಯೆ | ಕಾರ್ಮಿಕರ ಸಂಖ್ಯೆ | ಹೋಟೆಲ್‌ಗಳ ಸಂಖ್ಯೆ | ಕಾರ್ಮಿಕರ ಸಂಖ್ಯೆ |
| ೧. | ಮಂಗಳೂರು | ೬೦೩ | ೪,೨೩೭ | ೬೫೫ | ೪,೪೩೪ |
| ೨. | ಬಂಟ್ವಾಳ | ೧೦೬ | ೩೧೮ | ೧೨೨ | ೩೨೭ |
| ೩. | ಬೆಳ್ತಂಗಡಿ | ೮೦ | ೨೭೦ | ೭೩ | ೨೬೩ |
| ೪. | ಪುತ್ತೂರು | ೧೧೫ | ೪೭೯ | ೧೧೭ | ೪೮೫ |
| ೫. | ಸುಳ್ಯ | ೭೫ | ೨೪೧ | ೭೬ | ೨೪೪ |